
ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 31
ಜುಲೈ 29, 2012


ಪುಟ 16 ರೂ. 5/-





ರಾಜಕೀಯ ಅಸ್ಥಿರತೆ ಬಿಜೆಪಿ ಬಳುವಳಿ

ಬರುತ್ತಿದೆ! ತುತ್ತು ಕಿತ್ತುಕೊಳ್ಳುವ ಕಾಯ್ದೆ!



ಶಿಕ್ಷಣ ಮಾಫಿಯಾ ಭಂಡತನ ಕೈಕಟ್ಟಿ ನಿಂತ ಸರ್ಕಾರ

ಬಹುದಿನಗಳ ಮುಷ್ಕರದೆಡೆಗೆ ಕಾರ್ಮಿಕ ವರ್ಗ



ಡಿಪ್ಲಮೋ ವಿದ್ಯಾರ್ಥಿಗಳ ಮೇಲೆ ಪೊಲೀಸರ ಹಲ್ಲೆ

ಬರ ನಿರ್ವಹಣೆಗೆ ಆದ್ಯತೆ ಸಿಕ್ಕೀತೆ?



ಒಬಾಮಾ ಒತ್ತಡಗಳಿಗೆ ಮಣಿಯಬಾರದು ಭಾರತ

ಜನಶಕ್ತಿ
ಕನ್ನಡ ವಾರಪತ್ರಿಕೆ

ಡಿಪ್ಲೊಮೊ ವಿದ್ಯಾರ್ಥಿಗಳ ಪ್ರತಿಭಟನೆ- ಪೋಲೀಸ್ ಲಾಠಿಚಾರ್ಜ್ ಹಲವರ ಬಂಧನ – ಸಚಿವರ ಭೇಟಿ – ಬೇಡಿಕೆಗಳ ಈಡೇರಿಕೆಗೆ ಭರವಸೆ

ತಾಂತ್ರಿಕ ಶಿಕ್ಷಣ ಮಂಡಳಿಯಲ್ಲಿರುವ ಅವ್ಯವಸ್ಥೆಯನ್ನು ಸರಿಪಡಿಸಿ ಕಾಲೇಜುಗಳಿಗೆ ಬೇಕಾದ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸಬೇಕು, ಪದವಿಯ ರೀತಿಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಬೇಕೆಂದು ಆಗ್ರಹಿಸಿ ಮತ್ತು ಇತರ ಡಿಪ್ಲೊಮ ವಿದ್ಯಾರ್ಥಿಗಳ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ) ನೇತೃತ್ವದಲ್ಲಿ ರಾಜಧಾನಿ ಬೆಂಗಳೂರು ನಗರದಲ್ಲಿ ಜುಲೈ 19 2012 ರಂದು ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿ ಮುಖಂಡರ ಮೇಲೆ ಪೋಲೀಸರು ಏಕಾಏಕಿ ಲಾಠಿಚಾರ್ಜ್ ನಡೆಸಿ ಎಸ್.ಎಫ್.ಐ. ರಾಜ್ಯಾಧ್ಯಕ್ಷರಾದ ಅನಂತನಾಯ್ಕ್, ಮುಖಂಡರಾದ ಗುರುರಾಜ್, ಅಂಬರೀಶ್, ಬಸವರಾಜ್ ಸೂಜಾರ್, ಗ್ಯಾನೇಶ್, ಮುನೇಂದ್ರ, ಅರವಿಂದ ಸೇರಿದಂತೆ 9 ಜನ ಎಸ್‌ಎಫ್‌ಐ ಮುಖಂಡರನ್ನು ಬಂಧಿಸಿದ ಅಘಾತಕಾರಿ ಘಟನೆ ನಡೆದಿದೆ. ಈ ದೌರ್ಜನ್ಯಕಾರಿ ಲಾಠಿಚಾರ್ಜ್, ಬಂಧನವನ್ನು ಖಂಡಿಸಿ ನೂರಾರು ವಿದ್ಯಾರ್ಥಿಗಳು ಮತ್ತೆ ಟೌನ್‌ಹಾಲ್ ಮುಂದೆ ಜಮಾಯಿಸಿ ಪ್ರತಿಭಟನೆ ನಡೆಸಿದ್ದಾರೆ.

ಇಲ್ಲಿ ಡಿಪ್ಲೊಮೋ ವಿದ್ಯಾರ್ಥಿಗಳ ಗಂಭೀರ ಸಮಸ್ಯೆ ಬಗೆಹರಿಸಿ ಎಂದು ವಿದ್ಯಾರ್ಥಿಗಳು ಕೇಳಿದರೆ ಲಾಠಿ ಪ್ರಹಾರ, ಬಂಧನದ ಬಹುಮಾನ ದೊರಕುತ್ತದೆ. ಆದರೂ ವಿದ್ಯಾರ್ಥಿ ಚಳುವಳಿ ಹಿಮ್ಮೆಟ್ಟದೇ ಮುಂದೆ ಹೆಜ್ಜೆ ಇಟ್ಟಿದೆ. ಹೋರಾಟ ಮುಂದೆ ನಡೆದಿದೆ.



ಕರ್ನಾಟಕ ರಾಜ್ಯದ ತಾಂತ್ರಿಕ ಶಿಕ್ಷಣ ಮಂಡಳಿ(DTE)ಯು ಡಿಪ್ಲೊಮೋ ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಿದೆ. ರಾಜ್ಯದಲ್ಲಿ ಶೇ60ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಮುಂದಿನ ಸೆಮಿಸ್ಟರ್‌ಗೆ ಮುಂದುವರೆಯಲು ಅರ್ಹತೆ ಹೆಸರಿನಲ್ಲಿ ಬಹುಸಂಖ್ಯಾತ ವಿದ್ಯಾರ್ಥಿಗಳನ್ನು ಶಿಕ್ಷಣದಿಂದ ವಂಚಿತರನ್ನಾಗಿಸಲು ಡಿಟಿಇ ಯು ನಿರ್ಧರಿಸಿದೆ. ತೀವ್ರ ಅವ್ಯವಸ್ಥೆಯ ಆಗರವಾಗಿರುವ ಡಿಪ್ಲೊಮೋ ಶಿಕ್ಷಣವನ್ನು ಸರಿಪಡಿಸಲು ಸೋತಿರುವ ಸರ್ಕಾರವು, ವಿದ್ಯಾರ್ಥಿಗಳ ಮೇಲೆ ಗೂಬೆ ಕೂರಿಸಿ ಅವರ ಭವಿಷ್ಯದೊಂದಿಗೆ ಚೆಲ್ಲಾಟವಾಡುತ್ತಿದೆ.

ತಾಂತ್ರಿಕ ಶಿಕ್ಷಣ ಮಂಡಳಿಯ ಅವೈಜ್ಞಾನಿಕ ನೀತಿಗಳಿಂದ ಸಾವಿರಾರು ವಿದ್ಯಾರ್ಥಿಗಳು ಬೀದಿಪಾಲಾಗುವ ಪರಿಸ್ಥಿತಿ ಉಂಟಾಗಿದೆ. ವಿದ್ಯಾರ್ಥಿಗಳಿಗೆ ಹೊರಲಾರದಷ್ಟು, ಕಠಿಣವಾದ ಹೊಸ ಪಠ್ಯಕ್ರಮವನ್ನು ನಿಗದಿ ಮಾಡಲಾಗಿದೆ. ರಾಜ್ಯದಲ್ಲಿ ಹೊಸ ಪಠ್ಯಕ್ರಮಕ್ಕನುಗುಣವಾಗಿ ಭೋದನೆ ಮಾಡುವ ಅರ್ಹ ಉಪನ್ಯಾಸಕರ ಕೊರತೆಯಿದೆ ಹಾಗೂ ಅದಕ್ಕೆ ಬೇಕಾಗುವ ಅಧ್ಯಯನ ಸಾಮಾಗ್ರಿಗಳ ಕೊರತೆಯಿದೆ. ರಾಜ್ಯದಲ್ಲಿ ಪಾಲಿಟೆಕ್ನಿಕ್ ಶಿಕ್ಷಣ ಸಂಪೂರ್ಣವಾಗಿ ಮಾರಾಟವಾಗುತ್ತಿದೆ, ವಿಪರೀತ ಶುಲ್ಕ ವಸೂಲಿ, ಹಾಜರಾತಿ, ಆಂತರಿಕ ಅಂಕಗಳ ಹೆಸರಿನಲ್ಲಿ ವಿದ್ಯಾರ್ಥಿಗಳಿಗೆ ಕಿರುಕುಳ ನೀಡುವುದು ಮತ್ತು ಹಣ ಸುಲಿಗೆ ಮಾಡುವುದು ಯತೇಚ್ಚವಾಗಿ ನಡೆಯುತ್ತಿದೆ. ಇದರಿಂದಾಗಿ ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಕೆಲವು ಕಾಲೇಜುಗಳು ಅಗತ್ಯ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿವೆ, ಅವೈಜ್ಞಾನಿಕ ಪರೀಕ್ಷಾ ನೀತಿಗಳು, ತರಗತಿಗಳು ಮುಗಿಯುವ ಮುನ್ನವೇ ಪರೀಕ್ಷೆಗಳನ್ನು ನಡೆಸುವುದು. ಆರು ತಿಂಗಳ ಕೋರ್ಸ್‌ಗಳನ್ನು ಸಮರ್ಪಕವಾಗಿ ನಡೆಸದೇ ಎರಡೇ ತಿಂಗಳಿಗೆ ಮುಗಿಸುವುದರಿಂದ ಶೇ40ರಷ್ಟು ಪಠ್ಯ ಕೂಡ ಮುಗಿಸಿರುವುದಿಲ್ಲ. ಹಾಗೂ ಒಂದೇ ಸಮಯದಲ್ಲಿ ಎರಡು–ಮೂರು ಪರೀಕ್ಷೆಗಳನ್ನು ನಿಗದಿ ಮಾಡುವುದು ಮತ್ತು ಮೌಲ್ಯಮಾಪನ ಸರಿಯಾಗಿ ನಡೆಸದೇ ಇರುವುದು ಈ ಎಲ್ಲಾ ಕಾರಣಗಳಿಂದಾಗಿ ರಾಜ್ಯದಲ್ಲಿ ಅತೀ ಹೆಚ್ಚು ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಿದ್ದಾರೆ. ಇದಕ್ಕೆ ತಾಂತ್ರಿಕ ಶಿಕ್ಷಣ ಮಂಡಳಿಯ ಅವೈಜ್ಞಾನಿಕ ನೀತಿಗಳೇ ಕಾರಣ ಹೊರತು ವಿದ್ಯಾರ್ಥಿಗಳಲ್ಲ.

ಈ ಹಿನ್ನೆಲೆಯಲ್ಲಿ ರಾಜ್ಯದ ನಾನಾ ಜಿಲ್ಲೆಗಳಿಂ ಆಗಮಿಸಿದ ವಿದ್ಯಾರ್ಥಿಗಳು ಈ ಪ್ರತಿಭಟನೆ ಹಮ್ಮಿಕೊಂಡಿದ್ದರು.

ಪ್ರತಿಭಟನೆಯ ನಂತರ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಹುಳ್ಳಿ ಉಮೇಶ್,ಮುಖಂಡರಾದ ಮುನಿರಾಜ್ ರವರನ್ನೊಳಗೊಂಡ 7 ಜನರ ನಿಯೋಗ ಉನ್ನತ ಶಿಕ್ಷಣ ಸಚಿವರಾದ ಸಿ.ಟಿ. ರವಿರವರನ್ನು ಭೇಟಿ ಮಾಡಿ ಬಂಧಿಸಿರುವ ಮುಖಂಡರನ್ನು ಬೇಷರತ್ತಾಗಿ ಬಿಡುಗಡೆಗೊಳಿಸಬೇಕು, ವಿದ್ಯಾರ್ಥಿಗಳ ಬೇಡಿಕೆಗಳನ್ನು ತಕ್ಷಣ ಈಡೇರಿಸಬೇಕೆಂದು ಮನವಿ ಸಲ್ಲಿಸಿ ಒತ್ತಾಯಿಸಿದರು. ಸಚಿವರು ಬೇಡಿಕೆ ಈಡೇರಿಸುವ ಭರವಸೆ ನೀಡಿದರು

ಚಳುವಳಿಯ ಬೇಡಿಕೆಗಳು

1. ಮೂರು ವರ್ಷದ ಡಿಪ್ಲೋಮೊ ಕೋರ್ಸ್‌ನ್ನು ಪದವಿ ರೀತಿಯಲ್ಲಿ ಸಂಪೂರ್ಣವಾಗಿ ಮೂರು ವರ್ಷ ಮುಂದಿನ ತರಗತಿಗಳಿಗೆ ಹಾಜರಾಗಲು (ಪ್ರವೇಶ ಪಡೆಯಲು), ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಬೇಕು.
2. ಕಠಿಣವಾದ ಹೊಸ ಪಠ್ಯಕ್ರಮವನ್ನು ಸರಳೀಕರಿಸಬೇಕು, ವಿದ್ಯಾರ್ಥಿಗಳ ಕಲಿಕೆಗೆ ಅನುಗುಣವಾಗಿ ಪಠ್ಯಕ್ರಮವನ್ನು ರಚಿಸಬೇಕು.
3. ಒಂದು ಸೆಮಿಸ್ಟರ್‌ನಲ್ಲಿ ಕನಿಷ್ಠ 4 ತಿಂಗಳು ಕಡ್ಡಾಯವಾಗಿ ತರಗತಿಗಳು ನಡೆಯುವಂತೆ ಕ್ರಮವಹಿಸಬೇಕು.



4. ಪರೀಕ್ಷಾ ಶುಲ್ಕ, ಮರು ಮೌಲ್ಯಮಾಪನ ಶುಲ್ಕ, ಜೆರಾಕ್ಸ್ ಪ್ರತಿ ಇನ್ನಿತರ ಶುಲ್ಕಗಳನ್ನು ಇಳಿಸಬೇಕು.
5. ಪ್ರವೇಶ ಪ್ರಕ್ರಿಯೆ ಸಂದರ್ಭದಲ್ಲಿ ಸೀಟು ಹಂಚಿಕೆಯಲ್ಲಿ ನಡೆಯುವ ಭ್ರಷ್ಟಾಚಾರವನ್ನು ತಡೆಗಟ್ಟಬೇಕು.
6. ಗ್ರಂಥಾಲಯ, ಪ್ರಯೋಗಾಲಯ, ಅರ್ಹ ಉಪನ್ಯಾಸಕರು ಇನ್ನಿತರ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುವ ಕಾಲೇಜುಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು.
7. ಸೆಮಿಸ್ಟರ್ ತರಗತಿಗಳು ಮುಗಿಯುವ ಮುನ್ನವೇ ಪರೀಕ್ಷೆಗಳು ಪ್ರಾರಂಭವಾಗುವುದನ್ನು ನಿಲ್ಲಿಸಬೇಕು.
8. ಪರೀಕ್ಷಾ ಮೌಲ್ಯಮಾಪನ ಸರಿಯಾಗಿ ಮಾಡಬೇಕು, ಶೀಘ್ರವಾಗಿ ಮರುಮೌಲ್ಯಮಾಪನ ಫಲಿತಾಂಶ ಪ್ರಕಟಿಸಬೇಕು.
9. ಏಕಕಾಲದಲ್ಲಿ 2–3 ಪರೀಕ್ಷೆಗಳನ್ನು ನಿಗದಿ ಮಾಡುವುದನ್ನು ಕೈಬಿಡಬೇಕು.
10. ಪ್ರಾಯೋಗಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಂದ ಸಾವಿರಾರು ರೂಪಾಯಿ ಹಣ ವಸೂಲಿ ಮಾಡಿ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಕಡಿಮೆ ಅಂಕಗಳನ್ನು ನೀಡಿ, ಹಣ ನೀಡದೆ ಇರುವ ವಿದ್ಯಾರ್ಥಿಗಳನ್ನು ಅನುತ್ತೀರ್ಣ ಮಾಡುತ್ತಿರುವ ಈ ಕ್ರಮವನ್ನು ಹಾಗೂ ಶಿಕ್ಷಣದ ವ್ಯಾಪಾರೀಕರಣವನ್ನು ತಡೆಗಟ್ಟಲು ಡಿಟಿಇಯು ಕಠಿಣ ಕ್ರಮವನ್ನು ಕೈಗೊಳ್ಳಬೇಕು.
11. ಹಣ ಮಾಡುವ ದಂಧೆಯಲ್ಲಿ ತೊಡಗಿರುವ ಖಾಸಗಿ ಪಾಲಿಟೆಕ್ನಿಕ್‌ಗಳ ಮಾನ್ಯತೆಯನ್ನು ರದ್ದುಗೊಳಿಸಿ, ಖಾಸಗಿ ಪಾಲಿಟೆಕ್ನಿಕ್‌ಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರುವ ಶಾಸನ ಜಾರಿಗೆ ತರಬೇಕು.
12. ಅಗತ್ಯವಿರುವ ಎಲ್ಲಾ ಕಡೆ ಸರ್ಕಾರಿ ಪಾಲಿಟೆಕ್ನಿಕ್‌ಗಳನ್ನು ಸ್ಥಾಪಿಸಿ ಮತ್ತು ಈಗಿರುವ ಎಲ್ಲಾ ಕಾಲೇಜುಗಳಿಗೆ ಅಗತ್ಯ ಮೂಲಭೂತ ಸೌಲಭ್ಯವನ್ನು ಒದಗಿಸಬೇಕು.
13. ಪಾಲಿಟೆಕ್ನಿಕ್‌ಗಳಲ್ಲಿ ಆಂತರಿಕ ಅಂಕ ಹೆಸರಿನಲ್ಲಿ ವಿದ್ಯಾರ್ಥಿಗಳ ಮೇಲೆ ನಡೆಯುತ್ತಿರುವ ದೈಹಿಕ ಮತ್ತು ಮಾನಸಿಕ ಶೋಷಣೆಯನ್ನು ನಿಲ್ಲಿಸಬೇಕು.
14. ಕೋರ್ಸ್ ಮುಗಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಸರ್ಕಾರ ಸೂಕ್ತ ಉದ್ಯೋಗಾವಕಾಶವನ್ನು ನೀಡಬೇಕು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಬರ ನಿರ್ವಹಣೆಗೆ ಆದ್ಯತೆ ಸಿಕ್ಕೀತೆ?

ನಾಲ್ಕೇ ವರ್ಷಗಳಲ್ಲಿ ಮೂರನೇ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು ದಾಖಲೆ ನಿರ್ಮಿಸಿರುವ ಜಗದೀಶ್ ಶೆಟ್ಟರ್ ಪ್ರಧಾನಿ ಮನಮೋಹನ ಸಿಂಗ್ ಮತ್ತು ಕೃಷಿ ಮಂತ್ರಿ ಶರದ್ ಪವಾರ್ ಭೇಟಿ ಮಾಡಿ ಬರ ಪೀಡಿತ ಕರ್ನಾಟಕ ರಾಜ್ಯಕ್ಕೆ ತುರ್ತು ಪರಿಹಾರ ನೀಡಬೇಕೆಂದು ಮನವಿ ಮಾಡಿದ್ದಾರೆ. ಉಪ ಮುಖ್ಯಮಂತ್ರಿಗಳಾದ ಕೆ.ಎಸ್. ಈಶ್ವರಪ್ಪ ಮತ್ತು ಆರ್. ಅಶೋಕ್, ಕೃಷಿಮಂತ್ರಿ ಉಮೇಶ್‌ಕತ್ತಿ, ಜಲಸಂಪನ್ಮೂಲ ಮಂತ್ರಿ ಬಸವರಾಜ ಬೊಮ್ಮಾಯಿ, ದೆಹಲಿ ವಿಶೇಷ ಪ್ರತಿನಿಧಿ ಧನಂಜಯ ಕುಮಾರ್ ಮತ್ತು ಹಿರಿಯ ಅಧಿಕಾರಿಗಳು ಮುಖ್ಯಮಂತ್ರಿ ಜತೆಗಿದ್ದರು ಎಂದು ತಿಳಿದು ಬಂದಿದೆ.

ಈ ವಾರದ ಆರಂಭದಲ್ಲಿ ಬೆಂಗಳೂರು ಸೇರಿದಂತೆ ರಾಜ್ಯದ ಕೆಲವೆಡೆ ಮಳೆಯಾಗಿದೆ. ಗುಲ್ಬರ್ಗಾ ಜಿಲ್ಲೆಯ ಅಫಜಲಪುರ, ರಾಯಚೂರು ಜಿಲ್ಲೆಯ ಸಿಂಧನೂರು, ಲಿಂಗಸಗೂರು, ಕೊಪ್ಪಳ ಜಿಲ್ಲೆಯ ಯಲಬುರ್ಗಾ, ಬಾಗಲಕೋಟೆ ಜಿಲ್ಲೆಯ ಬೀಳಗಿ, ಮುಧೋಳ, ಜಮಖಂಡಿ, ವಿಜಾಪುರ ಜಿಲ್ಲೆಯ ಸಿಂಧಗಿ, ಬಸವನಬಾಗೇವಾಡಿ, ಬೆಳಗಾವಿ ಜಿಲ್ಲೆಯ ಖಾನಾಪುರ, ಬೈಲಹೊಂಗಲ, ಗೋಕಾಕ, ಚಿಕ್ಕೋಡಿ, ರಾಯಬಾಗ ಮೊದಲಾದ ತಾಲ್ಲೂಕುಗಳ ಕೆಲವು ಪ್ರದೇಶಗಳಲ್ಲಿ ಮಳೆ ಸುರಿದಿದ್ದು ರೈತರು ಬಿತ್ತನೆಗೆ ಅಣಿಯಾಗಿದ್ದಾರೆ. ಆದರೆ ರಾಜ್ಯದ ಬಹುತೇಕ ಪ್ರದೇಶಗಳಲ್ಲಿ ಮಳೆಯಾಗಿಲ್ಲ; ಮಳೆಯಾಗಿದ್ದರೂ ಅದು ತೃಪ್ತಿಕರವಾಗಿಲ್ಲ. 176 ತಾಲ್ಲೂಕುಗಳ ಪೈಕಿ 157 ರಲ್ಲಿ ಮಳೆಯ ಪ್ರಮಾಣ ಅತ್ಯಂತ ಕಡಿಮೆಯಾಗಿದ್ದು ಬರದಂತಹ ಪರಿಸ್ಥಿತಿ ಉಂಟಾಗಿದೆ. ಬಿತ್ತನೆ ಆಗಬೇಕಾಗಿದ್ದ 70 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಬಿತ್ತನೆ ಆಗಿರುವುದು ಕೇವಲ 20 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ.

ರಾಜ್ಯದ ಪ್ರಮುಖ ಜಲಾಶಯಗಳು ಬರಿದಾಗುತ್ತಿವೆ. ಅಂತರ್ಜಲ ಮಟ್ಟ ಪಾತಾಳಕ್ಕೆ ಕುಸಿದಿದೆ. ಸುಮಾರು 700 ಗ್ರಾಮಗಳಿಗೆ ಮತ್ತು ಪಟ್ಟಣ ಪ್ರದೇಶಗಳ 250 ವಾರ್ಡುಗಳಿಗೆ 1200 ಟ್ಯಾಂಕರುಗಳಲ್ಲಿ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ ಎಂದು ಪ್ರಧಾನಿ ಹಾಗೂ ಕೃಷಿ ಮಂತ್ರಿಗೆ ಸಲ್ಲಿಸಲಾದ ಮನವಿಯಲ್ಲಿ ವಿವರಿಸಲಾಗಿದ್ದು ತಕ್ಷಣ ರಾಜ್ಯಕ್ಕೆ 2000 ಕೋಟಿ ರೂಪಾಯಿ ಮಧ್ಯಂತರ ನೆರವನ್ನು ಬಿಡುಗಡೆ ಮಾಡಬೇಕೆಂದು ಆಗ್ರಹಿಸಲಾಗಿದೆ. ಕಳೆದ ವರ್ಷ ಮುಂಗಾರು ವಿಫಲವಾದ ಸಂದರ್ಭದಲ್ಲಿ ರಾಜ್ಯ ಸರ್ಕಾರ ರಾಷ್ಟ್ರೀಯ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ರೂ. 2605 ಕೋಟಿ ನೆರವು ಕೇಳಿತ್ತು, ಆದರೆ ಬಿಡುಗಡೆ ಆಗಿದ್ದು ಬರೀ 70 ಕೋಟಿ ಮಾತ್ರ. ಮತ್ತೆ ಹಿಂಗಾರು ಮಳೆಯೂ ಕೈಕೊಟ್ಟಾಗ ಪುನ: ರೂ.3609 ಕೋಟಿಗೆ ಮನವಿ ಮಾಡಲಾಗಿತ್ತು. ಆಗ ಸಿಕ್ಕಿದ್ದು ಕೇವಲ ರೂ. 282 ಕೋಟಿ ಮಾತ್ರ ಈ ಪ್ರಮಾಣದ ನೆರವು ಯಾತಕ್ಕೂ ಸಾಲದು ಎಂದು ಮನವಿಯಲ್ಲಿ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಲು ಪ್ರಯತ್ನಿಸಲಾಗಿದೆ ಎಂದು ವರದಿಯಾಗಿದೆ.


ಬರಪೀಡಿತ ಪ್ರದೇಶದ ಜನರಿಗೆ ಉದ್ಯೋಗ ಒದಗಿಸಲು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ವರ್ಷಕ್ಕೆ 100 ದಿನಗಳ ಬದಲಿಗೆ 200 ದಿನಗಳ ಉದ್ಯೋಗ ಒದಗಿಸಬೇಕು ಹಾಗೂ ಬೆಳೆ ವಿಮೆಗಾಗಿ ಪ್ರೀಮಿಯಂ ಕಟ್ಟುವ ಅವಧಿಯನ್ನು ಅಗಸ್ಟ್ 31 ರ ವರೆಗೆ ವಿಸ್ತರಿಸಬೇಕೆಂದು ಮನವಿ ಮಾಡಲಾಗಿದೆ. ರಾಜ್ಯದ ಬರ ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಮತ್ತೆ ಕೇಂದ್ರ ತಂಡವನ್ನು ರವಾನಿಸಬೇಕೆಂದೂ ಕೋರಲಾಗಿದೆ. ಮುಖ್ಯಮಂತ್ರಿ ಸಲ್ಲಿಸಿದ ಬೇಡಿಕೆಗಳ ಬಗ್ಗೆ ಪ್ರಧಾನಿ ಮನಮೋಹನ್‌ಸಿಂಗ್ ಮತ್ತು ಕೃಷಿ ಮಂತ್ರಿ ಶರದ್‌ಪವಾರ್ ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಆದರೆ ತಕ್ಷಣ ಹಣ ಬಿಡುಗಡೆ ಮಾಡುವ ಆಶ್ವಾಸನೆಯನ್ನು ನೀಡಿಲ್ಲ. ನಂತರ ಮುಖ್ಯಮಂತ್ರಿ ನೇತೃತ್ವದ ನಿಯೋಗ ಕೇಂದ್ರ ಮಂತ್ರಿ ಮಂಡಲದಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಎಸ್.ಎಂ. ಕೃಷ್ಣ, ಎಂ. ವೀರಪ್ಪ ಮೊಯಲಿ, ಮಲ್ಲಿಕಾರ್ಜುನ ಖರ್ಗೆ ಮತ್ತು ಕೆ.ಹೆಚ್. ಮುನಿಯಪ್ಪ ಅವರನ್ನು ಭೇಟಿಮಾಡಿ ರಾಜ್ಯದ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಪ್ರಭಾವ ಬೀರುವಂತೆ ಮನವಿ ಮಾಡಿದ್ದಾರೆ.

ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮುಂದಿಟ್ಟಿರುವ ಬೇಡಿಕೆಗಳಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ 100 ದಿನಗಳ ಬದಲು 200 ದಿನಗಳ ಉದ್ಯೋಗ ಒದಗಿಸಬೇಕೆಂದು ಒತ್ತಾಯಿಸಿರುವುದು ಅತ್ಯಂತ ಸಮಂಜಸವಾಗಿದೆ. ಇಂದು ಬರಪೀಡಿತ ಪ್ರದೇಶಗಳ ಕೃಷಿ ಕೂಲಿಕಾರರು ಮತ್ತು ಬಡ ರೈತರು ಕುಟುಂಬ ಸಮೇತರಾಗಿ ಮಹಾರಾಷ್ಟ್ರ, ಗೋವಾ, ತಮಿಳುನಾಡು, ಕೇರಳದಂತಹ ರಾಜ್ಯಗಳಿಗೆ ವಲಸೆ ಹೋಗುತ್ತಿರುವುದು ಗಣನೀಯವಾಗಿ ಹೆಚ್ಚಾಗಿದೆ. ಬರ ಬಿದ್ದಾಗಲೆಲ್ಲ ಅತಿ ಹೆಚ್ಚು ವಲಸೆ ಹೋಗುವವರು ಲಂಬಾಣಿ ಸಮುದಾಯಕ್ಕೆ ಸೇರಿದವರು. ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನ ಕೆಂಚನಗುಡ್ಡ ತಾಂಡಾದ 400 ಕ್ಕೂ ಹೆಚ್ಚು

ಪುಟ 4 ಕ್ಕೆ

ಶಿಕ್ಷಣ ಮಾಫಿಯಾದ ಭಂಡತನ ಮತ್ತು ಕೈ ಕಟ್ಟಿ ನಿಂತ ಅಪರಾಧಿ ಸರಕಾರ

ಹತ್ತು ದಿನಗಳ ಶಾಲಾ ಬಂದ್‌ಗೆ ಇಳಿದಿದ್ದ ಖಾಸಗಿ ಶಾಲೆಗಳ ಸಂಘ(ಕುಸ್ಮಾ) ಮೂರನೆಯ ದಿನಕ್ಕೆ ಕರೆಯನ್ನು ಹಿಂಪಡೆದಿದೆ. ಇವರ ದುರ್ವತನೆ, ದುರಹಂಕಾರದ ವಿರುದ್ಧ ಭುಗಿಲೆದ್ದ ಸಾರ್ವಜನಿಕ ಆಕ್ರೋಶ, ಸಂಘದೊಳಗೆ ಇಲ್ಲವಾದ ಸಹಮತ, ಅವರ ಆಕ್ರಮಣಕಾರೀ ಬಲ ಪ್ರದರ್ಶನಕ್ಕೆ ಕಡಿವಾಣ ಹಾಕಿತು ಎನ್ನಬಹುದು. ಶಿಕ್ಷಣದ ಹಕ್ಕು ಕಾಯ್ದೆಯನ್ವಯ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಜಾರಿಗೊಳಿಸಲು ತೋರಿದ ಕಡು ನಿರಾಕರಣೆಯನ್ನೂ ಒಳಗೊಂಡು ಮಂಡಿಸಿದ ಹನ್ನೊಂದು ಬೇಡಿಕೆಗಳ ಬಗ್ಗೆ ಚರ್ಚೆಗೂ ಅವು ನಿರಾಕರಿಸಿದ್ದವು. ಈಗ ಶಾಲೆಗಳನ್ನು ಪುನರಾರಂಭಿಸುತ್ತಿವೆ ನಿಜ, ಆದರೆ ಎತ್ತಿದ ಪ್ರಶ್ನೆಗಳಿಗೆ ಉತ್ತರವಿನ್ನೂ ಸಿಗಬೇಕಿದೆ. ಅದು ಪಾಲಕ-ಪೋಷಕರು-ಮಕ್ಕಳಿಗೂ ಸಹ.



ಬೆಚ್ಚಿ ಬೀಳಿಸಿದ ಅಂಶಗಳು

ಕೇಂದ್ರದ ಶಿಕ್ಷಣದ ಹಕ್ಕು ಕಾಯ್ದೆ ಜಾರಿಯ ಪ್ರಕ್ರಿಯೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶೇ.25 ಸ್ಥಾನಗಳನ್ನು ಪ.ಜಾತಿ, ಪ.ಪಂಗಡ, ಹಿಂದುಳಿದ ವರ್ಗಗಳು,ಅಲ್ಪಸಂಖ್ಯಾತರಿಗೂ ಅನುಕೂಲವಾಗುವ ಮತ್ತು ಬಡ, ಆರ್ಥಿಕ ದುರ್ಬಲ ವರ್ಗದ ಮಕ್ಕಳಿಗೆ ನೀಡಬೇಕೆಂದು, ಶಿಕ್ಷಣವನ್ನೊದಗಿಸುವ ಹೊಣೆಗಾರಿಕೆಯಿಂದಾಗಿ ಅವರ ಶಿಕ್ಷಣ ಶುಲ್ಕವಾಗಿ 11,800 ರೂ.ಗಳನ್ನು ಸರಕಾರ ತುಂಬಿಕೊಡಬೇಕೆಂದೂ ನಿರ್ದೇಶಿಸಿದೆ. ಮುಖ್ಯವಾಗಿ ಖಾಸಗಿ ಶಾಲೆಗಳ ಸಂಘಕ್ಕೆ ವಿರೋಧವಿರುವುದು ಸೀಟುಗಳನ್ನು ಮೀಸಲಾಗಿರಿಸಿರುವುದಕ್ಕೆ. ಅಂದರೆ 'ವಿದ್ಯಾದಾನ, ಸಮಾಜ ಸೇವೆ' ಹೆಸರಿನಲ್ಲಿ ಶಿಕ್ಷಣದ ಅಂಗಡಿಗಳನ್ನು ತೆರೆದು ವ್ಯಾಪಾರಕ್ಕೆ ಕುಳಿತವರಿಗೆ ಶುಲ್ಕ, ಡೊನೇಷನ್ ಅಂತಾ ಮನಬಂದಂತೆ ಸುಲಿವ ಅವಕಾಶ, ಲಾಭ ಕಡಿತ ಒಂದು ಮಟ್ಟಿಗೆ ನಿರ್ಬಂಧಕ್ಕೀಡಾಗಿರುವುದು ಕೆರಳಿಸಿದೆ. ಇದು ಒಂದು ಪ್ರಧಾನ ಆರ್ಥಿಕ ಸಂಗತಿಯಾದರೆ ಇನ್ನು ಹಲವು ಸಾಮಾಜಿಕ ಸಂಗತಿಗಳೂ ಇವೆ. ಈ ಅಲ್ಲಿ ನಡೆದ ಕೆಲವು ಘಟನೆಗಳು ನಿಜಕ್ಕೂ ಬೆಚ್ಚಿ ಬೀಳಿಸುವಂತಿವೆ!.

ಅರಣ್ಯರೋಧನವಾದ ಅಳಲು


ನ್ಯಾಯಾಲಯದ ತೀರ್ಪು, ಸರಕಾರಗಳ ಆದೇಶ ಬಂದ ನಂತರ ಬಹಳಷ್ಟು ಖಾಸಗಿ ಶಿಕ್ಷಣ ಸಂಸ್ಥೆಗಳು ಅಂತಹ ಮಕ್ಕಳಿಗೆ ಪ್ರವೇಶಾವಕಾಶವನ್ನು ಬಹಿರಂಗವಾಗಿಯೇ ನಿರಾಕರಿಸಿದವು ಮತ್ತು ಸರಕಾರಕ್ಕೆ 'ನೀವೇನು ಮಾಡಿಕೊಳ್ಳುವಿರಿ' ಎಂದು ಸವಾಲನ್ನೂ ಹಾಕಿದವು. ಸರಕಾರದ ಸಹಾಯ ಧನವಿಲ್ಲದೇ ನಡೆಸುವ ತಮ್ಮ ವ್ಯವಹಾರದಲ್ಲಿ ಅದರದ್ದೇನು ಹಸ್ತಕ್ಷೇಪವೆನ್ನುವವರೆಗೂ ಪ್ರಶ್ನಿಸಿದವು. ಹಲವಾರು ಸಂಸ್ಥೆಗಳು ಮಕ್ಕಳಿಗೆ ಪ್ರವೇಶ ನಿರಾಕರಿಸಿದಾಗ ಪಾಲಕರು ದೂರು ನೀಡಿದಾಗಲೂ ಸರಕಾರದ ಇಲಾಖೆ ಅವುಗಳನ್ನು ಕಡತಕ್ಕೆ ಸೇರಿಸಿತೇ ಹೊರತು ಏನೊಂದೂ ಕ್ರಮ ವಹಿಸದೇ ಅಳಲನ್ನು ಅರಣ್ಯರೋಧನವಾಗಿಸಿ ಖಾಸಗಿಯವರಿಗೆ ಸಹಕಾರ ನೀಡಿದ್ದು ಇನ್ನೊಂದು ಸಂಗತಿ.

ನೀಚತನದ ಪರಮಾವಧಿ

ಮತ್ತೊಂದು ಗಂಭೀರ ಪ್ರಕರಣವೆಂದರೆ ಬಂದ್‌ಗೆ ಕರೆಕೊಟ್ಟ ಬಳಿಕ ಸಂಘದ(ಕುಸ್ಮಾ) ಅದ್ಯಕ್ಷ ಜಿ.ಎಸ್.ಶರ್ಮ ಕೊಟ್ಟ ಸಮರ್ಥನಾ ಹೇಳಿಕೆ. "ಸಮುದ್ರಕ್ಕೆ ಕೊಳಚೆ ನೀರು ಬಂದು ಸೇರಿದರೆ ಇಡೀ ಸಮುದ್ರವೇ ಕೊಳಚೆಯಾಗುತ್ತದೆ. ಅದೇ ರೀತಿ ಬಡ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸಿಕೊಂಡರೆ ಉಳಿದ ಪೋಷಕರು ತಮ್ಮ ಮಕ್ಕಳ ವರ್ಗಾವಣೆ ಪತ್ರ ಕೇಳುತ್ತಾರೆ". ನೀಚತನದ ಮನೋಭಾವಕ್ಕೆ ಇದಕ್ಕಿಂತ ಉದಾಹರಣೆ ಬೇಕೆ? ಇಲ್ಲಿ ಸಮುದ್ರ ಮತ್ತು ಕೊಳಚೆಯೆಂದರೆ ಯಾರೆಂಬುದು ಸ್ವಯಂವೇದ್ಯ. ಶ್ರೀಮಂತರು ಮತ್ತು ಬಡವರು ಎಂಬ ವರ್ಗಭೇದವನ್ನು ಎಳೆಯ ವಿದ್ಯಾರ್ಥಿಗಳಲ್ಲಿ ಮಾಡುವುದು ಅಪರಾಧ. ಉಚ್ಚ ಮತ್ತು ನೀಚವೆಂಬ ಭಾವವೇ ಚಾತುರ್ವರ್ಣದ ಪ್ರತಿಪಾದನೆಯಾಗಿದೆ. ಮಾತ್ರವಲ್ಲ ಇದು ಜಾತಿ

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್



"ಮೂರುವರೆ ವರ್ಷದಲ್ಲಿ 4.65ಲಕ್ಷ ವಿಮಾ ಏಜೆಂಟರ ಉದ್ಯೋಗ ಕಡಿತ"

ಮಂಡ್ಯದಲ್ಲಿ ಯಶಸ್ವಿ ಎಲ್‌ಐಸಿ ಏಜೆಂಟರ ರಾಜ್ಯ ಮಟ್ಟದ ಅಧ್ಯಯನ ಶಿಬಿರ

ಜಿಲ್ಲೆಯ ಪ್ರಮುಖ ಪ್ರೇಕ್ಷಣೀಯ ಸ್ಥಳವಾದ ಮದ್ದೂರು ತಾಲ್ಲೂಕಿನ ಹನುಮಂತನಗರದಲ್ಲಿ ಎಲ್‌ಐಸಿ ಏಜೆಂಟರ ರಾಜ್ಯಮಟ್ಟದ ಅಧ್ಯಯನ ಶಿಬಿರ ಯಶಸ್ವಿಯಾಗಿ ಜರುಗಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ 220 ಎಲ್‌ಐಸಿ ಏಜೆಂಟರಗಳಿಗೆ, ಎಲ್‌ಐಸಿ ಸಂಸ್ಥೆಗೆ ಅಂತರಾಷ್ಟ್ರೀಯ ಹಣಕಾಸು ಬಂಡವಾಳದಿಂದ ಬಂದಿರುವ ಅಪಾಯಗಳು, ಏಜೆಂಟರ ಕಾಯ್ದೆಗೆ ತರುತ್ತಿರುವ ಎಲ್‌ಐಸಿ ವಿರೋಧಿ ತಿದ್ದುಪಡಿಗಳು, ಇಳಿಕೆಯಾಗುತ್ತಿರುವ ಬೋನಸ್, ಬೆಲೆಏರಿಕೆ. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಆರ್ಥಿಕ ಧೋರಣೆ ಮುಂತಾದ ವಿಷಯಗಳ ಕುರಿತು ಉಪನ್ಯಾಸಗಳನ್ನು ಸಂಘಟಿಸಲಾಗಿತ್ತು. ಜುಲೈ 6,7, 2012 ರಂದು ಎರಡು ದಿನಗಳ ಕಾಲ ನಡೆದ ಈ ಶಿಬಿರದ ಉದ್ಘಾಟನೆಯನ್ನು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಪ್ರಸನ್ನಕುಮಾರ ನೇರವೇರಿಸಿ ವಿಮೆ, ಒಂದು ವಿಶಿಷ್ಟವಾದ ಸರಕಾಗಿದ್ದು ಇಲ್ಲಿ ಮಾರಾಟ ಮಾಡುವುದು ಭರವಸೆಯನ್ನು. ಈ ಕಾರಣಕ್ಕಾಗಿ ಪ್ರಿಮಿಯಂ ರೂಪದಲ್ಲಿ ಸಂಗ್ರಹಿಸಲಾಗುವ ದೊಡ್ಡ ಬಂಡವಾಳ ಹೀಗೆ ಕಾರ್ಪೊರೇಟ್ ಧನಿಗಳ ಕಣ್ಣು ಬಿದ್ದಿದೆ. ಖಾಸಗಿ ಸಂಪತ್ತು ಬೆಳೆಸಲು ಈ ಹಣ ದೋಚುವುದು ಇದರ ಉದ್ದೇಶವಾಗಿದೆ. ಹಿಂದೆ ದಾವೆ ಇತ್ಯಾರ್ಥದಲ್ಲಿ ಮಾಡುತ್ತಿದ್ದ ಮೋಸ, ಕಳಪೆ ಸೇವೆ ಹಣ ಸಂಗ್ರಹಿಸಿ ಸಂಸ್ಥೆ ಮುಚ್ಚುವುದು ಮುತಾಂದ ವಂಚನೆ, ಲೂಟಿ ಕ್ರಮಗಳನ್ನು. ತಡೆಯಲು ರಾಷ್ಟ್ರೀಕರಣ ಮಾಡಲಾಯಿತು ಎಂಬುದನ್ನು ಮರೆಯಲು ಸಾಧ್ಯವಿಲ್ಲ. ದೇಶದ ಸ್ವಾವಲಂಬಿ ಆರ್ಥಿಕ ಬೆಳವಣಿಯಲ್ಲಿ ಎಲ್‌ಐಸಿ ವಹಿಸಿರುವ ರಚನಾತ್ಮಕ ಪಾತ್ರವನ್ನು ನಿರಾಕರಿಸಿ ಖಾಸಗಿ ಲೂಟಿಗೆ ಅವಕಾಶ ಮಾಡಿಕೊಡುವ ಖಾಸಗೀಕರಣವನ್ನು ಹಿಮ್ಮೆಟ್ಟಿಸಬೇಕೆಂದು ಇದರ ಕುರಿತು ಪಾಲಿಸಿದಾರರಲ್ಲಿ ಜಾಗೃತಿ ಮೂಡಿಸಲು ಎಲ್‌ಐಸಿ ಏಜೆಂಟರಿಗೆ ಕರೆ ನೀಡಿದರು. ಎಲ್‌ಐಸಿಯ ಜೀವಾಳವೇ ಏಜೆಂಟರುಗಳು. ಏಜೆಂಟರುಗಳ ಶ್ರಮದ ಮೇಲೆ ಎಲ್‌ಐಸಿ ಸಂಸ್ಥೆ ನಿಂತಿದೆ. ಇಷ್ಟೊಂದು ಹೆಮ್ಮೆಯ ಸಂಸ್ಥೆಯಾಗಿ ಬೆಳೆಯಲು ಏಜೆಂಟರ ಕಾಣಿಕೆ ಅಪಾರ. ಆದರೆ ಎಲ್‌ಐಸಿ ಶಾಸನಕ್ಕೆ, ಏಜೆಂಟರ ಕಾಯಿದೆಗೆ ತರುತ್ತಿರುವ ತಿದ್ದುಪಡಿ, ನಿಯಮಗಳು ಕೋಟ್ಯಾಂತರ ಜನರ ಉಳಿತಾಯದ ಹಣಕ್ಕೆ ತರುತ್ತಿರುವ ಅಪಾಯವಾಗಿದೆ. ಏಜೆಂಟರಗಳ ಮೇಲೆ ಧಾಳಿ ಮಾಡುವ ಮೂಲಕ ಸಂಸ್ಥೆಯನ್ನು ದುರ್ಬಲಗೊಳಿಸಿ ಖಾಸಗೀಕರಣಕ್ಕೆ ದಾರಿ ಮಾಡಲು ದುಷ್ಟ ಯೋಜನೆ ದೇಶದ್ರೋಹ ಸ್ವರೂಪದ್ದು ಎಂದು ವಿವರಿಸಿದರು. ಒಂದು ಕಡೆ ಅಂತರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ನಮ್ಮ ದೇಶದ ಅತ್ಯಂತ ಲಾಭದಾಯಕ ಉದ್ಯಮಗಳಾದ ಎಲ್‌ಐಸಿಯಂತಹ ಅಯಕಟ್ಟಿನ



ಸಂಸ್ಥೆಗಳನ್ನು ತೆರೆಯುತ್ತಿರುವ ಕೇಂದ್ರ ಸರ್ಕಾರ ಇನ್ನೊಂದು ಕಡೆ ಜನರ ತೆರಿಗೆ 56 ಸಾವಿರ ಕೋಟಿ ರೂ. ಅನ್ನು ಐಎಂಎಫ್ ನಂತಹ ಸಂಸ್ಥೆಗಳಿಗೆ ದಾನ ಮಾಡಲು ಮುಂದಾಗಿದೆ. ಇದು ಅತ್ಯಂತ ಖಂಡನೀಯ ಎಂದು ತಿಳಿಸಿದರು.

LICAOI ದಕ್ಷಿಣ ಮಧ್ಯವಲಯದ ಪ್ರಧಾನಕಾರ್ಯದರ್ಶಿ ಕಾಂ॥ ಎಲ್. ಮಂಜುನಾಥರವರು ವಿಮೆ ಮಾರುಕಟ್ಟೆಯಲ್ಲಿ ಎಲ್‌ಐಸಿಯ ಪಾಲು ಶೇ 72 ರಷ್ಟಿದೆ. ಉಳಿದ 23 ಖಾಸಗಿ ಕಂಪನಿಗಳ ಪಾಲು ಒಟ್ಟು 28 ಮಾತ್ರ. ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (IRDA) ಖಾಸಗಿ ವಿಮಾ ಕಂಪನಿಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಾ ಹಲವು ನಿರ್ಬಂಧಗಳನ್ನು ಎಲ್‌ಐಸಿ ಮೇಲೆ ಮಾತ್ರ ಹೇರುತ್ತಿದೆ. ಇಂತಹ ಪ್ರತಿಕೂಲ ಕ್ರಮದ ಹೊರತಾಗಿಯೂ ಏಜೆಂಟ್‌ರ ಆಪಾರ ಬದ್ಧತೆ ಕ್ರಮದಿಂದಾಗಿ ಮಾರುಕಟ್ಟೆಯಲ್ಲಿ ಸಿಂಹಪಾಲು ಉಳಿದಿದೆ. ಹೀಗಿದ್ದರೂ ಹೊಸ ಕನಿಷ್ಠ ವ್ಯವಹಾರ ನಿಯಮದ ನೆಪದಲ್ಲಿ ಕಳೆದ 3 1/2 ವರ್ಷದಲ್ಲಿ 4.65 ಲಕ್ಷ ಏಜೆಂಟರು ಉದ್ಯೋಗ ಕಳೆದುಕೊಳ್ಳುವಂತೆ ಮಾಡಲಾಗಿದೆ. ಷೇರು ಮಾರುಕಟ್ಟೆ ಆಧಾರಿತ ಪಿಂಚಣಿ ಯೋಜನೆ ಜಾರಿಗೆ ತಂದು ಲಾಭ ಬಂದರೆ ಪೆನ್ಸನ್ ಇಲ್ಲದಿದ್ದೆ ಟೆನ್ಸನ್ ಆಗುವ ಸ್ಥಿತಿ ನಿರ್ಮಿಸಿದ್ದಾರೆ. 1972ರ ಏಜೆಂಟ್ ಕಾಯಿದೆ ತಿದ್ದುಪಡಿ ವಿರುದ್ಧ ಕೊಲ್ಕತ್ತಾ ಹೈಕೋರ್ಟ್‌ನಲ್ಲಿ ದಾವೆ ಹಾಕಿ ಯಶಸ್ಸನ್ನು ಪಡಿದಿದ್ದೇವೆ. ಸಂಘಟಿತ ಹೋರಾಟದಿಂದ ಮಾತ್ರ ನಮ್ಮ ಜೀವನಾಧಾರವನ್ನು ರಕ್ಷಿಸಿಕೊಳ್ಳಲು ಎಲ್‌ಐಸಿ ಸಂಸ್ಥೆಯನ್ನು ಉಳಿಸಲು ಸಾಧ್ಯ ಎಂದು ತಿಳಿಸಿದರು.

ಉಧ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು LICAOI ನ ರಾಜ್ಯ ಅಧ್ಯಕ್ಷರಾದ ಕಾಂ। ಎಫ್.ಸಿ. ಸಿಂದಗಿ, ಎಲ್‌ಐಸಿ ನೌಕರರ ಸಂಘದ ಮೈಸೂರು ವಿಭಾಗೀಯ ಪ್ರಧಾನಕಾರ್ಯದರ್ಶಿ ಕಾಂ। ನಾಗೇಶ್, ಅಭಿವೃದ್ಧಿ ಅಧಿಕಾರಿಗಳ ಸಂಘದ ಪ್ರಧಾನಕಾರ್ಯದರ್ಶಿ ಎನ್.ಎಲ್. ಶೇಖರ್ ಮದ್ದೂರು ಎಲ್‌ಐಸಿ ಶಾಖಾಧಿಕಾರಿ ಬಿ.ಎಂ. ಚಂದ್ರಶೇಖರ್, LICAOI ನ ಮೈಸೂರು ವಿಭಾಗದ ಮುಖಂಡರುಗಳಾದ ಸಿ.ಪ್ರದೀಪ್, ಪ್ರಭಾಕರ್, ಧನಪಾಲಶೆಟ್ಟಿ, ಶಾಂತಮಲ್ಲಪ್ಪ, ಯೋಗೇಶ್ ಉಪಸ್ಥಿತರಿದ್ದರು.

ಟಿ. ಯಶವಂತ

ಅರ್ಥವಿಲ್ಲದ ಬೇಡಿಕೆ

"ನೆಗಡಿ ಆಗಿದೆ ಎಂದ ಮಾತ್ರಕ್ಕೆ ಮೂಗನ್ನೇ ಕೊಯ್ಯಲು ಆಗುವುದಿಲ್ಲ. ಕೆ.ಜಿ. ಬೋಪಯ್ಯ ಅಂತಹ ಯತ್ನಕ್ಕೆ ಕೈ ಹಾಕಿದ್ದಾರೆ. ಕೊಡಗು ಅಭಿವೃದ್ಧಿಗೆ ಹೋರಾಡಲು ನಾವೂ ಅವರ ಕೈಜೋಡಿಸಲು ಸಿದ್ಧರಿದ್ದೇವೆ. ಪ್ರತ್ಯೇಕ ರಾಜ್ಯ ಬೇಡಿಕೆ ಅರ್ಥವಿಲ್ಲದ್ದು."

– ಡಾ. ಪಾಟೀಲ್ ಪುಟ್ಟಪ್ಪ,
ಹಿರಿಯ ಪತ್ರಕರ್ತರು

ಬರ ನಿರ್ವಹಣೆಗೆ ಆದ್ಯತೆ ಸಿಕ್ಕೀತೆ?

ಪುಟ 3 ರಿಂದ

ಕುಟುಂಬಗಳು. 5 ಲಾರಿಗಳ ಮೂಲಕ ತಮಿಳುನಾಡಿನ ಸೇಲಂ ಬಳಿಯ ಧರ್ಮಪುರಿಗೆ ಕಬ್ಬು ಕಡಿಯಲು ಹೊರಟಿರುವ ಸಚಿತ್ರ ವರದಿಯನ್ನು ವಿಜಯ ಕರ್ನಾಟಕ ದಿನಪತ್ರಿಕೆ ಇದೇ ಜುಲೈ 19ರ ಸಂಚಿಕೆಯಲ್ಲಿ ಪ್ರಕಟಿಸಿದೆ. ಇವರು ಸ್ವಂತ ಭೂಮಿ ಇಲ್ಲದವರು. ಅಲ್ಪ ಸ್ವಲ್ಪ ಭೂಮಿ ಇದ್ದವರು ಮಳೆಯನ್ನೇ ಆಶ್ರಯಿಸಿ ಕೃಷಿ ಮಾಡುವವರು. ಗುಡ್ಡ ಬೆಟ್ಟಗಳಲ್ಲಿ ಇರುವ ಇವರ ಭೂಮಿಗೆ ನೀರಾವರಿ ಎಲ್ಲಿಂದ ಬರಬೇಕು? ಅವರ ತಾಂಡಗಳಲ್ಲಿ ಶುದ್ಧ ಕುಡಿಯುವ ನೀರು ಸಹ ಸಿಗುವುದಿಲ್ಲ. "ಉದ್ಯೋಗ ಖಾತ್ರಿ ಯೋಜನೆಯಿಂದ ಯಾವುದೇ ಲಾಭವಿಲ್ಲ" ಎಂದು ಅವರು ತಂಡೋಪತಂಡವಾಗಿ ಹೊರರಾಜ್ಯಗಳಿಗೆ ವಲಸೆ ಹೋಗುತ್ತಾರೆ. ರಾಜ್ಯ ಸರ್ಕಾರಕ್ಕೆ ಈ ವಿದ್ಯಮಾನದ ಕುರಿತು ಯಾವ ಮಾಹಿತಿಯೂ ಇಲ್ಲ, ಮಾಹಿತಿ ಪಡೆಯುವ ಆಸಕ್ತಿಯೂ ಇಲ್ಲ. ಕೇಂದ್ರದಿಂದ ಬರ ನಿರ್ವಹಣೆಗಾಗಿ ಪಡೆಯುವ ಹಣ ಸಂಬಂಧಪಟ್ಟ ಜನರಿಗೆ ತಲುಪುವ ಯಾವ ಭರವಸೆಯೂ ಇಲ್ಲ.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರಲು, ಅದನ್ನು ಭ್ರಷ್ಟಾಚಾರ ಮುಕ್ತಗೊಳಿಸಲು ಈ ರಾಜ್ಯ ಸರ್ಕಾರ ಸ್ವಲ್ಪವಾದರೂ ಮುತುವರ್ಜಿ ವಹಿಸಿದೆಯಾ ? ಸರ್ಕಾರ ಹುಟ್ಟುವಾಗಲೇ ಭ್ರಷ್ಟಾಚಾರವನ್ನು ಮೈಗೂಡಿಸಿಕೊಂಡು ಬಂದಿರುವಾಗ ಉದ್ಯೋಗಖಾತ್ರಿ ಯೋಜನೆಯಲ್ಲಿ ಭ್ರಷ್ಟಾಚಾರವನ್ನು ಅದು ತಡೆಯಲು ಮುಂದಾಗಬಹುದೆ? ಮಂತ್ರಿಗಳು, ಶಾಸಕರು ಉನ್ನತಮಟ್ಟದ ಭ್ರಷ್ಟಾಚಾರದಲ್ಲಿ ತೊಡಗಿದ್ದರೆ, ಉದ್ಯೋಗ ಖಾತ್ರಿಯಂತಹ ಯೋಜನೆಗಳನ್ನು ತಿಂದುಹಾಕಲು ಸ್ಥಳೀಯ ಪುಢಾರಿಗಳಿಗೆ ಮತ್ತು ಅಕ್ರಮ ಗುತ್ತೆದಾರರಿಗೆ ಬಿಟ್ಟು ಕೊಡಲಾಗಿದೆ. ಹಿಂದಿನ ಅವಧಿಯಲ್ಲಿ ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜವಾಬ್ದಾರಿಯನ್ನು ನಿರ್ವಹಿಸಿದ್ದ ಜಗದೀಶ್ ಶೆಟ್ಟರ್ ಅವರಿಗೆ ಇದೆಲ್ಲಾ ಚೆನ್ನಾಗಿ ಗೊತ್ತಿದೆ. ಕಷ್ಟಪಟ್ಟು ಕೆಲಸಮಾಡಿ, ತಮಗೆ ಬರಬೇಕಾದ ಕೂಲಿ ಹಣವನ್ನು ಕೇಳುವವರಿಗೆ ಅದು ಸಿಗುವುದಿಲ್ಲ. ಕೆಲಸವನ್ನೇ ಮಾಡದೇ ಮಧ್ಯವರ್ತಿಗಳೊಂದಿಗೆ ಕೈ ಜೋಡಿಸಿದವರಿಗೆ ಅಷ್ಟಿಷ್ಟು ಸಿಗುತ್ತದೆ. ಕೆಲಸ ಒದಗಿಸಲಾಗದ ದಿನಗಳಿಗೆ ನಿರುದ್ಯೋಗ ಭತ್ಯೆ ನೀಡಬೇಕೆಂದು ಕಾಯ್ದೆ ಹೇಳುತ್ತದೆ. ಆದರೆ ರಾಜ್ಯ ಸರ್ಕಾರ ಇದುವರೆಗೂ ಕಾಯ್ದೆಯ ಈ ನಿರ್ದೇಶನವನ್ನು ಜಾರಿಮಾಡಿಲ್ಲ. ಹೀಗಾಗಿ ಗ್ರಾಮೀಣ ಬಡವರು ಉದ್ಯೋಗ ಖಾತ್ರಿ ಯೋಜನೆಯ ಮೇಲಿನ ನಂಬಿಕೆಯನ್ನೇ ಕಳೆದುಕೊಂಡಿದ್ದಾರೆ.

ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ 200 ದಿನಗಳ ಕೆಲಸ ಕೊಡಬೇಕು ಮಾತ್ರವಲ್ಲ, ದಿನಗೂಲಿಯನ್ನು ಕನಿಷ್ಠ ರೂ.250 ಕ್ಕೆ ಹೆಚ್ಚಿಸಬೇಕು. ಬರಪೀಡಿತ ಪ್ರದೇಶದ ಜನ ಎಷ್ಟು ದಿನ ಕೆಲಸ ಬಯಸುತ್ತಾರೋ ಅಷ್ಟು ದಿನ ಕೆಲಸ ಒದಗಿಸಲು ಕೇಂದ್ರ ಸರ್ಕಾರ ನಿರ್ಧರಿಸಬೇಕು ಮತ್ತು ರಾಜ್ಯ ಸರ್ಕಾರ ಪ್ರಾಮಾಣಿಕವಾಗಿ ಅದನ್ನು ಜಾರಿಗೊಳಿಸಬೇಕು. ಆದರೆ ರಾಜ್ಯದಲ್ಲಿ ಇಂದು ಆಡಳಿತಾರೂಢ ಬಿಜೆಪಿಯಲ್ಲಿ ನಡೆದಿರುವ ಅಧಿಕಾರಕ್ಕಾಗಿನ ಕಿತ್ತಾಟ ಮತ್ತು ಅದರಿಂದ ಉದ್ಭವವಾಗಿರುವ ರಾಜಕೀಯ ಅಸ್ಥಿರತೆಯನ್ನು ನೋಡುವಾಗ ಬರ ನಿರ್ವಹಣೆಗಾಗಲಿ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿಗಾಗಿಯಾಗಲಿ ಆದ್ಯತೆ ಸಿಕ್ಕೀತೆ ಎಂಬ ಅನುಮಾನ ಜನತೆಯನ್ನು ಕಾಡುತ್ತಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ರಾಜಕೀಯ ಅಸ್ಥಿರತೆ – ಬಿಜೆಪಿ ಬಳುವಳಿ

ರಾಜ್ಯದ ರಾಜಕಾರಣವನ್ನು ಅಸ್ಥಿರತೆ ಎಂಬ ರೋಗ ಕಾಡುತ್ತಿದೆ. ಜನರ ಬದುಕಿನ ಬವಣೆಗಳು ನಿರ್ಲಕ್ಷ್ಯಕ್ಕೊಳಗಾಗಿವೆ. ಇದಕ್ಕೆ ಬಹಳ ಮುಖ್ಯವಾಗಿ ಬಿಜೆಪಿ ಪಕ್ಷದ ಅನೈತಿಕತೆ ಲೂಟಿಕೋರತನವೇ ಕಾರಣ.

ಜಿ.ವಿ. ಶ್ರೀರಾಮರೆಡ್ಡಿ

ಇಡೀ ದೇಶದಲ್ಲೇ ಪ್ರಜಾಪ್ರಭುತ್ವಕ್ಕೆ ಮತ್ತು ಸಂಸದೀಯ ವ್ಯವಸ್ಥೆಗೆ ಬಿಜೆಪಿ ಎಂಬ ಪ್ಯಾಸಿಸ್ಟ್ ರಾಜಕೀಯ ಪಕ್ಷವು ಮಾಡಿದಷ್ಟು ಅಣಕ, ಅವಹೇಳನ ಮತ್ತು ಅಪಮಾನ ದೇಶದ ಬೇರಾವ ರಾಜಕೀಯ ಪಕ್ಷವೂ ಮಾಡಲಿಲ್ಲ. ಸಂಸದೀಯ ಪದ್ಧತಿಗೆ ಈಗ ನಡೆಯುತ್ತಿರುವ ಅಪಚಾರ ಕರ್ನಾಟಕದಲ್ಲಿ ಮಾತ್ರ ಇಡೀ ದೇಶದಲ್ಲಿ ಎಲ್ಲಿಯೂ ನಡೆದಿರಲಿಲ್ಲ.

ಅರಾಜಕತೆ.... ಕಿತ್ತಾಟ...ಜಾತಿ ಜಗಳ

ಇದೇ ಜುಲೈ 10 ರಂದು ರಾಜ್ಯದಲ್ಲಿ 3ನೇಯ ಮುಖ್ಯಮಂತ್ರಿ ಆಯ್ಕೆಗೆ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಬೆಳಿಗ್ಗೆ 11 ಗಂಟೆಗೆ ನಿಗದಿಯಾಗಿತ್ತು. ಆದರೆ ಅದು ಪ್ರಾರಂಭವಾಗಿದ್ದು ಸಂಜೆ 4 ಗಂಟೆಗೆ. ಒಂದು ಹಂತದಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆಯುತ್ತದೋ ಇಲ್ಲವೂ ಎಂಬ ದಟ್ಟ ಅನುಮಾನಿಯು ಪ್ರಾರಂಭವಾಯ್ತು. ಒಡೆದು ಹೋಗಿರುವ ಬಿಜೆಪಿ ಪಕ್ಷದಲ್ಲಿ ನಡೆದ ವಿದ್ಯಮಾನಗಳು ಶಾಸಕರ ಬಗ್ಗೆ ಮತ್ತು ಆ ಪಕ್ಷದ ಬಗ್ಗೆ ಅಸಹ್ಯ ಉಂಟು ಮಾಡಿತು. ನಾನು ಯಾವ ಗುಂಪಿಗೂ ಸೇರಿದವನಲ್ಲ. ನಾನು ಆರ್‌ಎಸ್ ಎಸ್ ಸಂಘಟನೆಯಿಂದ ಬಂದವನು, ನಾನು ಶಿಸ್ತಿನ ಸಿಪಾಯಿ ಎಂದು 8ನೇ ತಾರಿಕಿನವರೆಗೂ ಹೇಳಿಕೊಳ್ಳುತ್ತಿದ್ದ ಸದಾನಂದಗೌಡ ರಾತ್ರೋರಾತ್ರಿ ಒಂದು ಬಣದ ನಾಯಕರಾಗಿ ಮಾರ್ಪಾಡಾಗಿಬಿಟ್ಟರು. ಒಕ್ಕಲಿಗರ ಪ್ರತಿಭಟನೆಯಲ್ಲಿ ಭಾಗವಹಿಸುವುದರ ಮುಖಾಂತರ ತಾನೊಬ್ಬ ಜಾತಿ ಮುಖಂಡರೆಂದು ಸಾಬೀತು ಮಾಡಿದರು. 10ನೇ ತಾರಿಕು ಬೆಳಿಗ್ಗೆ ಅವರ ಅಧಿಕೃತ ನಿವಾಸದಲ್ಲಿ ಸುಮಾರು 40 ಶಾಸಕರು ಸಭೆ ಸೇರಿ ಚರ್ಚೆ ನಡೆಸಿದ ನಂತರ ಸದಾನಂದ ಗೌಡರು ತಮ್ಮ ಪಕ್ಷದ ರಾಷ್ಟ್ರೀಯ ನಾಯಕರಿಗೆ ಗಟ್ಟಿ ಸುದ್ದಿ ತಲುಪಿಸಿಬಿಟ್ಟರು. ನನ್ನ ಎಲ್ಲಾ ಬೆಂಬಲಿಗ ಮಂತ್ರಿಗಳಿಗೂ ಮತ್ತು ಮುಖಂಡರಿಗೂ ಪ್ರಮುಖ ಖಾತೆಗಳಲ್ಲಿ ಮುಂದುವರಿಸಬೇಕು ಮತ್ತು ನಮ್ಮ ಗುಂಪಿಗೆ ಉಪ ಮುಖ್ಯಮಂತ್ರಿ ಸ್ಥಾನವನ್ನು ನೀಡಬೇಕು. ಇಲ್ಲವಾದರೆ ನಾನು ಮುಖ್ಯಮಂತ್ರಿ ಸ್ಥಾನಕ್ಕೆ ರಾಜಿನಾಮೆ ಕೊಡುವುದಿಲ್ಲ ಮತ್ತು ಶಾಸಕಾಂಗ ಪಕ್ಷದ ಸಭೆಗೆ ಹಾಜರಾಗುವುದಿಲ್ಲ ಎಂದು ಪಟ್ಟುಹಿಡಿದ ಸದಾನಂದಗೌಡರ ಈ ಅನಿರೀಕ್ಷಿತ ವರ್ತನೆಯಿಂದ ಬಿಜೆಪಿಗೆ ಗರಬಡಿದಂತಾಗಿ ಕೇಂದ್ರ ವರಿಷ್ಠರು ಸಂಧಾನಕ್ಕೆ ಮುಂದಾದರು. ಬಹಳ ಶ್ರಮದ ನಂತರ ಸದಾನಂದಗೌಡರ ಗುಂಪಿನ ಒತ್ತಾಯಕ್ಕೆ ತಲೆಬಾಗಿದ ಕೇಂದ್ರದ ನಾಯಕತ್ವ ಅವರ ಬೇಡಿಕೆಗಳಿಗೆ ಸಮ್ಮತಿಸಿದಾಗ ಸದಾನಂದಗೌಡರು ರಾಜಭವನಕ್ಕೆ ತೆರಳುವ ಮುನ್ನ ವಿಧಾನಸೌಧದ ಸುತ್ತಲು ಬರಿಗಾಲಲ್ಲಿ ಓಡಾಡಿ ಎಲ್ಲಾ ಪ್ರತಿಮೆಗಳಿಗೂ ಮಾಲಾರ್ಪಣೆ ಮಾಡಿ ಹೊಸ ಸಂಪ್ರದಾಯವನ್ನು ಹುಟ್ಟಿ ಹಾಕಿ ರಾಜಭವನಕ್ಕೆ ತೆರಳಿ ತಮ್ಮ ರಾಜಿನಾಮೆ ಸಲ್ಲಿಸಿ ಶಾಸಕಾಂಗ ಪಕ್ಷದ ಸಭೆಗೆ ತೆರಳಿದರು.

ಅಧಿಕಾರಕ್ಕಾಗಿ ಕಾದಾಟ

ಬಹು ನಿರೀಕ್ಷಿತ ಶಾಸಕಾಂಗದ ಪಕ್ಷದ ಸಭೆ ಕೇವಲ 15 ನಿಮಿಷದಲ್ಲೇ ಮುಗಿಯಿತು ಮತ್ತು ಅದರಲ್ಲಿ 'ಜಗದೀಶ್ ಶೆಟ್ಟರು ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದರು. ಆದರೂ 11ನೇ ತಾರೀಕು 11–15ಕ್ಕೆ ನಿಗದಿಯಾಗಿದ್ದ ಪ್ರಮಾಣ ವಚನ ಸ್ವೀಕಾರ ಸಮಾರಂಭವನ್ನು ದಿಡೀರನೆ 12ನೇ ತಾರೀಕಿಗೆ ಮುಂದೂಡಿದರು. ಕಾರಣ ಶಾಸಕಾಂಗ ಪಕ್ಷದ ಸಭೆಯಲ್ಲಿ ನಾಯಕನನ್ನು ಸರ್ವಾನುಮತದಿಂದ ಆಯ್ಕೆ ಮಾಡಿದರೂ ಮಂತ್ರಿ ಮಂಡಲ ರಚನೆ ಮತ್ತು ಉಪ ಮುಖ್ಯಮಂತ್ರಿಸ್ಥಾನ ಸೃಷ್ಟಿಯ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಉಂಟಾಗಿದ್ದರಿಂದ ಕೇಂದ್ರ ನಾಯಕರು ದಿಲ್ಲಿಗೆ ಧೌಡಾಯಿಸಿದರು. ಉಪ ಮುಖ್ಯಮಂತ್ರಿ ಸ್ಥಾನದ ಸಮಸ್ಯೆ ಪರಿಹಾರ ಆಗುವವರೆಗೂ ಹೊಸ ನಾಯಕ ಆಧಿಕಾರ ವಹಿಸಿಕೊಳ್ಳಲು ಸಾಧ್ಯವಾಗಲಿಲ್ಲ, ಸದಾನಂದ ಗೌಡರ ಗುಂಪು ತನ್ನ ಬಣಕ್ಕೆ ಉಪಮುಖ್ಯಮಂತ್ರಿ ಸ್ಥಾನಬೇಕೆಂದು ಪಟ್ಟು ಹಿಡಿದ ತಕ್ಷಣ ಯಡಿಯೂರಪ್ಪನ ಗುಂಪು ತಮ್ಮ ಬಣಕ್ಕೆ ಮತ್ತು ಒಂದು ನಿರ್ದಿಷ್ಟ ಜಾತಿಗೆ ಸೇರಿದವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಒತ್ತಾಯಿಸಿತು. ಈ ಬ್ಲಾಕ್ ಮೇಲ್ ಒತ್ತಡಕ್ಕೆ ಕಕ್ಕಾಬಿಕ್ಕಿಯಾಗಿ ಬೆಂಗಳೂರಿಗೆ ಬಂದಿದ್ದ ಕೇಂದ್ರ ನಾಯಕರು ದೆಹಲಿಗೆ ವಾಪಸ್ಸಾದರು.

ಹೆಚ್ಚುವರಿ ಕುರ್ಚಿಗಳು

ಮಾರನೇಯ ದಿವಸ ಶಾಸಕಾಂಗ ಪಕ್ಷದ ಹೊಸ ನಾಯಕರು ದೆಹಲಿಗೆ ಹೋಗಿ ಕೊನೆಗೂ ಬಣ ರಾಜಕೀಯ ಮತ್ತು ಜಾತಿ ರಾಜಕೀಯದ ಅಯಾಮಗಳನ್ನು ತೃಪ್ತಿ ಪಡಿಸಲು ಎರಡು ಪ್ರಮುಖ ಜಾತಿಗಳಿಗೆ ದೇಶದಲ್ಲೇ ಮೊದಲ ಬಾರಿಗೆ 2 ಉಪ ಮುಖ್ಯಮಂತ್ರಿ ಸ್ಥಾನಗಳನ್ನು ಸೃಷ್ಟಿಸಿ ಬಿಜೆಪಿಯಲ್ಲಿನ ಭಿನ್ನಮತಕ್ಕೆ ಅಧಿಕೃತ ಮುದ್ರೆಯನ್ನು ಕೇಂದ್ರ ನಾಯಕರು ಒತ್ತಿದರು. ಈ ನಡುವೆ ಎರಡು ಪ್ರಬಲ ಜಾತಿಗಳ ಸಂಘರ್ಷವನ್ನು ಹುಟ್ಟುಹಾಕಿದ ಬಿಜೆಪಿ ಸದಾನಂದ ಗೌಡರು ಬಹಿರಂಗವಾಗಿ ಒಕ್ಕಲಿಗರ ಪ್ರತಿಭಟನಾ ರ್‍ಯಾಲಿಯಲ್ಲಿ ಭಾಗವಹಿಸಿ ಒಕ್ಕಲಿಗರಿಗೆ ಅನ್ಯಾಯವಾದರೆ ದಂಗೆ ಏಳುತ್ತಾರೆಂದು ಎಚ್ಚರಿಕೆಯನ್ನು ನೀಡಿದರು. ಯಾವಾಗಲು ಪರಾವಲಂಬಿಯಾಗಿದ್ದ ಸದಾನಂದಗೌಡರನ್ನು ಒಂದು ಗುಂಪಿನ ನಾಯಕನನ್ನಾಗಿ ಬಿಜೆಪಿ ಸೃಷ್ಟಿ ಮಾಡಿತು ಮತ್ತು ಜಾತಿ ಸಂಘರ್ಷದ ಅಪಾಯಕಾರಿ ಪರಿಸ್ಥಿತಿಯನ್ನು ಹುಟ್ಟು ಹಾಕಿತು.

ಘನತೆ ಮಣ್ಣು ಪಾಲು

ನಂತರ ನಡೆದದ್ದು ಸಂವಿಧಾನದ ನಿರ್ದೇಶನಗಳ ಮತ್ತು ಸಂಸದೀಯ ವ್ಯವಸ್ಥೆಯ ಎಲ್ಲಾ ನಿಯಮಗಳ ಕಗ್ಗೊಲೆ, ಪ್ರಧಾನಿ, ಮುಖ್ಯಮಂತ್ರಿ ಮತ್ತು ಮಂತ್ರಿಗಳು ಸಂವಿಧಾನ ಬದ್ಧವಾದವುಗಳು. ಸಂವಿಧಾನವು ಆ ಸ್ಥಾನಗಳಿಗೆ ಒಂದು ವಿಶೇಷ ಅಧಿಕಾರವನ್ನು ಘನತೆಯನ್ನು ಕೊಟ್ಟಿದೆ. ಸಂವಿಧಾನದ ಪ್ರಕಾರ ಮಂತ್ರಿ ಮಂಡಲ ರಚನೆಯ ವಿಷಯದಲ್ಲಿ ಅವರಿಬ್ಬರಿಗೆ ಪರಮಾಧಿಕಾರವಿದೆ. ಅದೇ ರೀತಿಯಲ್ಲಿ ಮಂತ್ರಿ ಮಂಡಲದ ಸದಸ್ಯರನ್ನು ತೆಗೆಯುವುದು ಮತ್ತು ಸೇರಿಸಿಕೊಳ್ಳುವುದು ಮುಖ್ಯಮಂತ್ರಿ ಮತ್ತು ಪ್ರಧಾನಮಂತ್ರಿಗಳ ಪರಮಾಧಿಕಾರಕ್ಕೆ ಒಳಪಟ್ಟಿರುತ್ತದೆ. ಅದೇ ರೀತಿಯಲ್ಲಿ ಯಾರಿಗೆ ಯಾವ ಖಾತೆ ನೀಡಬೇಕೆಂಬುದನ್ನು ತೀರ್ಮಾನ ಮಾಡುವುದು ಮುಖ್ಯಮಂತ್ರಿಗಳ ಪರಮಾಧಿಕಾರ ಮತ್ತು ವಿವೇಚನೆಗೊಳಪಡುತ್ತದೆ.



ಆದರೆ ಕಳೆದ 12 ನೇ ತಾರಿಕಿನಿಂದ ಇದುವರಿಗೆ ಕರ್ನಾಟಕದಲ್ಲಿ ಮಂತ್ರಿ ಮಂಡಲ ರಚನೆ ಮತ್ತು ಖಾತೆಗಳ ಹಂಚಿಕೆಯಲ್ಲಿ ನಡೆದ ವಿದ್ಯಮಾನಗಳು ಬರಿ ಸಂಸದೀಯ ವ್ಯವಸ್ಥೆಗೆ ಮತ್ತು ಸಂವಿಧಾನಕ್ಕೆ ಮಾಡಿದ ಅಪಚಾರ ಮತ್ತು ಅವಹೇಳನ ಮಾತ್ರವಲ್ಲ ಸಂವಿಧಾನಕ್ಕೆ, ಸಂಸದೀಯ ವ್ಯವಸ್ಥೆಗೆ ಅಪಾಯವನ್ನು ತಂದಿದೆ. ಬಿಜೆಪಿ ಒಂದು ಪ್ಯಾಶಿಸ್ಟ್ ಪಕ್ಷ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ವಿರೋಧಿಯೆಂದು ಸಿಪಿಐ(ಎಂ) ನಿರಂತರವಾಗಿ ಪ್ರತಿಪಾದಿಸುತ್ತಿದ್ದದ್ದು ಈಗ ಬಹಿರಂಗ ಸತ್ಯವಾಗಿದೆ ಮತ್ತು ಅದರ ಬಗ್ಗೆ ಕೆಲವರಿಗಿದ್ದ ಭ್ರಮೆಗಳು ನಾಶವಾಗಿವೆ.

ಧಮಕಿ ಬೆದರಿಕೆಗಳು

ಮುಖ್ಯಮಂತ್ರಿ ಸ್ಥಾನವನ್ನು ಒಂದಿಷ್ಟೂ ಗೌರವವಿಲ್ಲದ ಸ್ಥಾನದಂತೆ ಬಿಜೆಪಿ ಮಾಡಿಬಿಟ್ಟಿತು. ಕಡೆಗೆ ಮುಖ್ಯಮಂತ್ರಿಗೆ ಯಾವ ಸಚಿವರಿಗೆ ಯಾವ ಖಾತೆ ಕೊಡಬೇಕೆಂಬ ಕನಿಷ್ಠ ಅಧಿಕಾರವನ್ನು ಕೊಡದೆ ಕೇವಲ ಬಣ ರಾಜಕಾರಣದ ಬಂಟನನ್ನಾಗಿ ಮಾರ್ಪಾಡು ಮಾಡಿಬಿಟ್ಟರು. ಅದೇ ಸಂದರ್ಭದಲ್ಲಿ ಬಿಜೆಪಿ ಹೈಕಮಾಂಡ್ ಬಣ ರಾಜಕಾರಣಕ್ಕೆ ಸಂಪೂರ್ಣ ಶರಣಾಗಿ ಒಂದು ರೀತಿಯ ಅಸಹಾಯಕ ಕೋಡಂಗಿಯಾಗಿ ಮಾರ್ಪಟ್ಟಿತು. ಇತ್ತ ಮುಖ್ಯಮಂತ್ರಿ ಕೈಕಾಲುಗಳನ್ನು ಕಟ್ಟಿ ಹಾಕಿ ಬಾಯಿಗೆ ಪ್ಲಾಸ್ಟರ್ ಹಾಕಿ ಖಾತೆ ಹಂಚಿಕೆಗೆ ಮುದ್ರೆ ಒತ್ತಿದರು. ನನ್ನ ಗುಂಪಿಗೆ ಪ್ರಮುಖ ಖಾತೆಗಳನ್ನು ಕೊಡದಿದ್ದರೆ ಅಧಿವೇಶನ ನಡೆಸುವುದು ಕಷ್ಟವಾಗುತ್ತದೆ ಎಂದು ಸದಾನಂದಗೌಡ ಧಮಕಿ ಹಾಕಿದರೆ ಯಡಿಯೂರಪ್ಪ ಇನ್ನೊಂದು ರೀತಿ ಧಮಕಿ ಹಾಕಿದರು. ಹಾಗಾಗಿ ಪಕ್ಷದ ಕೇಂದ್ರ ನಾಯಕತ್ವವೂ ಮತ್ತು ಮುಖ್ಯಮಂತ್ರಿ ಬಣ ರಾಜಕೀಯದ ಒತ್ತಡಕ್ಕೆ ಮಣಿದು ಬೆತ್ತಲೆಯಾದರು. ಯಾರಿಗೆ ಯಾವ ಖಾತೆ ಕೊಡಬೇಕೆಂಬುದರ ಕನಿಷ್ಟ ಅಧಿಕಾರವು ಇಲ್ಲದ ಮುಖ್ಯಮಂತ್ರಿ ಸ್ಥಾನ ಯಾಕೆ ಬೇಕು? ಮುಖ್ಯಮಂತ್ರಿಗೆ ರಾಜ್ಯದ ಯಾವ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಸಾಧ್ಯವಿದೆ? ಇಂತಹ ಅಸಹಾಯಕ ಮುಖ್ಯಮಂತ್ರಿ ಮತ್ತು ಸರ್ಕಾರದಿಂದ ರಾಜ್ಯದ ಜನತೆ ಏನನ್ನು ನಿರೀಕ್ಷಿಸಬಹುದು?

ಚುನಾವಣೆ ಮೇಲೆ ಕಣ್ಣು

ರಾಜ್ಯ ಇಂದು ಗಂಭೀರ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಎಲ್ಲಾ ರಂಗಗಳಲ್ಲಿ ಅಸಹಾಯಕತೆ, ಅರಾಜಕತೆ ಮತ್ತು ಅತಂಕ. ಇಂತಹ ಸಂದರ್ಭದಲ್ಲಿ ರಾಜ್ಯಕ್ಕೆ ಬೇಕಾಗಿರುವುದು ದುರ್ಬಲ ಮತ್ತು ಅಸಹಾಯಕ ಮುಖ್ಯಮಂತ್ರಿಯಲ್ಲ. ಬಲಿಷ್ಠ ಮತ್ತು ಜನಪರವಾದ ದೃಢ ನಿರ್ಧಾರಗಳನ್ನು ತೆಗೆದು ಕೊಳ್ಳುವ ಗಟ್ಟಿ ಮುಖ್ಯಮಂತ್ರಿ, ಈ ಯಾವುದರ ಪರಿವೆ ಬಿಜೆಪಿಗೆ ಇಲ್ಲ. ಬದಲಿಗೆ ಮುಂದೆ ಬರುವ ಚುಣಾವಣೆಯಲ್ಲಿ ಅಧಿಕಾರವನ್ನು ಮರಳಿ ಪಡೆಯುವುದೇ ಅದರ ಮುಖ್ಯ ಉದ್ದೇಶ. ಇದಕ್ಕಾಗಿ ಬಿಜೆಪಿ ಎಂತಹ ಕೀಳು ಮಟ್ಟದ ರಾಜಕಾರಣಕ್ಕೆ ಹೇಸುವುದಿಲ್ಲ ಎಂಬುದನ್ನು ಸಾಬೀತು ಪಡಿಸಿದೆ.

ಅತ್ಯಂತ ಕಠಿಣ ಪ್ರಸವ ವೇದನೆಯ ನಂತರ ಮಂತ್ರಿ ಮಂಡಲ ರಚನೆ ಮತ್ತು ಖಾತೆಗಳ ಹಂಚಿಕೆ ಆಗಿದೆ. ಅದರಲ್ಲಿ ಯಾವ ಹೊಸತನವೂ ಇಲ್ಲ, ಉತ್ಸಾಹ ಮತ್ತು ಉಪಯೋಗವೂ ಇಲ್ಲ. ಬಹುತೇಕರು ಕಳಂಕಿತ ಸಚಿವರು, ಖಂಡಿತವಾಗಿಯೂ ಜೈಲಿಗೆ ಹೋಗಲೇ ಬೇಕಾದವರು ಮಂತ್ರಿಮಂಡಲವನ್ನು ತುಂಬಿದ್ದಾರೆ. ಜೈಲಿಗೆ ಹೋಗಬೇಕಾದಂತವರನ್ನು ಗೃಹಮಂತ್ರಿ, ಸಮಾಜದ ಆರೋಗ್ಯವನ್ನು ನಿರಂತರವಾಗಿ ಕೆಡಿಸುತ್ತಿರುವವನು ಆರೋಗ್ಯ ಮಂತ್ರಿ, ವಿದ್ಯೆಯನ್ನು ಮಾರಾಟ ಮಾಡಿದವನು ಶಿಕ್ಷಣ ಮಂತ್ರಿ, ಈ ರೀತಿ ವಿಪರ್ಯಾಸಗಳಿಂದ ತುಂಬಿ

ಪುಟ 13 ಕ್ಕೆ

ಕೆಟ್ಟ ಹೆಸರು

"ಒಬ್ಬ ಮಾಜಿ ಮುಖ್ಯಮಂತ್ರಿಯಿಂದ ಲಿಂಗಾಯಿತ ಸಮಾಜಕ್ಕೆ ಕೆಟ್ಟ ಹೆಸರು ಬಂತು"

– ಡಾ. ತೋಂಟದ ಸಿದ್ಧಲಿಂಗ ಶ್ರೀಗಳು, ಗದಗ

ಶೈಕ್ಷಣಿಕ ಸಮಸ್ಯೆಗಳನ್ನು ಪರಿಹರಿಸಲು ಆಗ್ರಹಿಸಿ ಎಸ್‌ಎಫ್‌ಐ ಪ್ರತಿಭಟನೆ

ಶಾಲಾ ಕಾಲೇಜುಗಳಲ್ಲಿನ ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಶೈಕ್ಷಣಿಕ ಸಮಸ್ಯೆಗಳನ್ನು ಪರಿಹರಿಸುವಂತೆ ಆಗ್ರಹಿಸಿ ಜುಲಾಯಿ 13 ರಂದು ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಎಸ್‌ಎಫ್‌ಐ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಸರಕಾರಿ ಶಾಲಾ ಕಾಲೇಜುಗಳಲ್ಲಿ ಸೂಕ್ತ ಕೊಠಡಿ, ಶೌಚಾಲಯ ಮೊದಲಾದ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು;




ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಡೊನೇಷನ್ ಹಾವಳಿ ನಿಯಂತ್ರಿಸಲು ವಿದ್ಯಾರ್ಥಿ ಪೋಷಕರನ್ನೊಳಗೊಂಡ ಸಮಿತಿ ರಚಿಸಬೇಕು; ಶಿಕ್ಷಣ ಹಕ್ಕು ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು; ಮರು ಮೌಲ್ಯಮಾಪನಕ್ಕಾಗಿ ಬೇಕಾಬಿಟ್ಟಿಯಾಗಿ ಹಣ ವಸೂಲಿ ಮಾಡುವುದನ್ನು ಕೈಬಿಡಬೇಕು; ಸರಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಪಠ್ಯ ಪುಸ್ತಕಗಳನ್ನು ಸಮರ್ಪಕವಾಗಿ ನಿಗದಿತ ಸಮಯಕ್ಕೆ ಒದಗಿಸಬೇಕು; ಬೀಡಿ ಕಾರ್ಮಿಕರ ಮಕ್ಕಳಿಗೆ 1ರಿಂದ 8ನೇ ತರಗತಿ ವರೆಗೆ ವೆಲ್‌ಫೇರ್ ಫಂಡಿನಿಂದ ನೀಡಲಾಗುತ್ತಿದ್ದ ವಿದ್ಯಾರ್ಥಿ ವೇತನವನ್ನು ಮುಂದುವರಿಸಬೇಕು; ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಕೇರಳ ಸರಕಾರವು ನೀಡುವಂತೆ ರೂ.1600 ರಷ್ಟು ಮೊತ್ತವನ್ನು ತಿಂಗಳಿಗೆ ಒದಗಿಸಬೇಕು; ಉಪನ್ಯಾಸಕರನ್ನು ಹೊರಗುತ್ತಿಗೆ, ಅತಿಥಿ ಪದ್ಧತಿಯಲ್ಲಿ ನೇಮಿಸದೆ ಖಾಯಮಾಗಿ ನೇಮಕ ಮಾಡಬೇಕು ಮೊದಲಾದ ಬೇಡಿಕೆಗಳನ್ನು ಮುಂದಿಟ್ಟು ಈ ಪ್ರತಿಭಟನೆಯನ್ನು ನಡೆಸಲಾಗಿತ್ತು.

ನಾಲ್ಕುನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ ಈ ಪ್ರತಿಭಟನೆಯನ್ನುದ್ದೇಶಿಸಿ ಎಸ್‌ಎಫ್‌ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ನಿತಿನ್ ಕುತ್ತಾರ್, ಕಾರ್ಯದರ್ಶಿ ರಝಾಕ್ ಮೊಂಟೆಪದವು ಮಾತನಾಡಿದರು.. ಪ್ರತಿಭಟನೆಯ ಬಳಿಕ ಬೇಡಿಕೆಗಳನ್ನೊಳಗೊಂಡ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಯಿತು. ಎಸ್‌ಎಫ್‌ಐ ಮುಖಂಡರಾದ ರಿತೇಶ್ ಬಜಾಲ್, ಫಯಾಜ್ ಮಂಜನಾಡಿ, ಹಂಝಾ ಕಿನ್ಯಾ, ಮಾಧುರಿ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

★

ತಣ್ಣೀರುಬಾವಿ ನಿವಾಸಿಗಳಿಗೆ ಹಕ್ಕುಪತ್ರಕ್ಕೆ ಆಗ್ರಹಿಸಿ ಮತ್ತೆ ಪ್ರತಿಭಟನೆ



ವರದಿ : ವಾ.ಉ.

ಮಂಗಳೂರು ಮಹಾನಗರದಲ್ಲಿ ಸಮುದ್ರ ದಂಡೆ ಮತ್ತು ನದಿ ದಂಡೆಯ ಮಧ್ಯೆಯಿರುವ ತಣ್ಣೀರುಬಾವಿ ಎಂಬುದು ಬರಿ ಮರಳು ತುಂಬಿದ ಪ್ರದೇಶ. ಕಳೆದ 80 ವರ್ಷಗಳಿಂದ ಸ್ವಂತ ನಿವೇಶನವಿಲ್ಲದ ಹಲವಾರು ಕುಟುಂಬಗಳು ವಾಸವಾಗಿರುವ ಈ ಪ್ರದೇಶದಲ್ಲಿ ಈಗ 265 ಮನೆಗಳಿವೆ. ಆದರೆ ಈ ಯಾವ ಮನೆಗಳಿಗೂ ಸರ್ಕಾರವು ಹಕ್ಕುಪತ್ರ ನೀಡಿರುವುದಿಲ್ಲ. ಕರಾವಳಿ ನಿಯಂತ್ರಣ ವಲಯ (ಸಿಆರ್‌ಜೆಡ್) ಇತ್ಯಾದಿ ಸರ್ಕಾರವು ಕಾಲಕಾಲಕ್ಕೆ ಅನುಷ್ಠಾನಗೊಳಿಸುತ್ತಿರುವ ನೀತಿಗಳಿಂದಾಗಿ ಅಲ್ಲಿನ ನಿವಾಸಿಗಳನ್ನು ಒಕ್ಕಲೆಬಬ್ಬಿಸಲಾಗುವುದೆಂದು ಮಹಾನಗರ ಪಾಲಿಕೆ ಹಾಗೂ ಸರ್ಕಾರದ ವತಿಯಿಂದ ಪ್ರಕಟಣೆಗಳು ಬರುತ್ತಾ ಇರುತ್ತವೆ. ಇತ್ತೀಚೆಗೆ ಪರಿಸರ ಇಲಾಖೆಯು ಸಮುದ್ರ ತೀರದ ತಣ್ಣೀರು ಬಾವಿ ಹಾಗೂ ಇತರ ಕೆಲವು ಪ್ರದೇಶಗಳನ್ನು ಸಿಆರ್‌ಜೆಡ್ ವ್ಯಾಪ್ತಿಯಿಂದ ವಿರಹಿತಗೊಳಿಸುವ ನಿರೂಪಣೆಯನ್ನು ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ಇಲ್ಲಿನ ನಿವಾಸಿಗಳು ತಮ್ಮ ಭದ್ರತೆ ಹಾಗೂ ಸರ್ಕಾರಿ ಸೌಕರ್ಯಗಳನ್ನು ಪಡೆಯುವ ದೃಷ್ಟಿಯಿಂದ ತಮಗೆ ಹಕ್ಕುಪತ್ರ ನೀಡಬೇಕೆಂದು ಒತ್ತಾಯಿಸುತ್ತಾ ಬಂದಿದ್ದಾರೆ.

ನಗರಗಳ ವ್ಯಾಪ್ತಿಯ ಸಿಆರ್‌ಜೆಡ್ ಪ್ರದೇಶಗಳಲ್ಲಿ ಪರಿಸರ-ಪ್ರವಾಸೋದ್ಯಮ ಬೆಳೆಸಲು ಸಿಆರ್‌ಜೆಡ್ ನಿಯಮಗಳಲ್ಲಿ ಅವಕಾಶವಿರುವುದನ್ನು ಬಳಸಿಕೊಂಡು, ತಣ್ಣೀರುಬಾವಿ ಪ್ರದೇಶದ ನಿವಾಸಿಗಳನ್ನು ಒಕ್ಕಲೆಬ್ಬಿಸಿ ಉದ್ಯಮಿಯೊಬ್ಬರಿಗೆ ರೆಸಾರ್ಟ್ ಮಾಡಲು ಇಲ್ಲವೇ ಗಾಲ್ಫ್ ಮೈದಾನ ರಚಿಸಲು ನೀಡುವ ಮಂಗಳೂರು ಮ.ನ.ಪಾ. ಆಡಳಿತ ವಲಯಗಳಲ್ಲಿ ಸಂಚು ನಡೆಯುತ್ತಿದೆ. ಪಾಲಿಕೆಯ ಆಡಳಿತ ನಡೆಸುವ ಬಿಜೆಪಿ ಪಕ್ಷಕ್ಕೆ ಉದ್ಯಮಿಯೊಬ್ಬನ ಹಿತರಕ್ಷಣೆ ಪ್ರಧಾನವಾಗಿದೆಯೇ ಹೊರತು 265 ಬಡ ದಲಿತ ಹಾಗೂ ಅಲ್ಪಸಂಖ್ಯಾತರ ಕುಟುಂಬಗಳದ್ದಲ್ಲ. ಹಕ್ಕುಪತ್ರಕ್ಕಾಗಿ ಒತ್ತಾಯಿಸಿ ಪ್ರತಿಭಟನೆ ಪಾಲಿಕೆ ಕಚೇರಿ ಹಾಗೂ ಜಿಲ್ಲಾಧಿಕಾರಿ ಕಚೇರಿ ಎದುರು ಈ ಮೊದಲು ಮೂರು ಬಾರಿ ನಡೆದಿದ್ದರೂ ಸರ್ಕಾರ ಸ್ಪಂದಿಸದಿರುವ ಹಿನ್ನೆಲೆಯಲ್ಲಿ ನಾಲ್ಕನೇ ಬಾರಿಗೆ ಜುಲಾಯಿ 17 ರಂದು ಪ್ರತಿಭಟನೆ ನಡೆದಿರುತ್ತದೆ.. ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಹಾಗೂ ದಲಿತ ಹಕ್ಕುಗಳ ಸಮಿತಿ ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ಇನ್ನೂರಕ್ಕೂ ಹೆಚ್ಚು ತಣ್ಣೀರುಬಾವಿಯ ನಿವಾಸಿಗಳು ಭಾಗವಹಿಸಿದ್ದರು.

ದಲಿತ ಹಕ್ಕುಗಳ ರಾಜ್ಯ ಸಮಿತಿ ಸದಸ್ಯರಾದ ಕೃಷ್ಣಪ್ಪ ಕೊಂಚಾಡಿ, ಜಿಲ್ಲಾ ಕಾರ್ಯದರ್ಶಿ ಲಿಂಗಪ್ಪ ನಂತೂರು, ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ, ಪ್ರಗತಿಪರ ಚಿಂತಕರ ವೇದಿಕೆಯ ಪಿ.ಎ.ಪ್ರಸನ್ನ, ಬ್ಯಾಂಕ್ ನೌಕರರ ಮುಂದಾಳು ಬಿ.ಎಂ.ಮಾಧವ, ತಣ್ಣೀರು ಬಾವಿಯ ಶಮೀಮ ಬಾನು ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ದಲಿತ ಹಕ್ಕುಗಳ ಸಮಿತಿಯ ಜಯ ಕುಮಾರ್, ತಿಮ್ಮಯ್ಯ ಕೊಂಚಾಡಿ, ಯಮುನಾ ಪಚ್ಚನಾಡಿ, ಸರೋಜಮ್ಮ, ಕಿಶೋರ್ ಪೊರ್ಕೋಡಿ, ವಿಠಲ ಮುಲ್ಕಿ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಪ್ರತಿಭಟನೆಯ ಬಳಿಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಪುತ್ತೂರಿನಲ್ಲಿ ಬೀಡಿ ಕಾರ್ಮಿಕರ ಪ್ರತಿಭಟನೆ

ಬೀಡಿ ಕಾರ್ಮಿಕರಿಗೆ ಮತ್ತು ಅವರ ಮಕ್ಕಳಿಗೆ ಆಗುತ್ತಿರುವ ಅನ್ಯಾಯಗಳನ್ನು ವಿರೋಧಿಸಿ ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಿಐಟಿಯು ಬೆಂಬಲಿತ ಪುತ್ತೂರು ತಾಲೂಕು ಬೀಡಿ ಕೆಲಸಗಾರರ ಸಂಘದ ನೇತೃತ್ವದಲ್ಲಿ ಬೀಡಿ ಕಾರ್ಮಿಕರು ಪುತ್ತೂರು ಉಪವಿಭಾಗಾಧಿಕಾರಿಗಳ ಕಚೇರಿ ಎದುರು ಜುಲಾಯಿ 17, 2012 ರಂದು ಪ್ರತಿಭಟನೆ ನಡೆಸಿದರು.

ಪುತ್ತೂರಿನ ರೈಲ್ವೆ ನಿಲ್ದಾಣದ ಬಳಿಯಿರುವ ಸಿಐಟಿಯು ಕಚೇರಿಯಿಂದ ರೈಲ್ವೆ ನಿಲ್ದಾಣ ರಸ್ತೆ, ಮುಖ್ಯ ರಸ್ತೆಯಾಗಿ ಉಪವಿಭಾಗಾಧಿಕಾರಿ ಕಚೇರಿಯ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಬೀಡಿ ಕಾರ್ಮಿಕರು ಬಳಿಕ ಅಲ್ಲಲ್ಲಿ ಪ್ರತಿಭಟನಾ ಸಭೆ ನಡೆಸಿ, ತಮ್ಮ ನ್ಯಾಯೋಚಿತ ಬೇಡಿಕೆಗಳನ್ನು ಈಡೇರಿಸದ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬೀಡಿ ಕಾರ್ಮಿಕರ ಮಕ್ಕಳಿಗೆ ಕಾರ್ಮಿಕರ ಕ್ಷೇಮ ನಿಧಿಯ ಅವರ ದೇಣಿಗೆಯಿಂದಲೇ 1ರಿಂದ 8ನೇ ತರಗತಿಯ ವರೆಗೆ ವಿದ್ಯಾಭ್ಯಾಸಕ್ಕಾಗಿ ನೀಡಲಾಗುತ್ತಿದ್ದ ವಿದ್ಯಾರ್ಥಿ ವೇತನವನ್ನು ನಿಲ್ಲಿಸಿರುವುದನ್ನು ತೀವ್ರವಾಗಿ ಪ್ರತಿಭಟಿಸಲಾಗಿದ್ದು, ಈ ವಿದ್ಯಾರ್ಥಿ ವೇತನವನ್ನು ಸರ್ಕಾರ ಮುಂದುವರಿಸ ಬೇಕೆಂದು ಒತ್ತಾಯಿಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ದ.ಕ.ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್ನಿನ ಉಪಾಧ್ಯಕ್ಷ ಯು.ಬಿ.ಲೋಕಯ್ಯ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಜಿಲ್ಲಾ ಫೆಡರೇಶನ್‌ನ ಮುಖಂಡ ರಾಮಣ್ಣ ವಿಟ್ಲ, ಪುತ್ತೂರು ತಾಲೂಕು ಬೀಡಿ ಕೆಲಸಗಾರರ ಸಂಘದ ಗೌರವಾಧ್ಯಕ್ಷ ಪಿ.ಕೆ.ಸತೀಶನ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ತಾರತಮ್ಯ ಬೇಡ

"ಬಡವ, ಶ್ರೀಮಂತ ಎಂಬ ತಾರತಮ್ಯವಿಲ್ಲದೆ ಎಲ್ಲ ಮಕ್ಕಳಿಗೆ ಸಮಾನ ಶಿಕ್ಷಣ ಸಿಗುವಂಥ ವ್ಯವಸ್ಥೆ ಇಂದಿನ ಅಗತ್ಯ. ಈ ದೃಷ್ಟಿಯಿಂದ ಪ್ರಾಥಮಿಕ ಶಿಕ್ಷಣವನ್ನು ರಾಷ್ಟ್ರೀಕರಣ ಮಾಡಿ ಕೇಂದ್ರ ಸರ್ಕಾರ ಅದಕ್ಕೆ ಅಗತ್ಯವಾದಷ್ಟು ಹಣವನ್ನು ಬಜೆಟ್‌ನಲ್ಲಿಯೇ ಒದಗಿಸುವ ವ್ಯವಸ್ಥೆ ಮಾಡಬೇಕು"

– ವಿಜಯಕರ್ನಾಟಕ ಸಂಪಾದಕೀಯ,
19 ಜುಲೈ 2012.

ಜನಶಕ್ತಿ
ಕನ್ನಡ ವಾರಪತ್ರಿಕೆ

ವಿದೇಶಿ ಬಂಡವಾಳದ ಒತ್ತಡ ಮತ್ತು ಒಂದು ಕೈಲಾಗದ ಸರಕಾರ

'ಪೀಪಲ್ಸ್ ಡೆಮಾಕ್ರಸಿ' ವಾರ ಪತ್ರಿಕೆಯ ಜುಲೈ 22, 2012 ರ ಸಂಚಿಕೆಯ ಸಂಪಾದಕೀಯ

ಬಂಡವಾಳಶಾಹಿ ಬಿಕ್ಕಟ್ಟಿನ ಐದನೇ ಅಲೆಯ ಹೊಸ್ತಿಲಲ್ಲಿ, ತನಗೆ ಗರಿಷ್ಟ ಲಾಭ ಗಳಿಸಲು ಇರುವ ಮಾರ್ಗಗಳಲ್ಲಿ ಯಾವುದೂ ಉಳಿದಿಲ್ಲ ಎಂಬ ಹತಾಶೆಯುಲ್ಲಿರುವ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ತನ್ನ ಲಾಭಗಳನ್ನು ಗರಿಷ್ಟ ಮಟ್ಟಕ್ಕೇರಿಸಲು ಹೊಸ-ಹೊಸ ದಾರಿಗಳನ್ನು ಸೃಷ್ಟಿಸಿಕೊಳ್ಳಬೇಕಾಗಿದೆ. ಆದ್ದರಿಂದಲೇ ಭಾರತದಂತಹ ದೇಶಗಳ ಮೇಲೆ ಇನ್ನಷ್ಟು ಹಣಕಾಸು ಉದಾರೀಕರಣದ ದಾರಿಯನ್ನು ಹಿಡಿಯಲು, ಆ ಮೂಲಕ ಭಾರತೀಯ ಜನತೆಯ ವೆಚ್ಚದಲ್ಲಿ ಮತ್ತು ಭಾರತದ ಆರ್ಥಿಕ ಮೂಲಾಂಶಗಳನ್ನು ವಿರೂಪಗೊಳಿಸಿ ಅದರ ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳಲು ಅನುಮತಿ ಕೊಡಬೇಕೆಂಬ ಒತ್ತಡಗಳು ಬರುತ್ತಿವೆ. ಅದರಲ್ಲಿ ಅಧ್ಯಕ್ಷ ಒಬಾಮರ 'ಸಲಹೆ' ಇತ್ತೀಚಿನದಷ್ಟೇ. ಈ ಎಲ್ಲ ಒತ್ತಡಗಳ ಹಿಂದೆ ಆಗ್ರಹಗಳ ದೊಡ್ಡ ಪಟ್ಟಿಯೇ ಇದೆ. ಇದೀಗ ನಮ್ಮ ಮುಂದಿರುವ ವಾಸ್ತವತೆ. ಹೀಗಿದ್ದರೂ, ದುರದೃಷ್ಟವಶಾತ್, ಇಂತಹ ಒತ್ತಡಗಳು ಕೆಲಸ ಮಾಡುತ್ತಿರುವಂತೆ ಕಾಣುತ್ತಿದೆ.

ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದ ಸಾಮ್ರಾಜ್ಯಶಾಹಿ ಜಾಗತೀಕರಣ ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳಲು ಹತಾಶೆಯಿಂದ ಹೊಸ-ಹೊಸ ಮಾರ್ಗಗಳ ಹುಡುಕಾಟ ನಡೆಸಿದೆ. ಬಂಡವಾಳ ಎಂದೂ ನಿರುದ್ಯೋಗಿಯಾಗಿ ಉಳಿಯಲಾರದು-ಇದು ಬಂಡವಾಳಶಾಹಿ ವ್ಯವಸ್ಥೆಯ ಸಹಜ ಸ್ವಭಾವ. ಲಾಭಗಳಿಕೆಯಲ್ಲಿ ನಿರತವಾಗಬೇಕಾದರೆ ಅದು ಮಾನವ ಜೀವಿಗಳ ಒಂದು ದೊಡ್ಡ ಭಾಗವನ್ನು ಶ್ರಮಶಕ್ತಿಯ ಮೀಸಲು ಪಡೆಯ ಮಟ್ಟಕ್ಕೆ ನೂಕುತ್ತದೆ. ಆದರೆ ಇಂದು ಬಂಡವಾಳಶಾಹಿ ಬಿಕ್ಕಟ್ಟಿನ ಐದನೇ ಅಲೆಯ ಹೊಸ್ತಿಲಲ್ಲಿ ಅದಕ್ಕೆ ಗರಿಷ್ಟಲಾಭ ಗಳಿಸಲು ಲಭ್ಯ ಇರುವ ಮಾರ್ಗಗಳಲ್ಲಿ ಯಾವುದೂ ಉಳಿದಿಲ್ಲ ಎಂದನಿಸುತ್ತಿದೆ. ಆದ್ದರಿಂದಲೇ ಈ ಹತಾಶೆ.


ಸಾಮ್ರಾಜ್ಯಶಾಹಿ ಜಾಗತೀಕರಣ ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳುವಲ್ಲಿ ಆರ್ಥಿಕ ಅಸಮಾನತೆಗಳನ್ನು, ಒಂದು ದೇಶದ ಒಳಗೂ, ವಿವಿಧ ದೇಶಗಳ ನಡುವೆಯೂ ವಿಪರೀತವಾಗಿ ಹೆಚ್ಚಿಸಿದೆ. ಇದರಿಂದ ಜನಗಳ ಖರೀದಿ ಸಾಮರ್ಥ್ಯ ಇಳಿಮುಖವಾಗಿ ಒಟ್ಟು ಬೇಡಿಕೆಯ ಮಿತಿ ಉಂಟಾಗಿದೆ. ಇದು ಲಾಭಗಳನ್ನು ಗರಿಷ್ಟಗೊಳಿಸುವ ಕೆಲಸಕ್ಕೆ ತೀವ್ರ ಅಡಚಣೆ ಉಂಟು ಮಾಡಿದೆ. ಅಗ್ಗ ದರದಲ್ಲಿ ಸಾಲ ಒದಗಿಸುವ ಮೂಲಕ ಈ ಅಡಚಣೆಯನ್ನು ಹೋಗಲಾಡಿಸಲು ಪ್ರಯತ್ನಿಸಲಾಯಿತು. ಇದನ್ನೇ 'ಅಪಾತ್ರ ಸಾಲ' ಎನ್ನಲಾಗುತ್ತದೆ. ಇಂತಹ ಸಾಲಗಳ ಮೂಲಕ ನಡೆಸಿದ ಖರ್ಚುಗಳು ಅಲ್ಪಾವಧಿಯಲ್ಲೇನೋ ಆರ್ಥಿಕದಲ್ಲಿ ಒಟ್ಟು ಬೇಡಿಕೆಯನ್ನು ಉಬ್ಬಿಸಿತು. ಆದರೆ ಸಾಲ ಮರುಪಾವತಿಯ ಸಮಯ ಬಂದಾಗ ಬಹಳಷ್ಟು ಸಾಲಗಳು ಸುಸ್ತಿಯಾದವು. ಇದೇ 2008ರ ಹಣಕಾಸು ಕುಸಿತಕ್ಕೆ ಕಾರಣವಾಯಿತು.

ಈ ಬಿಕ್ಕಟ್ಟಿನಿಂದ ಹೊರಬರಲು, ಈ ಬಿಕ್ಕಟ್ಟನ್ನು ತರಲು ಕಾರಣರಾದ ಅದೇ ಹಣಕಾಸು ಸಂಸ್ಥೆಗಳಿಗೆ ಬೃಹತ್ ಪ್ರಮಾಣದಲ್ಲಿ ಬೇಲೌಟ್ ಪ್ಯಾಕೇಜುಗಳನ್ನು, ಅಂದರೆ ಪಾರುಮಾಡುವ ನಿಧಿಗಳನ್ನು ಒದಗಿಸಲಾಯಿತು. ಇದಕ್ಕೆ ಹಣಕಾಸನ್ನು ಬಂಡವಾಳಶಾಹಿ ಪ್ರಭುತ್ವಗಳು ಸಾಲ ಮಾಡಿ ತಂದು ಒದಗಿಸಿದವು. ಇದರಿಂದ ಬಿಕ್ಕಟ್ಟು ತಂದು ಹಾಕಿದ ಹಣಕಾಸು ಕಾರ್ಪೊರೇಟುಗಳೇನೋ ಮತ್ತೆ ಉಸಿರಾಡಲಾರಂಭಿಸಿದವು, ಆದರೆ ಹೀಗೆ ಮಾಡುವಾಗ ಯುರೋಪಿನ ಹಲವು ಸರಕಾರಗಳು ಭಾರೀ ಸಾಲಕೂಪಕ್ಕೆ ಬಿದ್ದವು, ದಿವಾಳಿಯ ಅಂಚಿಗೇ ಬಂದು ನಿಂತವು. ಹೀಗೆ ಕಾರ್ಪೊರೇಟ್ ದಿವಾಳಿಗಳು ಸಾರ್ವಭೌಮ ದಿವಾಳಿಗಳಾಗಿ, ಅಂದರೆ ಸರಕಾರೀ ದಿವಾಳಿಗಳಾಗಿ ಪರಿವರ್ತನೆಗೊಂಡವು. ಬಿಕ್ಕಟ್ಟಿನ ಈ ಅಲೆಯಿಂದ ಹೊರಬರಲು ಸರಕಾರೀ ಖರ್ಚುಗಳನ್ನು ತೀವ್ರವಾಗಿ ಇಳಿಸಬೇಕೆಂದು ಮಿತವ್ಯಯದ ಕ್ರಮಗಳ ಹೆಸರಿನಲ್ಲಿ ಜನಸಾಮಾನ್ಯರ ಮೇಲೆ ಭಾರೀ ಹೊರೆ ಹಾಕಲಾಗಿದೆ. ಗ್ರೀಸ್, ಸ್ಪೇನ್, ಐರ್ಲೆಂಡ್‌ನಂತಹ ದೇಶಗಳ ಸರಕಾರಗಳನ್ನು ದಿವಾಳಿಯಿಂದ ಪಾರು ಮಾಡಲು ಐಎಂಎಫ್ ಮತ್ತು ಯುರೋಪಿಯನ್ ಬ್ಯಾಂಕ್ ಬೃಹತ್ ಪ್ರಮಾಣದ ಸಾಲಗಳ ಹೊರೆಯನ್ನು ಅವುಗಳ ಮೇಲೆ ಹೇರಿವೆ. 2014ರಲ್ಲಿ ಈ ದೇಶಗಳು ಈ ಸಾಲವನ್ನು ಮರುಪಾವತಿ ಮಾಡಬೇಕಾದ ಸಮಯ ಬರುವಾಗ ಅದು ತಮ್ಮಿಂದ ಸಾಧ್ಯವಿಲ್ಲ ಎಂದು ಕಂಡು ಬರುವ ಸಂಭವವೇ ಹೆಚ್ಚಾಗಿದೆ. ಹೀಗೆ ಆರಂಭವಾಗಲಿದೆ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ಮುಂದಿನ ಅಲೆ. ಇಂತಹ ಬಿಕ್ಕಟ್ಟುಗಳ ಪ್ರತಿಯೊಂದು ಅಲೆಯನ್ನು ನಿವಾರಿಸುವಾಗಲೂ ಜನಗಳ ಮೇಲೆ ಹೆಚ್ಚೆಚ್ಚು ಹೊರೆಗಳನ್ನು ಹಾಕಲಾಗುತ್ತಿದೆ, ಶೋಷಣೆಯನ್ನು ತೀವ್ರಗೊಳಿಸಲಾಗುತ್ತಿದೆ.

ಒತ್ತಡಗಳ ಸರದಿ

ಇಂತಹ ಪರಿಸ್ಥಿತಿಗಳಲ್ಲಿ, ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ತನ್ನ ಲಾಭಗಳನ್ನು ಗರಿಷ್ಟ ಮಟ್ಟಕ್ಕೇರಿಸಲು ಹೊಸ-ಹೊಸ ದಾರಿಗಳನ್ನು ಸೃಷ್ಟಿಸಿಕೊಳ್ಳಬೇಕಾಗಿದೆ. ಆದ್ದರಿಂದಲೇ ಭಾರತದಂತಹ ದೇಶಗಳ ಮೇಲೆ ಇನ್ನಷ್ಟು ಹಣಕಾಸು ಉದಾರೀಕರಣದ ದಾರಿಯನ್ನು ಹಿಡಿಯಲು, ಆ ಮೂಲಕ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಭಾರತೀಯ ಜನತೆಯ ವೆಚ್ಚದಲ್ಲಿ ಮತ್ತು ಭಾರತದ ಆರ್ಥಿಕ ಮೂಲಾಂಶಗಳನ್ನು ವಿರೂಪಗೊಳಿಸಿ ತನ್ನ ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳಲು ಅನುಮತಿ ಕೊಡಬೇಕೆಂಬ ಒತ್ತಡಗಳು ಬರುತ್ತಿವೆ.

ಇದೀಗ ಭಾರತ ಇನ್ನಷ್ಟು ಹಣಕಾಸು ಉದಾರೀಕರಣದ ದೊಡ್ಡ ಪ್ರಮಾಣದ 'ಸುಧಾರಣೆ'ಗೆ ಇಳಿಯಬೇಕು ಎಂದು 'ಸಲಹೆ' ಕೊಡುವ('ಒತ್ತಡ ಹಾಕುವ' ಎಂದು ಓದಿಕೊಳ್ಳಿ) ಸರದಿ ಅಧ್ಯಕ್ಷ ಒಬಾಮರದ್ದು. "ಆರ್ಥಿಕ ಸುಧಾರಣೆಗಳ ಇನ್ನೊಂದು ಅಲೆಗೆ ಇದೀಗ ಸರಿಯಾದ ಸಮಯವಿರಬಹುದು" ಮತ್ತು "ಚಿಲ್ಲರೆ ವ್ಯಾಪಾರ ಮುಂತಾದ ಹತ್ತು ಹಲವು ವಲಯಗಳಲ್ಲಿ, ಭಾರತ ವಿದೇಶಿ ಹೂಡಿಕೆಯನ್ನು ಸೀಮಿತಗೊಳಿಸುತ್ತದೆ ಅಥವ ನಿರ್ಬಂಧಿಸುತ್ತದೆ" ಎನ್ನುತ್ತಾರೆ ಅವರು. ಹೀಗೆ, ಸಾಕಷ್ಟು



ದೀರ್ಘಕಾಲ ಎಳೆಯಬಹುದಾದ ಸದ್ಯದ ಜಾಗತಿಕ ಹಿಂಜರಿತದಲ್ಲಿ ಮುಂದುವರೆದ ದೇಶಗಳು ಮುಗ್ಗರಿಸುತ್ತಿರುವ ಸಮಯದಲ್ಲಿ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ತನ್ನ ಲಾಭವನ್ನು ಗರಿಷ್ಟ ಮಟ್ಟಕ್ಕೇರಿಸಲು ಅನುಕೂಲವಾಗುವಂತೆ ನಮ್ಮ ಆರ್ಥಿಕವನ್ನು ಬಲವಂತದಿಂದ ತೆರೆಸಿಕೊಳ್ಳಲಿಕ್ಕಾಗಿಯೇ ಈ ಒತ್ತಡ. "ಅಮೆರಿಕಾ-ಭಾರತ ಪಾಲುದಾರಿಕೆಯ ಮಹಾ ಪ್ರತಿಪಾದಕರಲ್ಲಿ ಒಬ್ಬರಾದ" ಅಮೆರಿಕಾದ ವ್ಯಾಪಾರೀ ಸಮುದಾಯದ ಹಿತದೃಷ್ಟಿಯಿಂದ ಮಾತನಾಡಿರುವ ಅಧ್ಯಕ್ಷ ಒಬಾಮ, ಭಾರತ ಇನ್ನಷ್ಟು 'ಸುಧಾರಣೆ'ಗಳನ್ನು ತರಲು ಮುಂದಾಗಬೇಕೆಂಬ ತಮ್ಮ ಮಾತನ್ನು ಕೇಳಬೇಕು ಎಂಬ ಒತ್ತಡ ಹಾಕುತ್ತಿದ್ದಾರೆ.

ಅಧ್ಯಕ್ಷ ಒಬಾಮರ ಟಿಪ್ಪಣಿಗಳು ಏನೋ ಹೇಳಿಬಿಟ್ಟಂತವುಗಳು ಎಂದು ಕಾಣಬಾರದು. ಈ ಹಿಂದೆ, ಅಂತರ್ರಾಷ್ಟ್ರೀಯ ಸಾಲ ನೀಡಿಕೆ ಸಂಸ್ಥೆಗಳು ಭಾರತದ ಅರ್ಹತೆಯ ದರ್ಜೆಯನ್ನು ಕೆಳಗಿಳಿಸಿದವು, ಅಮೂಲಕ ಭಾರತ ಇನ್ನಷ್ಟು 'ಸುಧಾರಣೆಗಳಿ'ಗೆ ಮುಂದಾಗಬೇಕಾದ ಒತ್ತಡ ಬೀಳುತ್ತದೆ ಎಂಬ ನಿರೀಕ್ಷೆ ಅವುಗಳದ್ದು. ಏಪ್ರಿಲ್‌ನಲ್ಲಿ ಮೂರು ಪ್ರಧಾನ ಅಂತರ್ರಾಷ್ಟ್ರೀಯ ದರ್ಜೆ ನಿರ್ಧರಿಸುವ ಸಂಸ್ಥೆಗಳಲ್ಲಿ ಒಂದಾದ 'ಸ್ಟಾಂಡರ್ಡ್ ಅಂಡ್ ಪೂರ್' ಭಾರತದಲ್ಲಿ ಹೂಡಿಕೆಯ ಸಾಧ್ಯತೆ 'ಸ್ಥಿರ' ಎಂದು ಇದ್ದುದನ್ನು 'ನಕಾರಾತ್ಮಕ' ಎಂಬ ಮಟ್ಟಕ್ಕೆ ಇಳಿಸಿತು. 'ವಿಲ್ ಇಂಡಿಯಾ ಬಿ ದಿ ಫಸ್ಟ್ ಬ್ರಿಕ್ ಫಾಲನ್ ಏಂಜೆಲ್' (ಬ್ರೆಝಿಲ್-ರಶ್ಯ-ಚೀನಾ-ಭಾರತ-ದಕ್ಷಿಣಆಫ್ರಿಕಾ ದೇಶಗಳ ಬ್ರಿಕ್ಸ್ ಕೂಟದಲ್ಲಿ ಭಾರತ ಧರೆಗುರುಳುವ ಮೊದಲ ದೇವತೆಯಾಗಬಹುದೇ?) ಎಂಬ ಶಿರೋನಾಮೆ ಹೊತ್ತ ಅದರ ವರದಿ "ಪರಮ ರಾಜಕೀಯ ಅಧಿಕಾರ ಯಾವುದೇ ಸಂಪುಟ ಸ್ಥಾನಮಾನ ಇರದ ಕಾಂಗ್ರೆಸ್ ಪಕ್ಷದ ಮುಖಂಡರಾದ ಸೋನಿಯಾ ಗಾಂಧಿ ಬಳಿಯಿದ್ದರೆ, ಸರಕಾರದ ನೇತೃತ್ವವನ್ನು ತನ್ನದೇ ಸ್ವಂತ ರಾಜಕೀಯ ನೆಲೆ ಇಲ್ಲದ, ಚುನಾಯಿತರಲ್ಲದ ಪ್ರಧಾನ ಮಂತ್ರಿ ಮನಮೋಹನ ಸಿಂಗ್ ವಹಿಸಿದ್ದಾರೆ" ಎಂದು ಹೇಳುವ ಭಂಡತನ ತೋರಿದೆ.

ಹಣಕಾಸು ಬಂಡವಾಳದ ಅಜೆಂಡಾ

ಈ ವರದಿಯನ್ನು ಅನುಸರಿಸಿ 'ಫಿಚ್ ರೇಟಿಂಗ್ಸ್' ಭಾರತದ ದರ್ಜೆಯನ್ನು 'ಸ್ಥಿರ' ದಿಂದ 'ನಕಾರಾತ್ಮಕ' ಎಂದು ಇಳಿಸಿತು. ಈ ಮೂರು ಸಂಸ್ಥೆಗಳಲ್ಲಿ 'ಮೂಡೀಸ್' ಮಾತ್ರ 'ಸ್ಥಿರ' ಎಂಬ ದರ್ಜೆಯನ್ನು ಉಳಿಸಿದೆ. ಈ ಮೂರೂ ಸಂಸ್ಥೆಗಳು, ಭಾರತ ಇನ್ನಷ್ಟು 'ಸುಧಾರಣೆ'ಗಳಿಗೆ ಇಳಿಯದಿದ್ದರೆ, ಭಾರತದಲ್ಲಿ ವಿದೇಶಿ ಹೂಡಿಕೆಗಳಿಗೆ ಈಗಲೂ ಅಳತೆಗೋಲಾಗಿರುವ ದರ್ಜೆಗಳನ್ನು ಭಾರತದ ವಿಷಯದಲ್ಲಿ ಮೇಲ್ಮಟ್ಟಕ್ಕೆ ಏರಿಸುವುದಿಲ್ಲ ಎಂದು ಒಂದು ರೀತಿಯಲ್ಲಿ ಬೆದರಿಕೆಯನ್ನೇ ಒಡ್ಡಿವೆ.

ಈ ದರ್ಜೆ ನೀಡುವ ಏಜೆನ್ಸಿಗಳು ದರ್ಜೆ ನೀಡುವಾಗ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಅಜೆಂಡಾವನ್ನು ಪ್ರಾಯೋಜಿಸುವ ರೀತಿಯಲ್ಲಿ ಕಸರತ್ತುಗಳು ನಡೆಸುತ್ತಿವೆ ಎಂಬ

ಪುಟ 12 ಕ್ಕೆ

ಬರುತ್ತಿದೆ ! ತುತ್ತು ಕಿತ್ತುಕೊಳ್ಳುವ ಕಾಯ್ದೆ!

2012, ಆಗಸ್ಟ್ 3 ರಂದು ಬೆಂಗಳೂರಿನಲ್ಲಿ ಸಾಮೂಹಿಕ ಧರಣಿ


ದೇಶದ ಗೋದಾಮುಗಳು ಆಹಾರ ಧಾನ್ಯಗಳನ್ನು ಮತ್ತೆ ಸಂಗ್ರಹಿಸಿ ಇಟ್ಟುಕೊಳ್ಳಲು ಆಗಲಾರದಷ್ಟು ತುಂಬಿ ತುಳುಕುತ್ತಿದ್ದರೆ ಇನ್ನೊಂದೆಡೆ ಕೋಟಿ ಕೋಟಿ ಜನರ ಒಡಲು ಬರಿದೋ ಬರಿದು. ಹಸಿವಿನ ಸಂಕಟ. ಏನಿದು ವಿಪರ್ಯಾಸ ! ಯಾಕಿದು ? ನಾವೇನು ಮಾಡಬೇಕೀಗ ?

ನಿತ್ಯಾನಂದ ಸ್ವಾಮಿ

ಇದೇ ಜುಲೈ 10, 2012 ರಂದು ಬೆಂಗಳೂರಿಗೆ ಆಗಮಿಸಿದ್ದ ಕೇಂದ್ರ ಗೃಹ ಸಚಿವ ಪಿ. ಚಿದಂಬರಂ, ಸುದ್ದಿಗಾರರು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಅಕ್ಕಿ, ಗೋಧಿ, ಬೆಲೆ ತುಸು ಹೆಚ್ಚಾದಾಗ ಅದನ್ನು ವಿರೋಧಿಸುವ ಪ್ರವೃತಿಗೆ ಆಕ್ಷೇಪವೆತ್ತಿದ್ದಾರೆ. ಲೀಟರ್ ನೀರಿನ ಬಾಟಲಿಗೆ 15 ರೂ, ಐಸ್‌ಕ್ರೀಮ್‌ಗೆ 20 ರೂ. ಕೊಡುವವರು ಅಕ್ಕಿ, ಗೋಧಿ ಬೆಲೆ 1 ರೂ. ಜಾಸ್ತಿ ನೀಡುವುದನ್ನು ಯಾಕೆ ವಿರೋಧಿಸುತ್ತಾರೆ ಎಂಬುದು ಅವರ ಮರುಪ್ರಶ್ನೆ. ಇಂತಹ ಮನೋಧರ್ಮವುಳ್ಳವರು ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳಾಗಿದ್ದರೆ ಬಡವರು ನ್ಯಾಯ ಪಡೆಯಲು ಸಾಧ್ಯವೇ ?

ಹಿಂದೆ ಹಣಕಾಸು ಮಂತ್ರಿ ಹುದ್ದೆಯನ್ನು ನಿರ್ವಹಿಸಿ ಈಗ ಗೃಹ ಮಂತ್ರಿ ಆಗಿರುವ ಚಿದಂಬರಂ ಅವರಿಗೆ ದೇಶದ ವಾಸ್ತವ ಪರಿಸ್ಥಿತಿಯ ಬಗ್ಗೆ ಅರಿವು ಇರಬೇಕು. ಈ ದೇಶದ 50–60 ಕೋಟಿ ಜನ ಈಗಲೂ ಬಡತನ ರೇಖೆಯ ಕೆಳಗೆ ಜೀವನ ಸಾಗಿಸುತ್ತಾರೆ. ಇವರಿಗೆ ದಿನಕ್ಕೆ ಎರಡು ಹೊತ್ತಿನ ಊಟಕ್ಕೆ ಬೇಕಾಗುವಷ್ಟು ಹಣವನ್ನು ಸಂಪಾದನೆ ಮಾಡುವುದೇ ದೊಡ್ಡ ಸಮಸ್ಯೆಯಾಗಿದೆ. ಇವರು ಕಾಯಂ ಕೆಲಸ ಇಲ್ಲದ, ನಿಶ್ಚಿತ ಆದಾಯವಿಲ್ಲದ ಕೃಷಿ ಕೂಲಿಕಾರರು ಹಾಗೂ ಅಸಂಘಟಿತ ವಲಯದ ಕಾರ್ಮಿಕರಾಗಿದ್ದಾರೆ. ಆಹಾರ ಧಾನ್ಯ- ತರಕಾರಿಗಳ ಬೆಲೆ ತುಸು ಏರಿದಾಗಲೂ ಇವರ ಜೀವನದಲ್ಲಿ ಏರುಪೇರುಗಳಾಗುತ್ತಿರುತ್ತವೆ. ಇವರ್‍ಯಾರು ಐಸ್‌ಕ್ರೀಮ್ ತಿನ್ನುವವರಲ್ಲ, ಮಿನರಲ್ ವಾಟರ್ ಕೊಳ್ಳುವವರಲ್ಲ. 'ಆಮ್‌ಆದ್ಮಿ' ಹೆಸರಿನಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಪಕ್ಷದ ಪ್ರಮುಖರೊಬ್ಬರು ಅಕ್ಕಿ ಗೋಧಿ ಬೆಲೆ ಏರಿಕೆಯನ್ನು ಸಮರ್ಥಿಸಲು ಮುಂದಾಗಿರುವುದು ಖಂಡನೀಯ.

ಇನ್ನು ಮಧ್ಯಮ ವರ್ಗದವರ ಪರಿಸ್ಥಿತಿಯೂ ಇದಕ್ಕಿಂತ ಹೆಚ್ಚೇನು ಭಿನ್ನವಾಗಿಲ್ಲ. ತಮಗೆ ಬರುವ ಸೀಮಿತ ಸಂಬಳದಲ್ಲೇ ಅವರು ತಿಂಗಳು ಖರ್ಚುವೆಚ್ಚಗಳನ್ನು ಸರಿದೂಗಿಸಬೇಕು. ಮಕ್ಕಳ ವಿದ್ಯಾಭ್ಯಾಸ, ಕುಟುಂಬದ ಸದಸ್ಯರ ಆರೋಗ್ಯ, ಮನೆ ಬಾಡಿಗೆ ಅಥವಾ ಮನೆಸಾಲದ ಕಂತು ಕಡಿತದಂತಹ ಸಮಸ್ಯೆಗಳಿಂದ ಅವರೂ ಜರ್ಜರಿತರಾಗಿರುತ್ತಾರೆ. ಇವುಗಳ ಜೊತೆಯಲ್ಲಿ 15–20 ರೂಪಾಯಿಗೆ ಸಿಗಬೇಕಾದ ಕೆ.ಜಿ. ಅಕ್ಕಿಯ ಬೆಲೆ 30–35 ರೂಪಾಯಿ ಆದಾಗ ಅವರು ಸರ್ಕಾರವನ್ನು ಶಪಿಸದೆ ಇರಲು ಸಾಧ್ಯವೇ ? ಅಪರೂಪಕ್ಕೆ ಅವರು ತಮ್ಮ ಮಕ್ಕಳಿಗೆ ಐಸ್‌ಕ್ರೀಮ್ ಖರೀದಿಸಿಕೊಟ್ಟರೆ ಅಥವಾ ಬಾಟಲಿ ನೀರನ್ನು ಖರೀದಿಸಿದರೆ, ಆಹಾರ ಪದಾರ್ಥಗಳ ಮತ್ತು ಇತರ ಅಗತ್ಯ ವಸ್ತುಗಳ ಬೆಲೆ ಏರಿಕೆಯಾದಾಗ ಅವರು ಬಾಯಿ ಮುಚ್ಚಿಕೊಂಡು ಇರಬೇಕು ಎಂದು ಮಂತ್ರಿ ಚಿದಂಬರಂ ಹೇಳುತ್ತಿರುವುದು ಉದ್ಧಟತನವಲ್ಲದೆ ಬೇರೆನೂ ಅಲ್ಲ.



ಆಹಾರ (ಅ)ಭದ್ರತಾ ಕಾಯ್ದೆ :

2004 ರ ಸಾರ್ವತ್ರಿಕ ಚುನಾವಣೆಗಳ ನಂತರ ಅಧಿಕಾರವಹಿಸಿಕೊಂಡ ಅಲ್ಪಮತದ ಮೊದಲ ಯುಪಿಎ ಸರ್ಕಾರಕ್ಕೆ ಬಾಹ್ಯ ಬೆಂಬಲ ನೀಡಿದ ಎಡಪಕ್ಷಗಳು ಅಂದಿನಿಂದಲೇ ಬೆಲೆ ಏರಿಕೆಯ ವಿರುದ್ಧ ಮತ್ತು ಆಹಾರದ ಹಕ್ಕಿಗಾಗಿ ಹೋರಾಟಗಳನ್ನು ಮಾಡುತ್ತಾ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ಹಾಕುತ್ತಾ ನಡೆದವು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಂತಹ ಬಡತನ ನಿವಾರಣಾ ಕಾರ್ಯಕ್ರಮಗಳ ಮೂಲಕ ಓಟುಗಳನ್ನು ಗಳಿಸಬಹುದೆಂದು ಮನವರಿಕೆ ಮಾಡಿಕೊಂಡ ಕಾಂಗ್ರೆಸ್ ಪಕ್ಷವು 2009 ರ ಲೋಕಸಭಾ ಚುನಾವಣೆಗಾಗಿ ಪ್ರಕಟಿಸಿದ ಪ್ರಣಾಳಿಕೆಯಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ನು ಜಾರಿಗೆ ತರುವುದಾಗಿ ಭರವಸೆ ನೀಡಿತು. ಚುನಾವಣೆಯಲ್ಲಿ ಜಯಗಳಿಸಿ ಎರಡನೇ ಯುಪಿಎ ಸರ್ಕಾರ ಅಧಿಕಾರಕ್ಕೆ ಬಂತು. ಆದರೆ 2009 ರಲ್ಲಿ ಮಾಡಿದ ವಾಗ್ದಾನವನ್ನು ಜಾರಿಗೆ ತರಲು ಇದುವರೆಗೂ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಈ ನಡುವೆ ಅದು ಅನುಸರಿಸುತ್ತಾ ಬಂದ ನವ ಉದಾರೀಕರಣ ನೀತಿಗಳ ಪರಿಣಾಮವಾಗಿ ಹಿಂದೆಂದೂ ಕಂಡರಿಯದ ಬೆಲೆಯೇರಿಕೆಯಿಂದ ಜನಸಾಮಾನ್ಯರು ಪರದಾಡುವಂತಾಯಿತು. ಈ ಹಿನ್ನೆಲೆಯಲ್ಲಿ ಆಹಾರ ಭದ್ರತಾ ಕಾಯ್ದೆ ರಚನೆಗೆ ಒತ್ತಡ ಹೆಚ್ಚಾಯಿತು. ಸುಪ್ರೀಂಕೋರ್ಟ್ ಸಹ ಮಧ್ಯ ಪ್ರವೇಶ ಮಾಡಿ ಬಡವರ ಆಹಾರದ ಹಕ್ಕನ್ನು ಎತ್ತಿಹಿಡಿಯುವ ಆದೇಶಗಳನ್ನು ಹೊರಡಿಸಿತು. ಇವೆಲ್ಲದರ ಒತ್ತಡದ ಪರಿಣಾಮವಾಗಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ಸಿದ್ಧಪಡಿಸಿದ ಆಹಾರ ಭದ್ರತಾ ಕರಡು ಮಸೂದೆ 2011 ಸಂಸತ್ತಿನಲ್ಲಿ ಅಂಗೀಕಾರಕ್ಕಾಗಿ ಕಾಯುತ್ತಿದೆ.

ನಮ್ಮ ಸಂವಿಧಾನ ದೇಶದ ಎಲ್ಲಾ ನಾಗರಿಕರಿಗೆ ಬದುಕುವ ಹಕ್ಕು ನೀಡಿದೆ. ಬದುಕಲು ಆಹಾರ ಬೇಕೆ ಬೇಕು. ಆದ್ದರಿಂದ ಬದುಕುವ ಹಕ್ಕಿಗೂ ಆಹಾರದ ಹಕ್ಕಿಗೂ ನಡುವೆ ಅನನ್ಯ ಸಂಬಂಧವಿದೆ. ಆಹಾರದ ಹಕ್ಕು ಇಲ್ಲದೆ ಬದುಕುವ ಹಕ್ಕಿಗೆ ಅರ್ಥವಿಲ್ಲ. ಆಹಾರವನ್ನು ಒದಗಿಸುವುದು ಪ್ರಭುತ್ವದ ಆದ್ಯ ಕರ್ತವ್ಯ. ಒಂದು ಸಾಮಾಜಿಕ –ಆರ್ಥಿಕ – ರಾಜಕೀಯ ವ್ಯವಸ್ಥೆ ನ್ಯಾಯಯುತವಾಗಿದೆಯೋ ಅಥವಾ ಇಲ್ಲವೋ ಎಂಬುದರ ಅಳತೆಗೋಲು ಜನರ ಆಹಾರ ಭದ್ರತೆಯಾಗಿದೆ.

ಆದರೆ ಲೋಕಸಭೆಯ ಅಂಗೀಕಾರಕ್ಕಾಗಿ ಕಾಯುತ್ತಿರುವ ಮಸೂದೆಯು ನಾಗರೀಕರಿಗೆ ಇರುವ ಆಹಾರದ ಹಕ್ಕನ್ನು ಬಲಪಡಿಸುವುದರ ಬದಲಿಗೆ ಇನ್ನೂ ಬಲಹೀನಗೊಳಿಸಲಿದೆ. ಪ್ರಸಕ್ತ ಮಸೂದೆ ಕಾಯ್ದೆಯಾಗಿ ಜಾರಿಗೆ ಬಂದರೆ ಬಡವರನ್ನು ಬಡತನ ರೇಖೆಯ ಮೇಲೆ ಮತ್ತು ಮತ್ತು ಬಡತನ ರೇಖೆಯ ಕೆಳಗೆ ಎಂದು ವಿಭಜಿಸಿ ತಾರತಮ್ಯ ಎಸಗುವುದು ಮುಂದುವರೆಯಲಿದೆ. ಎಲ್ಲರಿಗೂ ಗೊತ್ತಿರುವಂತೆ ಶ್ರೀಮಂತರು ರೇಷನ್ ಅಕ್ಕಿ, ಗೋಧಿಯನ್ನು ಅಪೇಕ್ಷಿಸುವುದಿಲ್ಲ. ಇನ್ನುಳಿದವರನ್ನು ಎಪಿಎಲ್ – ಬಿಪಿಎಲ್ ಎಂದು ವಿಭಜಿಸಿ ಅವರ ಆಹಾರದ ಹಕ್ಕನ್ನು ಯಾಕೆ ಕಿತ್ತುಕೊಳ್ಳಬೇಕು ? ಅಸಂಘಟಿತ ವಲಯದ ಕುರಿತಾಗಿ ಸರ್ಕಾರ ನೇಮಿಸಿದ ಆಯೋಗವು ದೇಶದ ಜನಸಂಖ್ಯೆಯಲ್ಲಿ 77% ರಷ್ಟು ಜನ ದಿವೊಂದಕ್ಕೆ 20 ರೂ ಖರ್ಚು ಮಾಡುವ ಸಾಮರ್ಥ್ಯವನ್ನು ಹೊಂದಿಲ್ಲ ಎಂದು ಹೇಳಿರುವಾಗ ಅವರ ನಡುವೆ ಯಾಕೆ ಈ ಅರ್ಥವಿಲ್ಲದ ವಿಭಜನೆ ಮತ್ತು ತಾರತಮ್ಯ ?

ಕೇಂದ್ರ ಯೋಜನಾ ಆಯೋಗ ಮಾಡಿರುವ ಬಡತನದ ಹೊಸ ವ್ಯಾಖ್ಯಾನದ ಪ್ರಕಾರ ಗಾಮೀಣ ಪ್ರದೇಶದಲ್ಲಿ ದಿನಕ್ಕೆ 26 ರೂಪಾಯಿ ಮತ್ತು ನಗರ ಪ್ರದೇಶದಲ್ಲಿ ದಿನಕ್ಕೆ 36 ರೂಪಾಯಿಗಿಂತ ಕಡಿಮೆ ಆದಾಯ ಉಳ್ಳವರು ಮಾತ್ರ ಬಡವರು. ಉಳಿದವರು ಬಡತನ ರೇಖೆಯನ್ನು ದಾಟಿ ಮೇಲಕ್ಕೇರಿದವರು! ಇಂತಹ ಅಸಂಬದ್ಧ ವ್ಯಾಖ್ಯಾನಗಳ ಪರಿಣಾಮವಾಗಿ ದೇಶದಲ್ಲಿ ಇಂದು 61% ರಷ್ಟು ಪರಿಶಿಷ್ಟ ಜಾತಿಯವರಿಗೆ 55% ರಷ್ಟು ಪರಿಶಿಷ್ಟ ಪಂಗಡದವರಿಗೆ, 52% ರಷ್ಟು ಕೃಷಿ ಕೂಲಿಕಾರರಿಗೆ ಬಿಪಿಎಲ್ ರೇಷನ್ ಕಾರ್ಡುಗಳೂ ಇಲ್ಲ, ಅಂತ್ಯೋದಯ ಕಾರ್ಡುಗಳೂ ಇಲ್ಲ. ಹೊಸ ಮಸೂದೆ ಕಾಯ್ದೆಯಾಗಿ ಜಾರಿಯಾದರೆ, ಇನ್ನು ಮುಂದೆ ಅಂತ್ಯೋದಯ ಕಾರ್ಡುಗಳು ಇರುವುದಿಲ್ಲ. ಅಂತ್ಯೋದಯ ಮತ್ತು ಬಿಪಿಎಲ್ ಕಾರ್ಡ್ ಉಳ್ಳವರು ಕೆ.ಜಿ. ಅಕ್ಕಿಗೆ 3 ರೂ ಮತ್ತು ಕೆ.ಜಿ. ಗೋಧಿಗೆ 2 ರೂ ಕೊಡಬೇಕಾಗುವುದು. ಎಪಿಎಲ್ ವಿಭಾಗವನ್ನು ಸಾಮಾನ್ಯ ವಿಭಾಗವೆಂದೂ ಬಿಪಿಎಲ್ ವಿಭಾಗವನ್ನು ಆದ್ಯತಾ ವಿಭಾಗವೆಂದು ಮರುನಾಮಕರಣ

ಜನಶಕ್ತಿ
ಕನ್ನಡ ವಾರಪತ್ರಿಕೆ

ಮಾಡಲಾಗಿದೆ. ಎಲ್ಲಾ ಕುಟುಂಬಗಳಿಗೆ ಕೆ.ಜಿ.ಗೆ 2 ರೂ. ದರದಲ್ಲಿ ತಿಂಗಳಿಗೆ 35 ಕೆ.ಜಿ. ಆಹಾರಧಾನ್ಯಗಳನ್ನು ಪೂರೈಸಲು ಕೇಂದ್ರ ಸರ್ಕಾರ ಹೆಚ್ಚುವರಿಯಾಗಿ 30 ರಿಂದ 40 ಸಾವಿರ ಕೋಟಿ ರೂಗಳನ್ನು ಒದಗಿಸಬೇಕಾಗುತ್ತದೆ. ಅದಕ್ಕೆ ಹಣವಿಲ್ಲ ಎಂದು ಸರ್ಕಾರ ಹೇಳುತ್ತಿದೆ. ಆದರೆ ಆಗರ್ಭ ಶ್ರೀಮಂತರಿಗೆ ಮಾತ್ರ ಇದೇ ಸರ್ಕಾರ ಬಾರೀ ಮೊತ್ತದ ತೆರಿಗೆ ರಿಯಾಯಿತಿಗಳನ್ನು ಕೊಡುತ್ತಲೇ ಇದೆ. ಈ ವರ್ಷ ಒಂದರಲ್ಲೇ ಶ್ರೀಮಂತರಿಗೆ ನೀಡಲಾದ ತೆರಿಗೆ ರಿಯಾಯ್ತಿಗಳ ಮೊತ್ತ 5 ಲಕ್ಷ ಕೋಟಿ ರೂ ದಾಟಿದೆ.

ಕರ್ನಾಟಕದಲ್ಲಿ ಬಗೆಹರಿಯದ ರೇಷನ್ ಕಾರ್ಡ್ ಗೊಂದಲ:

ಆನ್‌ಲೈನ್ ಮೂಲಕ ಬಿಪಿಎಲ್ ರೇಷನ್ ಕಾರ್ಡಿಗಾಗಿ ಅರ್ಜಿ ಸಲ್ಲಿಸಿದವರಿಗೆ ಇನ್ನೊಂದು ತಿಂಗಳೊಳಗೆ ರೇಷನ್ ಕಾರ್ಡ್ ನೀಡಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಕಳೆದ ಮೇ ತಿಂಗಳಲ್ಲಿ ಆಶ್ವಾಸನೆ ನೀಡಿದ್ದ ಮುಖ್ಯ ಮಂತ್ರಿ ಸದಾನಂದಗೌಡರು ಈಗ ಮಾಜಿ ಮುಖ್ಯಮಂತ್ರಿ. ಸರ್ಕಾರದ ಮಹತ್ವಾಕಾಂಕ್ಷೆಯ ಬಯೋಮೆಟ್ರಿಕ್ ರೇಷನ್ ಕಾರ್ಡುಗಳ ವಿತರಣೆ ಇನ್ನೂ ಆಗಿಲ್ಲ. ರಾಜ್ಯದಲ್ಲಿ 34 ಲಕ್ಷ ಅಕ್ರಮ ಎನ್ನಲಾದ ರೇಷನ್ ಕಾರ್ಡುಗಳನ್ನು ರದ್ದುಗೊಳಿಸಿದ ಬಳಿಕ ಹೊಸ ಕಾರ್ಡುಗಳಿಗಾಗಿ 31 ಲಕ್ಷ ಅರ್ಜಿಗಳನ್ನು ಪಡೆಯಲಾಗಿದೆ. ಇವುಗಳಲ್ಲಿ ಲಕ್ಷಾಂತರ ಕುಟುಂಬಗಳ ಸದಸ್ಯರು ಬಯೋ ಮೆಟ್ರಿಕ್ ಕೇಂದ್ರಗಳಿಗೆ ತೆರಳಿ ತಮ್ಮ ಬೆರಳಚ್ಚು ನೀಡಿ ಪೋಟೊ ತೆಗೆಯಿಸಿ ಕೊಂಡಿದ್ದಾರೆ. ಆದರೆ ಅವರಿಗೆ ಇದುವರೆಗೆ ಕಾರ್ಡುಗಳನ್ನು ವಿತರಿಸಿಲ್ಲ. ಕಾರ್ಡುಗಳನ್ನು ಪಡೆದ ಸಾವಿರಾರು ಕುಟುಂಬಗಳ ಕಾರ್ಡುಗಳಲ್ಲಿ ಕುಟುಂಬದ ಕೆಲವು ಸದಸ್ಯರ ಹೆಸರುಗಳು ಕೈಬಿಟ್ಟು ಹೋಗಿವೆ. ಆ ಕುಟುಂಬಗಳಿಗೆ ಪೂರ್ಣ ಪ್ರಮಾಣದ ರೇಷನ್ ಸಿಗುವುದಿಲ್ಲ. ಹೊಸ ಕಾರ್ಡು ಸಿಗದೆ ಇರುವವರ ಬಳಿಯಲ್ಲಿ ಹಿಂದಿನ ತಾತ್ಕಾಲಿಕ ಕಾರ್ಡುಗಳಿವೆ. 12 ವರ್ಷ ಕೆಳಗಿನ ಮಕ್ಕಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಕಾರ್ಡು ಕೊಡುವಾಗ ಇದ್ದ 12 ವರ್ಷದ ಮಗುವಿಗೆ ಈಗ 18 ವರ್ಷ ಆಗಿದ್ದರೂ ರೇಷನ್ ಸಿಗುವುದಿಲ್ಲ. ಇದುವರೆಗೂ ಕಾರ್ಡು ಸಿಗದಿರುವ ಸಾವಿರಾರು ಕುಟುಂಬಗಳಿವೆ. ಅವರಿಗೆ ಯಾವುದೇ ರೇಷನ್ ಸಿಗುವುದಿಲ್ಲ.

ರೇಷನ್ ಕಾರ್ಡುಗಳನ್ನು ಅನಿಲ ಸಂಪರ್ಕ



ಹಾಗೂ ವಿದ್ಯುತ್ ಸಂಪರ್ಕಗಳಿಗೆ ಜೋಡಿಸಲಾಗುತ್ತಿದೆ. ವಿದ್ಯುತ್ ಬಿಲ್ ಬಾಕಿ ಇರುವ ಕುಟುಂಬಗಳಿಗೆ ರೇಷನ್ ಕಾರ್ಡು ನಿರಾಕರಿಸಲಾಗುತ್ತದೆ. ಶಾಸ್ವತ ರೇಷನ್ ಕಾರ್ಡ್ ನೀಡಲು ಮತ್ತೆ ಆದಾಯ ಸರ್ಟಿಫಿಕೇಟ್ ಕೊಡಬೇಕೆಂದು ಅರ್ಜಿದಾರರನ್ನು ಸತಾಯಿಸಲಾಗುತ್ತಿದೆ. ನ್ಯಾಯಬೆಲೆ ಅಂಗಡಿಗಳಿಗೆ ಅಗತ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಸರಬರಾಜು ಮಾಡಲಾಗುತ್ತದೆ. ನ್ಯಾಯ ಬೆಲೆ ಅಂಗಡಿಯವರು 4 ಕೆ.ಜಿ. ಅಕ್ಕಿ ಕೊಡುವ ಬದಲು 3 ಕೆ.ಜಿ. ಕೊಟ್ಟು ಎಲ್ಲರನ್ನೂ ಸಮಾಧಾನ ಪಡಿಸಲು ಪ್ರಯತ್ನಿಸುತ್ತಾರೆ. ಇದರ ಜೊತೆಯಲ್ಲಿ ರಿಯಾಯ್ತಿ ದರದ ಆಹಾರ ಧಾನ್ಯಗಳನ್ನು ಕಾಳಸಂತೆಯಲ್ಲಿ ಮಾರಾಟಮಾಡಿ ಲಾಭ ಮಾಡಿಕೊಳ್ಳುವ (ಅ)ನ್ಯಾಯ ಬೆಲೆ ಅಂಗಡಿಗಾರರೂ ಇದ್ದಾರೆ. ಇನ್ನು ಮುಂದೆ ನಗದು ರೂಪದಲ್ಲೇ ಆಹಾರ ಸಬ್ಸಿಡಿಯನ್ನು ಪೂರೈಸಲು ಕೇಂದ್ರ ಸರ್ಕಾರ ಮುಂದಾಗಿದೆ. ಬ್ಯಾಂಕುಗಳು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚೆಚ್ಚು ಶಾಖೆಗಳನ್ನು ಆರಂಭಿಸುತ್ತಿರುವುದು ಪೂರಕ ವಿದ್ಯಮಾನವಾಗಿದೆ.

ವ್ಯಕ್ತಿಗೆ ತಿಂಗಳಿಗೆ 4 ಕೆ.ಜಿ. ಅಕ್ಕಿ ಮತ್ತು 1 ಕೆ.ಜಿ. ಗೋಧಿಯನ್ನು ವಿತರಿಸುವ ಅಸಂಬದ್ಧ (ಯುೂನಿಟ್) ಘಟಕ ಪದ್ಧತಿ ಇನ್ನೂ ಮುಂದುವರೆಯುತ್ತಿದೆ. ಕರ್ನಾಟಕದ ಬಿಜೆಪಿ ಸರ್ಕಾರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಕೆ.ಜಿ.ಗೆ 2 ರೂ ದರದಲ್ಲಿ ತಿಂಗಳಿಗೆ ಒಂದು ಕುಟುಂಬಕ್ಕೆ 35 ಕೆ.ಜಿ. ಆಹಾರ ಧಾನ್ಯ ಕೊಡುತ್ತೇವೆ ಎಂದು ಕೊಟ್ಟ ವಚನವನ್ನು ಇದುವರೆಗೂ ಪಾಲಿಸಿಲ್ಲ. ರಾಜ್ಯದಲ್ಲಿ ವ್ಯಾಪಿಸಿರುವ ಭೀಕರ ಬರವನ್ನು ಗಣನೆಗೆ ತೆಗೆದುಕೊಂಡು ತನ್ನ ಬೊಕ್ಕಸದಿಂದ ಹಣವನ್ನು ಬಳಸಿ ಜನರ ಸಂಕಷ್ಟಕ್ಕೆ ಸ್ಪಂಧಿಸಲು ಈ ಸರ್ಕಾರ ಮುಂದಾಗುತ್ತಿಲ್ಲ.

ಕುಟುಂಬಗಳ ಸಂಖ್ಯೆಯ ಬಗ್ಗೆ ರಾಜ್ಯದಲ್ಲಿ ಅನಗತ್ಯ ಗೊಂದಲವಿದೆ. ಒಂದೇ ಮನೆಯಲ್ಲಿ ಒಂದಕ್ಕಿಂತ ಹೆಚ್ಚು ಕುಟುಂಬಗಳಿರುವ ಸಾಧ್ಯತೆ ಇದೆ. ಗಂಡ, ಹೆಂಡತಿ ಮತ್ತು ವಯಸ್ಕರಲ್ಲದ ಮಕ್ಕಳನ್ನು ಒಳಗೊಳ್ಳುವ ಒಂದು ಕುಟುಂಬವನ್ನು 'ನ್ಯೂಕ್ಲಿಯರ್' ಕುಟುಂಬ ಎಂದು ಪರಿಗಣಿಸಿ ಒಂದೇ ಮನೆಯಲ್ಲಿ ವಾಸ ಇರುವ ಪ್ರತ್ಯೇಕ ಕುಟುಂಬಗಳಿಗೆ ಪ್ರತ್ಯೇಕ ರೇಷನ್ ಕಾರ್ಡು ವಿತರಣೆ ಆಗಬೇಕಾಗಿದೆ. ಎಪಿಎಲ್ – ಬಿಪಿಎಲ್ ಎಂಬ ತಾರತಮ್ಯ ಮಾಡದೆ ಎಲ್ಲಾ ಬಡವರಿಗೂ ರೇಷನ್ ಕಾರ್ಡುಗಳನ್ನು ವಿತರಣೆ ಮಾಡಬೇಕು. ಕೇಂದ್ರ ಸರ್ಕಾರ ರಾಜ್ಯಗಳಿಗೆ ನೀಡುವ ಆಹಾರ ಧಾನ್ಯಗಳ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಬೇಕು. ಕೇಂದ್ರ ಆಹಾರ ನಿಗಮದ ಉಗ್ರಾಣಗಳಲ್ಲಿ ಅಗತ್ಯಕ್ಕಿಂತ ಹೆಚ್ಚು ಆಹಾರ ಧಾನ್ಯಗಳನ್ನು ದಾಸ್ತಾನು ಮಾಡಲಾಗಿದ್ದು ಅವು ಕೊಳೆತು ಹಾಳಾಗುತ್ತಿವೆ ಅಥವಾ ಇಲಿ ಹೆಗ್ಗಣಗಳ ಪಾಲಾಗುತ್ತಿದೆ. ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಡ ಹೇರಿ ಎಲ್ಲಾ ಕುಟುಂಬಗಳಿಗೆ ಪ್ರತಿ ತಿಂಗಳಿಗೆ ಕೆ.ಜಿ.ಗೆ 2ರೂ ದರದಲ್ಲಿ 35 ಕೆ.ಜಿ ಅಕ್ಕಿ ಮತ್ತು ಗೋಧಿ ನೀಡಲು ಬೇಕಾಗುವಷ್ಟು ಆಹಾರ ಧಾನ್ಯಗಳನ್ನು ಪಡೆಯಬೇಕು. ಎಲ್ಲಾ ಕುಟುಂಬಗಳಿಗೆ ಒಂದೇ ರೀತಿಯ ರೇಷನ್ ಕಾರ್ಡು ವಿತರಣೆ ಮಾಡಿ, ಗರಿಷ್ಠ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ವಿತರಣೆ ಮಾಡಿದರೆ ಬೆಲೆ ಏರಿಕೆಯ ಬಿಸಿಯನ್ನು ತಡೆದುಕೊಳ್ಳಲು ಸಾಧ್ಯವಾಗುತ್ತದೆ. ಯಾವ ಕಾರಣಕ್ಕೂ ನಗದು ವರ್ಗಾವಣೆಯನ್ನು ಒಪ್ಪಬಾರದು.

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ಹಮ್ಮಿಕೊಂಡಿರುವ ಒಂದು (ಜುಲೈ) ತಿಂಗಳ ಪ್ರಚಾರಾಂದೋಲನ ಮತ್ತು ಅಗಷ್ಟ 3, 2012 ರಂದು ಬೆಂಗಳೂರಿನಲ್ಲಿ ನಡೆಸಲು ಉದ್ದೇಶಿಸಿರುವ ಮಹಾ ಧರಣಿಯನ್ನು ಪರಿಣಾಮಕಾರಿಯಾಗಿಸುವುದು ಮುಖ್ಯವಾಗುತ್ತದೆ. ಆಗಸ್ಟ 3 ರ ಧರಣಿಯ ಪೂರ್ವದಲ್ಲಿ ರೇಷನ್ ವಿಷಯದಲ್ಲಿ ನೊಂದವರ ನಿರ್ದಿಷ್ಟ ಸಮಸ್ಯೆಗಳನ್ನು ಎತ್ತಿಕೊಂಡು ಸ್ಥಳೀಯ ಮಟ್ಟದಲ್ಲಿ ಸಮರಶಿಲ ಪ್ರತಿಭಟನೆಗಳನ್ನು ನಡೆಸಬೇಕಾಗಿದೆ.

ಕೊಳೆಯುತ್ತಿರುವ ಆಹಾರ ದಾಸ್ತಾನುಗಳು

ಕೃಷಿ ಪ್ರಧಾನ ದೇಶವಾಗಿರುವ ಭಾರತದಲ್ಲಿ ಜನರು ಹಸಿವೆಯಿಂದ ಸಾಯುತ್ತಿರುವುದು ದೊಡ್ಡ ದುರಂತ. ಸರ್ಕಾರಿ ಉಗ್ರಾಣಗಳಲ್ಲಿ ಬೆಟ್ಟದಷ್ಟು ಗಾತ್ರದ ಆಹಾರಧಾನ್ಯಗಳ ದಾಸ್ತಾನುಗಳು ಇರುವಾಗ ದೇಶದ ಜನ ಊಟಕ್ಕಿಲ್ಲದೆ ಪರದಾಡುತ್ತಿರುವುದು ಇನ್ನೂ ದೊಡ್ಡ ದುರಂತ. 1990ರ ದಶಕದಲ್ಲಿ ಆರಂಭಿಸಲಾದ ಆರ್ಥಿಕ ಸುಧಾರಣೆಗಳ ಪರಿಣಾಮವಾಗಿ ಕೃಷಿ ಉತ್ಪಾದನೆ ಕುಸಿಯುತ್ತಾ ಬಂದಿರುವುದು ಸತ್ಯ. ಆದರೂ ಸಹ ಸರ್ಕಾರಿ ಉಗ್ರಾಣಗಳಲ್ಲಿ ಇಷ್ಟೊಂದು ಧಾನ್ಯಗಳು ಸಂಗ್ರಹ ಹೇಗಾಗುತ್ತದೆ?

ಹಿಂದಿನ ಜೂನ್ 1, ರಂದು ಸಾರ್ವಜನಿಕ ದಾಸ್ತಾನುಗಳಲ್ಲಿ ಒಟ್ಟು 8.2 ಕೋಟಿ ಟನ್‌ಗಳಷ್ಟು ಗೋಧಿ ಮತ್ತು ಅಕ್ಕಿ ಇತ್ತು. ಇದು ಇಡೀ ವರ್ಷದ ರೇಷನ್‌ಗೆ ಬೇಕಾಗುವ ಮತ್ತು ಆಪತ್ಕಾಲಕ್ಕೆಂದು ಕಾಯ್ದಿಡಬೇಕಾದ ಒಟ್ಟು ಧಾನ್ಯದ ಪ್ರಮಾಣಕ್ಕಿಂತ ಬಾರೀ ಹೆಚ್ಚು. ಬಡವರನ್ನು ಎಪಿಎಲ್ ಎಂದು ವಿಭಜನೆ ಮಾಡಲಾಗುತ್ತಿರುವುದರಿಂದ ಎಪಿಎಲ್ -ಬಿಪಿಎಲ್ ಎಂದು ಗುರುತಿಸಲಾದ ಬಡವರಿಗೆ ಎಪಿಎಲ್ ದರಗಳಲ್ಲಿ ಆಹಾರ ಧಾನ್ಯಗಳನ್ನು ಕೊಂಡುಕೊಳ್ಳಲು ಸಾಧ್ಯವಾಗದೆ ಇರುವುದರಿಂದ ಧಾನ್ಯಗಳ ದಾಸ್ತಾನು ಕರಗುವುದಿಲ್ಲ. ವಿದೇಶಗಳಿಂದಲೂ ಆಹಾರ ಧಾನ್ಯಗಳನ್ನು ಆಮದು ಮಾಡುವುದರಿಂದ ದಾಸ್ತಾನುಗಳು ಬೆಳೆಯುತ್ತವೆ.

ಆಹಾರ ಸಬ್ಸಿಡಿಯ ಬಹುದೊಡ್ಡ ಪಾಲು ಆಹಾರ ಧಾನ್ಯಗಳ ದಾಸ್ತಾನುಗಳನ್ನು ಕಾಯ್ದಿಡಲು ವ್ಯರ್ಥವಾಗಿ ಬಳಸಲಾಗುತ್ತದೆ. ಸರ್ಕಾರಕ್ಕೆ ಇದುವರೆಗೆ ಅಗತ್ಯವಿರುವಷ್ಟು ಉಗ್ರಾಣಗಳನ್ನು ನಿರ್ಮಾಣ ಮಾಡಲು



ಸಾಧ್ಯವಾಗಿಲ್ಲ. ಈಗ ಸದ್ಯ ಸುಮಾರು 66 ಲಕ್ಷ ಟನ್ ಆಹಾರ ಧಾನ್ಯಗಳನ್ನು ಬಯಲಿನಲ್ಲೇ ಟಾರ್ಪಾಲಿನ್ ಹೊದಿಸಿ ದಾಸ್ತಾನು ಮಾಡಲಾಗಿದೆ. ಮಳೆ ಬಂದರೆ ಅದೆಲ್ಲವು ಕೊಳೆತು ಹೋಗುವ ಅಪಾಯವಿದೆ. ಇಷ್ಟಾದರೂ, ಸರ್ಕಾರ ಎಪಿಎಲ್ – ಬಿಪಿಎಲ್ ಎಂಬ ಅಸಂಬದ್ಧ ವಿಭಜನೆಯನ್ನು ಕೈಬಿಟ್ಟು ಎಲ್ಲಾ ಬಡವರಿಗೆ ರಿಯಾಯ್ತಿ ದರದಲ್ಲಿ ಆಹಾರ ಧಾನ್ಯಗಳನ್ನು ಒದಗಿಸಲು ತಯಾರಿಲ್ಲ.

ಆದರಿಂದ ಕೇಂದ್ರ ಸರ್ಕಾರದ ಈ ಬಡವರ ವಿರೋಧಿ ಆಹಾರ ಭದ್ರತಾ ಕಾಯ್ದೆಯನ್ನು ವಿರೋಧಿಸುವುದು ಅನಿವಾರ್ಯವಾಗಿದೆ. ಎಡಪಕ್ಷಗಳು ಇದೇ ಜುಲೈ 30 ರಿಂದ ಅಗಸ್ಟ 3ರ ವರೆಗೆ ದೆಹಲಿಯಲ್ಲಿ ಬೃಹತ್ ಧರಣಿಯನ್ನು ಏರ್ಪಡಿಸಿವೆ. ಇದಕ್ಕೂ ಮೊದಲು ಇಡೀ ಜುಲೈ ತಿಂಗಳಲ್ಲಿ ವ್ಯಾಪಕ ಪ್ರಚಾರಾಂದೋಲನ ನಡೆಸಲಾಗುತ್ತದೆ.

ಗಂಗಾವತಿ ಕೃಷಿ ಕೂಲಿಕಾರರ ಮೂರನೇಯ ಸಮ್ಮೇಳನ

ಕರ್ನಾಟಕ ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರ್ಕಾರವು ಅತಿ ಹೆಚ್ಚು ಕೃಷಿ ಕೂಲಿಕಾರ ವಿರೋಧಿ ಸರ್ಕಾರವಾಗಿದೆ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಸಮಿತಿಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಹೇಳಿದರು. ಅವರು ಜುಲೈ 5ರಂದು ಗಂಗಾವತಿಯ ಶ್ರೀ ಕೃಷ್ಣದೇವರಾಯ ಕಲಾ ಭವನದಲ್ಲಿ ಏರ್ಪಡಿಸಲಾಗಿದ್ದ ಕೃಷಿ ಕೂಲಿಕಾರರ 3 ನೇ ತಾಲ್ಲೂಕು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಹಿಂದಿನ ಕಾಂಗ್ರೆಸ್ ಸರ್ಕಾರಗಳು ಸಹ ಜಮೀನ್ದಾರರ-ಬಂಡವಾಳಗಾರರ ಪರವಾದ ಸರ್ಕಾರಗಳೇ ಆಗಿದ್ದವು. ಆದರೆ ಬಿಜೆಪಿ ಸರ್ಕಾರ ಕಾಂಗ್ರೆಸ್‌ಗಿಂತಲೂ ಹೆಚ್ಚು ಕೂಲಿಕಾರರ ವಿರೋಧಿ ಸರ್ಕಾರ ಎಂದು ಕಳೆದ ನಾಲ್ಕು ವರ್ಷಗಳಲ್ಲಿ ಸಾಬೀತಾಗಿದೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಮತ್ತು ಭ್ರಷ್ಟಾಚಾರ ಮುಕ್ತವಾಗಿ ಜಾರಿಗೆ ತಂದು ಉದ್ಯೋಗಕ್ಕಾಗಿ ಅಲೆಯುತ್ತಿರುವ ಕೃಷಿ ಕೂಲಿಕಾರರ ನೆರವಿಗೆ ಬರಲು ಬಿಜೆಪಿ ಸರ್ಕಾರ ಮುಂದಾಗಲಿಲ್ಲ. ಚುನಾವಣೆಗಳ ಸಮಯದಲ್ಲಿ ಕೊಟ್ಟ ಭರವಸೆಯಂತೆ ಒಂದು ಕೆ.ಜಿ. ಗೆ 2 ರೂ ದರದಲ್ಲಿ ಆಹಾರ ಧಾನ್ಯಗಳನ್ನು ಒದಗಿಸಲು ಅದು ವಿಫಲವಾಗಿದೆ, 2009ರಲ್ಲಿ ನೆರೆಹಾವಳಿಗೆ ತುತ್ತಾಗಿ ಮನೆಗಳನ್ನು ಕಳೆದುಕೊಂಡ ಬಡವರಿಗೆ ಮನೆಗಳನ್ನು ಕಟ್ಟಿಕೊಡಲು ಇದುವರೆಗೂ ಈ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಬಡತನದಲ್ಲಿ ಬಳಲುತ್ತಾ ಅಪೌಷ್ಠಿಕತೆಯಿಂದ ನರಳುತ್ತಿರುವ ಮಕ್ಕಳು-ಮಹಿಳೆಯರ ಬಗ್ಗೆ ಈ ಸರ್ಕಾರ ಕಣ್ಣುಮುಚ್ಚಿಕೊಂಡಿದೆ. ಈಗ ರಾಜ್ಯದ ಭೂಮಿತಿ-ಭೂಸುಧಾರಣಾ ಕಾಯ್ದೆಯನ್ನು ಕಂಪನಿಗಳ ಅನುಕೂಲಕ್ಕಾಗಿ ತಿದ್ದುಪಡಿ ಮಾಡಿ ಭೂಮಿಗಾಗಿ ಹಾತೊರೆಯುತ್ತಿರುವ ಭೂ ಹೀನ ಬಡವರ ಕನಸುಗಳನ್ನು ನುಚ್ಚುನೂರು ಮಾಡುತ್ತಿದೆ. ಈ ಸರ್ಕಾರ "ಕೃಷಿ ಬಜೆಟ್" ಮಂಡಿಸುತ್ತೇವೆ ಎಂದು ಪ್ರಚಾರ ಗಿಟ್ಟಿಸಿಕೊಂಡ ಈ ಸರ್ಕಾರದ ಬಜೆಟ್‌ಗಳಲ್ಲಿ ಕೃಷಿ ಕೂಲಿಕಾರರ ಕುರಿತಾದ ಒಂದೇ ಒಂದು ಪ್ರಸ್ತಾಪ ಇಲ್ಲ. ಆದ್ದರಿಂದ ಕೃಷಿ ಕೂಲಿಕಾರರು ನ್ಯಾಯ ಪಡೆಯಲು ಭಾರೀ ದೊಡ್ಡ ಚಳುವಳಿಯನ್ನು ಸಂಘಟಿಸಬೇಕು ಎಂದು ಕಾಮ್ರೇಡ್ ನಿತ್ಯಾನಂದಸ್ವಾಮಿ ಹೇಳಿದರು.

ಇದಕ್ಕೂ ಮೊದಲು ತಾಲ್ಲೂಕು ಸಮಿತಿಯ ಅಧ್ಯಕ್ಷರಾದ ಕಾಮ್ರೇಡ್ ಹೆಚ್.ಗಂಗಾಧರಯ್ಯ ಅವರು ಧ್ವಜಾರೋಹಣ ನೆರವೇರಿಸುವ ಮೂಲಕ ಸಮ್ಮೇಳನದ ಕಲಾಪಗಳಿಗೆ ಚಾಲನೆ ನೀಡಿದರು. ತಾಲ್ಲೂಕು ಕಾರ್ಯದರ್ಶಿ ಎಂ.ಬಸವರಾಜ ಎಲ್ಲರನ್ನು ಸ್ವಾಗತಿಸಿದರು. ಇತ್ತೀಚೆಗೆ ಸಂಭವಿಸಿದ ಹಂಪಿ ಎಕ್ಸ್‌ಪ್ರೆಸ್ ರೈಲು ಅಪಘಾತದಲ್ಲಿ ಸಾವನ್ನಪ್ಪಿದ ಹಣವಾಳ ಗ್ರಾಮದ ಕೃಷಿ ಕೂಲಿಕಾರ ನೀಲಪ್ಪ ಹರಿಜನ ಮತ್ತು ಇತರ ಪ್ರಯಾಣಿಕರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

ಸಮ್ಮೇಳನದ ಕಲಾಪಗಳನ್ನು ನಡೆಸಲು ಕಾಮ್ರೇಡ್ ಲಿಂಗಪ್ಪ ಹಣವಾಳ, ಸೋಮಮ್ಮ ಮತ್ತು ಹೆಚ್.ತಿಮ್ಮಣ್ಣ ಅವರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿಯನ್ನು ಆಯ್ಕೆ ಮಾಡಲಾಯಿತು. ಚರ್ಚೆಗಾಗಿ ಮಂಡಿಸಲಾದ ಚಟುವಟಿಕೆಗಳ ವರದಿಯನ್ನು ಕುರಿತು ಹೊಸ ಜೂರಟಗಿಯ ಅಂಬಣ್ಣ, ಆದಾಪುರದ ಚಂದ್ರಮ್ಮ, ಸಿಂಗನಾಳದ ಕರಿಯಪ್ಪ, ಗುಂಡೂರಿನ ಹಂಪಮ್ಮ, ಚಿಕ್ಕ ಡಂಕನಕಲ್ ಗ್ರಾಮದ ಕರೆಪ್ಪ, ಚೆನ್ನಳ್ಳಿ ಕ್ರಾಸ್‌ನ ಸತ್ಯನಾರಾಯಣ, ಗೋಡಿನಾಳದ ಅನಂತ ಸಿಂಗ್, ಕೋಟಯ್ಯ ಕ್ಯಾಂಪಿನ ಶರಣಪ್ಪ, ಗುರಮ್ಮ ಕ್ಯಾಂಪಿನ ಶರಣಪ್ಪ, ಬಸವಣ್ಣ ಕ್ಯಾಂಪಿನ ಬಸಮ್ಮ, ಮುಷ್ಟೂರು ಗ್ರಾಮದ ಅಹಮ್ಮದ, ವಡ್ಡರಹಟ್ಟಿಯ ಮಹಬೂಬ್‌ಸಾಬ್, ಮರಕುಂಬಿಯ ದೇವಪ್ಪ ಬಡಿಗೇರ, ಮತ್ತು ಹೊಸ್ಕೇರಾ ಗ್ರಾಮದ ಲಕ್ಷ್ಮಣ್. ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.



ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿಗಾಗಿ, ಬಾಕಿ ವೇತನಕ್ಕಾಗಿ ಹೋರಾಟವನ್ನು ತೀವ್ರಗೊಳಿಸಬೇಕೆಂದು ಚರ್ಚೆಯಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು ಒತ್ತುಕೊಟ್ಟು ಮಾತನಾಡಿದರು. ಅದರಂತೆಯೇ ಮನೆ ನಿವೇಶನಗಳಿಗಾಗಿ, ಹಕ್ಕುಪತ್ರಗಳಿಗಾಗಿ, ಸಮರ್ಪಕ ರೇಷನ್ ಪದ್ಧತಿ ಜಾರಿಗಾಗಿ ಒತ್ತಾಯಿಸಿ ಹೋರಾಟವನ್ನು ಮುಂದುವರೆಸಬೇಕೆಂದು ಅಭಿಪ್ರಾಯ ವ್ಯಕ್ತವಾಯಿತು.

ಸಂಘಟನೆಯಲ್ಲಿ ತಲೆದೋರಿರುವ ಬಲಹೀನತೆಯ ಕುರಿತು ಚರ್ಚಿಸಲಾಯಿತು. ಕಳೆದ ನಾಲ್ಕು ವರ್ಷಗಳಲ್ಲಿ 2011-12ನೇ ಸಾಲಿನ ಸದಸ್ಯತ್ವ (6,885) ಗಣನೀಯವಾಗಿ ಕಡಿಮೆಯಾಗಿದೆ. ಮುಂದಿನ ದಿನಗಳಲ್ಲಿ ಸದಸ್ಯತ್ವವನ್ನು ವಿಸ್ತರಿಸಲು ಹಾಗೂ ಗ್ರಾಮ ಘಟಕಗಳನ್ನು ಪುನರ್ ರಚಿಸಿ ಬಲಪಡಿಸಲು ವಿಶೇಷ ಗಮನ ನೀಡಬೇಕೆಂದು ತೀರ್ಮಾನಿಸಲಾಯಿತು. 5ನೇ ರಾಜ್ಯ ಸಮ್ಮೇಳನವನ್ನು ಗಂಗಾವತಿಯಲ್ಲಿ ಏರ್ಪಡಿಸುವ ರಾಜ್ಯ ಸಮಿತಿಯ ಪ್ರಸ್ತಾಪವನ್ನು ಸ್ವಾಗತಿಸಲಾಯಿತು. ರಾಜ್ಯ ಸಮ್ಮೇಳನವನ್ನು ನವಂಬರ್ ತಿಂಗಳಲ್ಲಿ ನಡೆಸಬಹುದೆಂದು ಅಭಿಪ್ರಾಯ ವ್ಯಕ್ತವಾಯಿತು. ಅಷ್ಟರೊಳಗಾಗಿ ಸ್ಥಳೀಯ ಪ್ರಶ್ನೆಗಳಿಗಾಗಿ ಹೋರಾಟಗಳನ್ನು ನಡೆಸಲು ಹಾಗೂ ಸಂಘಟನೆಯನ್ನು ಬಲಪಡಿಸಲು ರಾಜ್ಯ ಸಮಿತಿ ಅಗತ್ಯ ಸಹಾಯ ಹಾಗೂ ಮಾರ್ಗದರ್ಶನ ನೀಡಬೇಕೆಂದು ಕೋರಲಾಯಿತು.

ಅನಂತರ 21 ಜನ ಸದಸ್ಯರುಳ್ಳ ಹೊಸ ತಾಲ್ಲೂಕ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಸಮಿತಿಯ ಅಧ್ಯಕ್ಷರಾಗಿ ಎಂ.ಬಸವರಾಜ, ಉಪಾಧ್ಯಕ್ಷರಾಗಿ ಹೆಚ್.ಗಂಗಾಧರಯ್ಯ, ಹೆಚ್.ಲಿಂಗಪ್ಪ, ಸೋಮಮ್ಮ ಮತ್ತು ಅಮಿನಾಬಿ, ಕಾರ್ಯದರ್ಶಿಯಾಗಿ ಕೆ.ಹುಸೇನಪ್ಪ , ಸಹಕಾರ್ಯದರ್ಶಿಗಳಾಗಿ ಹೆಚ್.ತಿಮ್ಮಣ್ಣ, ಜಿ.ಬಸವರಾಜ ಮತ್ತು ವಿರೂಪಣ್ಣ ಬಂಡಿ ಆಯ್ಕೆಯಾದರು. ಒಟ್ಟು 18 ಗ್ರಾಮಗಳಿಂದ ಒಟ್ಟು 88 ಜನ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಆರಂಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಮುಖಂಡರಾದ ಬಸವರಾಜ ಆನೆಗುಂದಿ, ಸಿಐಟಿಯು ಮುಖಂಡರಾದ ಎಸ್.ಎಸ್.ಹುಲುಗಪ್ಪ ಹಾಗೂ ಎಸ್‌ಎಫ್‌ಐ ಮುಖಂಡರಾದ ಅಮರೇಶ ಕಡಗದ ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು. ಕೊನೆಯಲ್ಲಿ ತಾಲ್ಲೂಕ ಸಮಿತಿಯ ನೂತನ ಕಾರ್ಯದರ್ಶಿ ಕೆ. ಹುಸೇನಪ್ಪ ಎಲ್ಲರನ್ನು ವಂದಿಸುವುದರೊಂದಿಗೆ ಸಮ್ಮೇಳನದ ಕಲಾಪಗಳು ಮುಕ್ತಾಯವಾದವು.

ವರದಿ- **ಕೆ.ಹುಸೇನಪ್ಪ**

ಶಿಕ್ಷಣ ಮಾಫಿಯಾದ........

ಪುಟ 3 ರಿಂದ

ಬೇಧದ , ಅಸ್ಪೃಶ್ಯತೆಯ ಆಚರಣೆಯೂ ಆಗಿದೆ. ಇದು ಸಂವಿಧಾನದ ಸಮಾನತೆಯ ಆಶಯಕ್ಕೆ ಬಗೆದ ಅಪಚಾರ, ಮಾನವ ವಿರೋಧಿಯಾದ ಈ ಹೇಳಿಕೆಯೇ ಎಲ್ಲವನ್ನೂ ಸಾರಿ ಹೇಳುತ್ತಿದೆ. ದಾಖಲಾತಿಗೆ ನಿರ್ದೇಶನ ನೀಡುವಾಗಲೂ ನ್ಯಾಯಾಲಯ ಈ ಮಕ್ಕಳಿಗೆ ಯಾವುದೇ ತಾರತಮ್ಯ ತೋರಬಾರದೆಂದು ಎಚ್ಚರಿಸಿದೆ ಕೂಡ.

ಆದರೆ ಇದನ್ನು ಕೆಲವು ಖಾಸಗಿ ಸಂಸ್ಥೆಗಳು ಜಾರಿಗೊಳಿಸದ ಘಟನೆಗಳು ಇನ್ನೂ ಆತಂಕಕಾರಿಯಾಗಿವೆ. ಬೆಂಗಳೂರಿನ ನಂದಿನಿ ಲೇಔಟ್‌ನಲ್ಲಿಯ ಆಕ್ಸ್‌ಫರ್ಡ್ ಹೈಸ್ಕೂಲ್‌ನಲ್ಲಂತೂ ಶಿಕ್ಷಣ ಹಕ್ಕು ಕಾಯ್ದೆಯನ್ವಯ ಪ್ರವೇಶ ಪಡೆದ ಮಕ್ಕಳನ್ನು ಗುರುತಿಸಲು ಅವರ ತಲೆಗೂದಲನ್ನು ಕತ್ತರಿಸಿದ್ದಲ್ಲದೇ, ಪ್ರಾರ್ಥನಾ ಸಮಯದಲ್ಲೂ ಅವರನ್ನು ಪ್ರತ್ಯೇಕವಾಗಿ ನಿಲ್ಲಿಸಿದೆ. ಅವರಿಗೆ ಟೈ ಬೆಲ್ಟ್ ನೀಡಿಲ್ಲ. ಮಕ್ಕಳ ಆಹಾರದ ಡಬ್ಬಿಗಳನ್ನು ತೆಗೆಸಿ ಪರೀಕ್ಷಿಸಿ(ಮಾಂಸಾಹಾರವಿದೆಯೇ, ಮೊಟ್ಟೆ ಇದೆಯೋ ಎಂದು) ಪ್ರವೇಶ ನೀಡಿ ಅಮಾನವೀಯ ವರ್ತನೆಯನ್ನು ತೋರಿಸಿದೆ. ಇಷ್ಟು ಸಾಕಲ್ಲವೇ ಖಾಸಗಿ ಸಂಸ್ಥೆಗಳ 'ಶಿಕ್ಷಣಪ್ರೇಮ', 'ಸಾಮಾಜಿಕ ನ್ಯಾಯ'ದ ಬದ್ಧತೆ ಅರ್ಥ ಮಾಡಿಕೊಳ್ಳಲು!.

ಅಪರಾಧಿ ಸರಕಾರ

ಆದರೆ ಇಂತಹವರನ್ನು ದಂಡಿಸಬೇಕಾದ ಸರಕಾರ ಕ್ಷಿಪ್ರ ದಂಡನೀಯ ಕ್ರಮ ಅನುಸರಿಸದೇ ವಿಳಂಬಿಸುತ್ತಿರುವುದೇ ಅದರ ನಿಜ ಮುಖವನ್ನೂ, ಅವರೊಂದಿಗೆ ಸಹಮತದ ಚಿಂತನೆಯನ್ನೂ ಎತ್ತಿ ತೋರಿಸುತ್ತದೆ. ಶಿಕ್ಷಣದ ಕೋಮುವಾದೀಕರಣಕ್ಕೆ, ಭಗವದ್ಗೀತೆ ಬೋಧನೆಗೆ ಮಿಂಚಿನಂತೆ ಕಾರ್ಯ ನಿರ್ವಹಿಸುವ ಸಚಿವ ಕಾಗೇರಿ ಈ ಸಂದರ್ಭದಲ್ಲಿ ಕ್ಯಾರೆ ಎಂತಲೂ ಕೇಳಲಿಲ್ಲ. ಖಾಸಗಿಯವರ ಇಂತಹ ದಾಷ್ಟ್ರ್ಯ, ಅಹಂಕಾರ ಬೆಳೆದಿರುವಲ್ಲಿ ಸರಕಾರಗಳ ಕುಮ್ಮಕ್ಕು ಮುಖ್ಯವಾಗಿದೆ. ಒಂದೆಡೆ ಶಿಕ್ಷಣದ ಖಾಸಗೀಕರಣಕ್ಕೆ ಮುಕ್ತ ಅವಕಾಶ ಕಲ್ಪಿಸಿರುವ ಸರಕಾರ ಎಲ್ಲರಿಗೂ ಶಿಕ್ಷಣ ನೀಡುವ ಹೊಣೆಗಾರಿಕೆಯಿಂದ ನುಣುಚಿಕೊಂಡಿದೆ. ಈ ಸಂದರ್ಭ ಬಳಸಿಕೊಂಡು ಬಹಳಷ್ಟು ಖಾಸಗಿ ಸಂಸ್ಥೆಗಳು ಮಾಫಿಯಾವಾಗಿ ಬೆಳೆದಿವೆ. ಮಠಾಧೀಶರು, ರಾಜಕಾರಣಿಗಳು , ಉದ್ದಿಮೆದಾರರು ಈ ರಂಗದಲ್ಲಿ ಹೂಡಿಕೆ ಮಾಡಿ ಮನಸೋ ಇಚ್ಛೆ ದೋಚುತ್ತಿದ್ದಾರೆ. ಹೀಗಾಗಿ ಸರಕಾರ ಅಪರಾಧಿಯಾಗಿದೆ. ಅಂತಹ ಅಪರಾಧಿಗಳಿಂದಲೇ ತುಂಬಿದೆ.

ವಿಷ ಕ್ರಿಮಿಗಳ ನಿರ್ಮೂಲನೆ

ಇಷ್ಟಾದ ಮೇಲಾದರೂ ಸರಕಾರ ಇಂತಹ ಶಿಕ್ಷಣ ಸಂಸ್ಥೆಗಳ ಮೇಲೆ ಕಟ್ಟು ನಿಟ್ಟಿನ ಕ್ರಮ ವಹಿಸಬೇಕು. ಪರವಾನಗಿ ರದ್ದು ಪಡಿಸಿ ಅಗತ್ಯವಾದಲ್ಲಿ ಶಾಲೆಗಳನ್ನು ಸರಕಾರ ವಶಕ್ಕೆ ತೆಗೆದುಕೊಳ್ಳಬೇಕು. 'ಕುಸ್ಮಾ'ದ ಶರ್ಮಾನ ಮೇಲೆ ಮೊಕದ್ದಮೆ ದಾಖಲಿಸಿ ಕಾನೂನು ಕ್ರಮ ವಹಿಸಬೇಕು. ಹಾಗೇ ತಾರತಮ್ಯ, ದಬ್ಬಾಳಿಕೆ ನಡೆಸಿದ ಆಕ್ಸ್‌ಫರ್ಡ್ ಹೈಸ್ಕೂಲ್‌ನಂತಹ ಸಂಸ್ಥೆಗಳ ಮೇಲೂ ನಿರ್ದಾಕ್ಷಿಣ್ಯ ಕ್ರಮ ವಹಿಸಬೇಕು. ಶಿಕ್ಷಣ ರಂಗದಲ್ಲಿನ ಇಂತಹ ಕ್ರಿಮಿ ಕೊಳೆಗಳನ್ನು ನಿರ್ಮೂಲನ ಮಾಡದಿದ್ದಲ್ಲಿ ಇವು ಇಡೀ ಸಮಾಜವನ್ನೇ ವಿಷಮಯ ಗೊಳಿಸುವುದರಲ್ಲಿ ಅನುಮಾನವಿಲ್ಲ.

ಫೆಬ್ರವರಿ– 28, 2012 ರಂದು ದೇಶದ ಕಾಮಿಕ ವರ್ಗ ನಡೆಸಿದ ಐತಿಹಾಸಿಕ ಮುಷ್ಕರದ ಬೇಡಿಕೆಗಳ ಕುರಿತು ದಿವ್ಯ ತಾತ್ಸಾರ ತೋರಿಸುತ್ತಿರುವ ಕಾಂಗ್ರೆಸ್ ನೇತೃತ್ವದ ಕೇಂದ್ರ ಯುಪಿಎ ಸರ್ಕಾರಕ್ಕೆ ಸರಿಯಾದ ಪಾಠ ಕಲಿಸಲು ಸನ್ನದ್ದತೆಗಳು ನಡೆಯುತ್ತಿವೆ. ಈ ಕುರಿತು ವಿವರಿಸಿದ್ದಾರೆ ಸಿಐಟಿಯು ಮುಖಂಡರು.

ಕೆ.ಎನ್. ಉಮೇಶ್

ಬಹುದಿನಗಳ ಮುಷ್ಕರದೆಡೆಗೆ ಕಾರ್ಮಿಕ ವರ್ಗ

ವ್ಯಾಪಕ ಪ್ರಚಾರಾಂದೋಲನದ ಒತ್ತಾಸೆ

2012 ಫೆಬ್ರವರಿ 28 ಕಾರ್ಮಿಕ ಚಳುವಳಿಯ ಇತಿಹಾಸದ ಮಹತ್ತರ ದಿನ. ದೇಶದ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ಪ್ರಪ್ರಥಮ ಬಾರಿಗೆ ಒಂದೇ ವೇದಿಕೆಯಡಿ ಸಾರ್ವತ್ರಿಕ ಮುಷ್ಕರಕ್ಕೆ ಮುಂದಾದ ದಿನ.

ಕಾರ್ಮಿಕ ವರ್ಗದ ಐತಿಹಾಸಿಕ ಒಗ್ಗಟ್ಟು ಆಕ್ರೋಶದ ಪ್ರತಿಫಲನ

ಅಂದು ದೇಶದ 15 ಕೋಟಿಗೂ ಹೆಚ್ಚು ಕಾರ್ಮಿಕರು ಮುಷ್ಕರ ಮಾಡಿ ಅಭೂತಪೂರ್ವ ಏಕತೆಯನ್ನು ಪ್ರದರ್ಶಿಸಿದರು. 1991 ರಿಂದ ಆರಂಭವಾದ ಕಾರ್ಮಿಕ ವರ್ಗ ವಿರೋಧಿ ಜನವಿರೋಧಿ ನವ ಉದಾರವಾದಿ ಆರ್ಥಿಕ ನೀತಿಗಳ ವಿರುದ್ಧ ಸಾರ್ವತ್ರಿಕ ಮುಷ್ಕರಗಳ ಸರಣಿಯ 14ನೇ ಮುಷ್ಕರ ಇದಾಗಿದೆ.

ಹಿಂದಿನ ಎಲ್ಲಾ ಮುಷ್ಕರಗಳನ್ನು ಮೀರಿ ನಿಲ್ಲುವಂತಹ ಏಕತೆಯನ್ನು ಈ ಮುಷ್ಕರದಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳು ಪ್ರದರ್ಶಿಸಿದವು. ಐಎನ್‌ಟಿಯುಸಿ, ಬಿಎಂಎಸ್ ಆದಿಯಾಗಿ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಇದರಲ್ಲಿ ಭಾಗಿಯಾಗಿರುವುದು ಈ ಮುಷ್ಕರದ ಬೇಡಿಕೆಗಳ ಮಹತ್ವವನ್ನು ಸಾರುತ್ತದೆ. ಮಾತ್ರವಲ್ಲದೆ ಕೇಂದ್ರ ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ಸಾಮ್ರಾಜ್ಯಶಾಹಿ ಜಾಗತೀಕರಣದ ಪ್ರಯುಕ್ತ ನವ ಉದಾರವಾದಿ ಆರ್ಥಿಕ ನೀತಿಗಳ ವಿರುದ್ಧದ ದುಡಿಯುವ ಜನತೆಯ ಆಕ್ರೋಶದ ಪ್ರತಿಫಲನ ಎನ್ನುವಂತೆ ಈ ಮುಷ್ಕರವು ಪ್ರತಿಧ್ವನಿಸಿದೆ.



ಸಾರ್ವತ್ರಿಕ ಬೇಡಿಕೆಗಳು

ಈ ಮುಷ್ಕರದ 10 ಬೇಡಿಕೆಗಳು ಸರ್ವವ್ಯಾಪ್ತಿಯಾ ದುದಾಗಿದ್ದು ರಾಷ್ಟ್ರದ ಒಟ್ಟಾರೆ ಜನತೆಯನ್ನು ಅಣಿ ನೆರೆಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿವೆ. ಬೆಲೆ ಏರಿಕೆ ನಿಯಂತ್ರಿಸದ ಸರ್ಕಾರ ಒಂದೆಡೆಯಾದರೆ ಅದರಿಂದ ಬಾಧಿತ ಜನತೆ ಇನ್ನೊಂದೆಡೆ ಇರುವಾಗ ಪರಿಹಾರೋಪಾಯಗಳು ಕಾರ್ಮಿಕ ಸಂಘಟನೆಗಳ ಜಂಟಿ ಬೇಡಿಕೆಗಳಲ್ಲಿದೆ. ಎಪಿಎಲ್–ಬಿಪಿಎಲ್ ತಾರತಮ್ಯ ವಿಲ್ಲದೆ, ಪ್ರತಿ ಕುಟುಂಬಕ್ಕೂ ಮಾಸಿಕ 35–ಕೆ.ಜಿ. ಅಕ್ಕಿ/ಗೋಧಿ 2ಕಿ.ಲೋ.ದಂತೆ ಒದಗಿಸಬೇಕು. ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಕೇಂದ್ರ ರಾಜ್ಯ ಸರ್ಕಾರಗಳ ಸುಂಕ ರದ್ದು ಮಾಡಬೇಕು. ಅಗತ್ಯ ಆಹಾರ ಧಾನ್ಯಗಳ ಮುಂಗಡ ವ್ಯಾಪಾರ ರದ್ದು ಮಾಡಬೇಕು ಎಂಬುದು ಪ್ರಮುಖ ಬೇಡಿಕೆ.

ರಾಷ್ಟ್ರವ್ಯಾಪ್ತಿ ಸಮಾನ ಕನಿಷ್ಠ ವೇತನವಾಗಿ 10,000 ರೂ. ನಿಗದಿ ಪಡಿಸಬೇಕು. ಕನಿಷ್ಠ ವೇತನ ವ್ಯಾಪ್ತಿಯೊಳಗೆ ಸೇವಾ ಅವಧಿಗನು ಗುಣವಾಗಿ ಸೇವಾ ವೇತನ (Service Weightage) ಒಳಗೊಳ್ಳಬೇಕು ಎಂಬ ಬೇಡಿಕೆಯು ದುಡಿಯುವ ಜನತೆಯ ಕೊಳ್ಳುವ ಶಕ್ತಿ ಹೆಚ್ಚಿಸುವ, ಜೀವನ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವ ಅಂಶವನ್ನು ಒಳಗೊಂಡಿದೆ.

ಬಂಡವಾಳಶಾಹಿ ವ್ಯವಸ್ಥೆಯು ತನ್ನ ಬಲಿಷ್ಠ ನೆಲೆಗಳಲ್ಲೇ ನಿರಂತರ ಹಿಂಜರಿತ ಆಗಿಂದಾಗ್ಗೆ ಸಂಭವಿಸುತ್ತಿರುವಾಗ ಭಾರತದ ಆರ್ಥಿಕತೆಯೂ ಅದರಿಂದ ಬಾಧಿತವಾಗಿದೆ. ಅದರ ಪರಿಣಾಮಗಳು ಕೈಗಾರಿಕೆಗಳಲ್ಲಿ ಉದ್ಯೋಗ ಕಡಿತ ಬಲವಂತದ ರಜಾ.

ಲೇ ಆಫ್, ರಿಟ್ರೆಂಚ್‌ಮೆಂಟ್ ಮತ್ತು ಸೌಲಭ್ಯ ಕಡಿತಗಳಂತಹ ಕ್ರಮಗಳಲ್ಲಿ ಪ್ರಕಟವಾಗುತ್ತಿದೆ. ಇಂತಹ ಎಲ್ಲಾ ಬಿಕ್ಕಟ್ಟುಗಳನ್ನು ತನ್ನ ಲಾಭಕ್ಕಾಗಿ ಬಳಸುವ ಬಂಡವಾಳಶಾಹಿಯು ಸರ್ಕಾರದಿಂದ ಪ್ಯಾಕೇಜ್ ಪಡೆದು ಜನರ ತೆರಿಗೆ ಹಣದಿಂದ ನಷ್ಟಗಳನ್ನು ಸರಿದೂಗಿಸಿಕೊಳ್ಳುವ ಕ್ರಮಗಳಲ್ಲಿ ಮಗ್ನವಾಗಿವೆ. ಆದರೆ ನಿಜವಾದ ಸಂಕಷ್ಟಕ್ಕೆ ಗುರಿಯಾಗಿರುವ ದುಡಿಯುವ ಜನತೆಗೆ ಮಾತ್ರ ಯಾವುದೇ ಪರಿಹಾರವಿಲ್ಲದೆ, ನಷ್ಟದ ಹೊರೆಯನ್ನು ಹೊರಬೇಕಾದ ಅನಿವಾರ್ಯತೆ ಯನ್ನು ಸೃಷ್ಟಿಸಲಾಗಿದೆ. ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಬಿಕ್ಕಟ್ಟನ್ನು ಪರಿಹರಿಸಲು ನೀಡಲಾಗುವ ಪರಿಹಾರ ಪ್ಯಾಕೇಜ್‌ಗಳು ಉದ್ಯೋಗ ರಕ್ಷಣೆಗೆ ಮತ್ತು ಸೃಷ್ಟಿಗೆ ಮೀಸಲಾಗಬೇಕು, ಎಂಬುದು ಪ್ರಮುಖ ಬೇಡಿಕೆ.

ನವ ಉದಾರವಾದಿ ಆರ್ಥಿಕ ನೀತಿಗಳ ಪರಿಣಾಮವಾಗಿ ಖಾಯಂ ನೌಕರಿ ಇಲ್ಲವಾಗಿ ಗುತ್ತಿಗೆ ಕಾರ್ಮಿಕ ಪದ್ಧತಿಯು ಸರ್ವವ್ಯಾಪಿ ಯಾಗುತ್ತಿರುವಾಗ ಗುತ್ತಿಗೆ ಕಾರ್ಮಿಕ ಪದ್ಧತಿ ನಿಯಂತ್ರಣಕ್ಕಾಗಿ ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ನಿಯಮವನ್ನು ಶಾಸನದಲ್ಲಿ ಒಳಗೊಳ್ಳಲು ಗುತ್ತಿಗೆ ಕಾರ್ಮಿಕ ಪದ್ಧತಿ ನಿಯಂತ್ರಣಕ್ಕಾಗಿ ನಿಷೇಧ ಕಾಯ್ದೆ (1971) ಅಗತ್ಯ ತಿದ್ದುಪಡಿ ಮಾಡಲು ಕಾರ್ಖಾನೆಯಲ್ಲಿನ ಖಾಯಂ ನೌಕರರಿಗೆ ನೀಡುವ ಆರಂಭಿಕ ವೇತನ ವನ್ನು ಗುತ್ತಿಗೆ ಕಾರ್ಮಿಕರಿಗೆ ಖಾತ್ರಿಗೊಳಿಸುವ ಕ್ರಮಗಳಾಗಬೇಕೆಂದು ಒತ್ತಾಯಿಸಲಾಗುತ್ತಿದೆ.

ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗಳಿಗೆ ಅಗತ್ಯ ಹಣಕಾಸು ಸಂಪನ್ಮೂಲವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡಬೇಕು. ಕಾರ್ಮಿಕ ರನ್ನು ನೊಂದಾಯಿಸಿ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಬೇಕು. ಖಾತ್ರಿ ಇಲ್ಲದ ಶೇರುಪೇಟೆ ಆಧಾರಿತವಾದ ಪಿಂಚಣಿ ಯೋಜನೆ ಪಿಎಫ್‌ಆರ್‌ಡಿಎ ಮಸೂದೆ ರದ್ದು ಪಡಿಸಬೇಕು. ಸರ್ವರಿಗೂ ಖಾತ್ರಿ ಪಿಂಚಣಿ ನೀಡಬೇಕು ಎಂದು ಒತ್ತಾಯಿಸಲಾಗುತ್ತಿದೆ.

ಸಾರ್ವಜನಿಕ ಉದ್ಯಮಗಳ ಶೇರು ಮಾರಾಟ ಖಾಸಗೀಕರಣ ನಿಲ್ಲಬೇಕು. ಅಲ್ಲಿನ ಕಾರ್ಮಿಕರಿಗೆ ಉತ್ತಮ ವೇತನ ಒಪ್ಪಂದ ನೀಡಿ ಗುತ್ತಿಗೆ ಕಾರ್ಮಿಕರನ್ನು ಖಾಯಂ ಗೊಳಿಸಬೇಕು.

ಕಾರ್ಮಿಕ ಸಂಘಗಳ ನೊಂದಾವಣೆಯನ್ನು 45 ದಿನಗಳಲ್ಲಿ ಪೂರ್ಣಗೊಳಿಸಬೇಕು. ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐಎಲ್‌ಒ) ಸಂಘ ಕಟ್ಟುವ ಹಕ್ಕಿನ 87 ನೇ ಮತ್ತು ಸಾಮೂಹಿಕ ಚೌಕಾಶಿ ಹಕ್ಕಿನ 98ನೇ ಒಡಂಬಡಿಕೆಗಳನ್ನು ಭಾರತದ ಸಂಸತ್ತಿನಲ್ಲಿ ಅನುಮೋದಿಸಬೇಕು. ಕಾರ್ಮಿಕ ಕಾನೂನು ಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸ ಬೇಕು. ಬೋನಸ್ ಭವಿಷ್ಯ ನಿಧಿ ನೀಡಲು ಇರುವ ಅರ್ಹತೆ ಮತ್ತು ಪಾವತಿ ಮೇಲಿನ ಎಲ್ಲಾ ಮಿತಿಗಳನ್ನು ತೆರವುಗೊಳಿಸಬೇಕು. ಗ್ರಾಚ್ಯುಟಿ ಪಾವತಿ ಮಿತಿ ಹೆಚ್ಚಿಸಬೇಕು... ಎಂಬ ಬೇಡಿಕೆಗಳಿಗಾಗಿ ನಡೆದಿರುವ ಜಂಟಿ ಹೋರಾಟವನ್ನು [illegible] ರಾಷ್ಟ್ರವ್ಯಾಪ್ತಿ ಪ್ರಚಾರಾಂದೋಲನವನ್ನು [illegible] 2 ರಿಂದ 8ರ ವರೆಗೆ ಕೈಗೊಂಡಿದೆ. ಅಯಾ ರಾಜ್ಯದ ಪರಿಸ್ಥಿತಿಗನುಗುಣವಾಗಿ ಸ್ಥಳೀಯ ಬೇಡಿಕೆಗಳನ್ನು ಒಳಗೊಂಡು ಪ್ರಚಾರಾಂದೋಲನವನ್ನು ಯಶಸ್ವಿಗೊಳಿಸಲು ಜುಲೈ 2 ರಿಂದ 5 ರವರೆಗೆ ಕೊಯಮತ್ತೂರಿನಲ್ಲಿ ನಡೆದ ಸಿಐಟಿಯು ಕೌನ್ಸಿಲ್ ಸಭೆ ಕರೆ ನೀಡಿತ್ತು.

ಅದರಂತೆ ರಾಜ್ಯದಲ್ಲಿ 2–9ರವರೆಗೆ ಪ್ರಚಾರಾಂದೋಲನ ನಡೆಸಿ 10ರಂದು ರಾಜ್ಯ ಮತ್ತು ತಾಲೂಕ್ ಕೇಂದ್ರಗಳಲ್ಲಿ ಸಾಮೂಹಿಕ ಧರಣಿ ಸತ್ಯಾಗ್ರವನ್ನು ನಡೆಸಲಾಗಿದೆ.

ತ್ರಿಪಕ್ಷೀಯ ಸಮಿತಿ ಆಗಲಿ

ಎಲ್ಲಾ ಕಾರ್ಮಿಕರಿಗೂ ಉಚಿತ ವಸತಿ–ನಿವೇಶನ ನೀಡಬೇಕು, ಗುತ್ತಿಗೆ ಕಾರ್ಮಿಕರ ಭವಿಷ್ಯ ನಿಧಿ ಯುಇಎಸ್‌ಐ ಅನ್ನು ಪ್ರಧಾನ ಮಾಲಿಕರ ಖಾತೆಯಲ್ಲೇ ನಿರ್ವಹಿಸಬೇಕು. ಕೇಂದ್ರ ರಾಜ್ಯ ಸರ್ಕಾರಗಳ ತ್ರಿಪಕ್ಷೀಯ ಸಮಿತಿಗಳಲ್ಲಿ ಸಿಐಟಿಯುಗೆ ಪ್ರಾತಿನಿಧ್ಯ ನೀಡಬೇಕು. ಗೌರವಧನ ಆಧಾರಿತ ಅಂಗನವಾಡಿ, ಅಕ್ಷರದಾಸೋಹ, ಆಶಾ ಮುಂತಾದ ನೌಕರರನ್ನು ಖಾಯಂಗೊಳಿಸಬೇಕು. ದುಡಿಯುವ ಮಹಿಳೆಯರಿಗೆ 180 ದಿನ ಹೆರಿಗೆ ರಜೆ ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸಬೇಕು. ಲೈಂಗಿಕ ಕಿರುಕುಳ ತಡೆಯಲು ಸುಪ್ರಿಂ ಕೋರ್ಟ್ ನಿರ್ದೇಶನದಂತೆ ಸಮಿತಿಗಳನ್ನು ರಚಿಸಬೇಕು. ದಿನಗೂಲಿ ನೌಕರರಿಗೆ ಕೇಂದ್ರ 900+ ಜಾರಿ ಮಾಡಿರುವ 93ರ ಯೋಜನೆಯನ್ನು ರಾಜ್ಯ 900+ ವು ಅಂಗೀಕರಿಸಿ ಜಾರಿಮಾಡಬೇಕು. ಮುಂತಾದ ಸ್ಥಳೀಯ ಬೇಡಿಕೆಗಳನ್ನು ಒಳಗೊಂಡು ಪ್ರಚಾರಾಂದೋಲನವನ್ನು ರಾಜ್ಯದಲ್ಲಿ ನಡೆಸಲಾಯಿತು.

ಫೆಬ್ರವರಿ 28 ರ ಮುಷ್ಕರದ ನಂತರ ನೌಕರರ ಭವಿಷ್ಯ ನಿಧಿ ಹಣದ ಮೇಲಿನ ಬಡ್ಡಿ ದರವನ್ನು 8.25% ಕ್ಕೆ ಕೇಂದ್ರ ಸರ್ಕಾರವು ಕಡಿತಮಾಡಿದೆ. ಗುತ್ತಿಗೆ ಕಾರ್ಮಿಕರ ಕಾನೂನಿಗೆ ತಿದ್ದುಪಡಿ ಮಾಡಬೇಕೆಂಬ ಭಾರತೀಯ ಸಮ್ಮೇಳನದ (ಐಸಿಎಲ್) ಶಿಫಾರಸ್ಸು ಪ್ರಧಾನಿ ಕಛೇರಿಯಲ್ಲಿ ದೂಳು ತಿನ್ನುತ್ತಿದೆ. "ಗುತ್ತಿಗೆ ಕಾರ್ಮಿಕರು ಇದ್ದರೆ ತಾನೆ ಕೈಗಾರಿಕೆಗಳು ಲಾಭ ಮಾಡಲು ಆರ್ಥಿಕಾಭಿವೃದ್ಧಿ ಸಾಧಿಸಲು ಸಾಧ್ಯ" ಎಂಬ

ಪುಟ 15 ಕ್ಕೆ

ಬೇಕು

ನಾರಿ ದೇವತೆಯೆಂಬ ಭಾರತದಿ ನಿತ್ಯ
ತಡೆಯಿರದೆ ನಡೆಯುತಿವೆ ಮಾನ ಪ್ರಾಣ ಹತ್ಯ
ತಡೆಯುವವ ಯಾರಿಲ್ಲ ಅಮಾನುಷ್ಯ ಕೃತ್ಯ
ದನ ಕಾಯ ಬೇಕೆಂಬ ನಮ್ಮ ಅಮಾತ್ಯ

– ವಿಡಂಬಾರಿ

ವಿದೇಶಿ ಬಂಡವಾಳದ ಒತ್ತಡ.....

ಪುಟ 7 ರಿಂದ

ಬಲವಾದ ಅನುಮಾನಗಳಿವೆ. ಈ ಹಿಂದೆ ಎನ್ರೋನ್‌ನಂತಹ ಕಂಪನಿಗಳ ಅಡಮಾನ-ಆಧಾರಿತ ಸಾಲಗಳಿಗೆ 'ಎಎಎ' ಎಂಬ ಉನ್ನತ ದರ್ಜೆಯನ್ನೇ ಇವು ಕೊಟ್ಟಿದ್ದವು. 2008ರಲ್ಲಿ ಜಾಗತಿಕ ಹಣಕಾಸು ಕುಸಿತದ ತುಸುವೇ ಮೊದಲು ಲೆಹ್ಮಾನ್ ಬ್ರದರ್ಸ್ ಮತ್ತು ವಿಮಾ ದೈತ್ಯ ಎಐಜಿಗೆ ಕೂಡ ಇಂತಹುದೇ ದರ್ಜೆಗಳನ್ನು ನೀಡಿದ್ದವು. ವಾಲ್ ಸ್ಟ್ರೀಟ್ ಶೇರು ಮಾರುಕಟ್ಟೆ ಕುಸಿಯವಲ್ಲಿ ಪ್ರಮುಖವಾಗಿ ಕಾರಣವಾದದ್ದು ಇವೇ ಎರಡು ಸಂಸ್ಥೆಗಳು. ಈ ದರ್ಜೆ ಏಜೆನ್ಸಿಗಳು ಕ್ಲಿಷ್ಟ ಹಣಕಾಸು ಸಂಸ್ಥೆಗಳಿಗೆ ಉನ್ನತ ದರ್ಜೆಗಳನ್ನು ಹೇಗೆ ನೀಡುತ್ತವೆ ಎಂಬ ಪ್ರಶ್ನೆಯನ್ನು ಅಮೆರಿಕಾದ ನ್ಯಾಯ ಇಲಾಖೆ ತನಿಖೆ ನಡೆಸುತ್ತಿರುವುದಾಗಿ ವರದಿಯಾಗಿದೆ.

ಭಾರತದ ಮೇಲೆ ಇಂತಹ ಒತ್ತಡಗಳ ಇನ್ನೊಂದು ಉದಾಹರಣೆಯೆಂದರೆ, 'ಟೈಮ್' ಪತ್ರಿಕೆಯ ಜುಲೈ 16ರ ಸಂಚಿಕೆ. ಅದು ಮುಖಪುಟದಲ್ಲಿ ನಮ್ಮ ಪ್ರಧಾನ ಮಂತ್ರಿಗಳ ಚಿತ್ರ ಹಾಕಿ ಆತನನ್ನು 'ಅಂಡರ್ ಅಚೀವರ್' ಅಂದರೆ ಸಾಧಿಸುವುದರಲ್ಲಿ ಹಿಂದೆ ಬಿದ್ದವರು ಎಂದು ಕರೆದಿದೆ. 'ಭಾರತ ಮತ್ತೆ ಆರಂಭಿಸಬೇಕಾಗಿದೆ. ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಈ ಕೆಲಸ ಮಾಡಬಲ್ಲರೇ?' ಎಂದಿದೆ. ಮುಂದುವರೆದು ಅದು "ಭಾರತ ಕಾಲವಿಳಂಬ ಮಾಡುತ್ತಿದೆ. ಅದನ್ನು ದಾರಿಗೆ ತರಲು ಪ್ರಧಾನ ಮಂತ್ರಿಗಳು ತನ್ನ ಖಾಸಗಿ ಮತ್ತು ರಾಜಕೀಯ ದುಗುಡದಿಂದ ಹೊರಬರಬೇಕು" ಎಂದಿದೆ. ಹಲವು ಧೀರ 'ಸುಧಾರಣೆ'ಗಳಿಗೆ ಮುಂದಾಗಬೇಕು ಎಂದು ಅದು ಭಾರತವನ್ನು ಆಗ್ರಹಿಸಿದೆ.

ಆಗ್ರಹಗಳ ದೊಡ್ಡ ಪಟ್ಟಿ

ಈ ಎಲ್ಲ ಒತ್ತಡಗಳ ಹಿಂದಿರುವ ಆಗ್ರಹಗಳ ಪಟ್ಟಿ ದೊಡ್ಡದಾಗಿದೆ: ಚಿಲ್ಲರೆ ವ್ಯಾಪಾರ ವಲಯವನ್ನು ವಿದೇಶಿ ಹೂಡಿಕೆಗಳಿಗೆ ತೆರೆಯಬೇಕು, ಅಂದರೆ ವಾಲ್ ಮಾರ್ಟ್‌ನಂತಹ ಚಿಲ್ಲರೆ ವ್ಯಾಪಾರ ದೈತ್ಯರಿಗೆ ಭಾರತವನ್ನು ಪ್ರವೇಶಿಸಲು ಅವಕಾಶ ಕೊಡಬೇಕು; ಸಬ್ಸಿಡಿಗಳನ್ನು ತೀವ್ರವಾಗಿ ಇಳಿಸಬೇಕು; ಡೀಸೆಲ್ ಮತ್ತು ಇತರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳ ಮೇಲಿನ ಹತೋಟಿಯನ್ನು ತೆಗೆಯಬೇಕು; ವಿಮಾವಲಯದಲ್ಲಿ ವಿದೇಶಿ ನೇರ ಹೂಡಿಕೆಯ ಪಾಲನ್ನು ಈಗಿರುವ 26ಶೇ.ದಿಂದ 49ಶೇ.ಕ್ಕೆ ಏರಿಸಬೇಕು; ಮಾರುಕಟ್ಟೆ ಹೂಡಿಕೆಗಳಿಗೆ ಹೋಗಲು ಪೆನ್ಶನ್ ನಿಧಿಗಳಲ್ಲಿ ವಿದೇಶಿ ಹೂಡಿಕೆಗಳಿಗೆ ಅವಕಾಶ, ಅಂದರೆ ಸಟ್ಟಾಕೋರತನಕ್ಕೆ ಅವಕಾಶ ಕೊಡಬೇಕು; ಭಾರತೀಯ ಖಾಸಗಿ ಬ್ಯಾಂಕುಗಳನ್ನು ವಹಿಸಿಕೊಳ್ಳಲು ವಿದೇಶಿ ಬ್ಯಾಂಕುಗಳಿಗೆ ಅವಕಾಶ ಕೊಡಬೇಕು ಇತ್ಯಾದಿ, ಇತ್ಯಾದಿ.

ಭಾರತದ ಚಿಲ್ಲರೆ ವಲಯ ದೇಶದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಏನಿಲ್ಲೆಂದರೂ 11ಶೇ. ಕೊಡುಗೆ ನೀಡುತ್ತಿದೆ ಮತ್ತು 4 ಕೋಟಿಗಿಂತಲೂ ಹೆಚ್ಚು ಜನಗಳಿಗೆ ಉದ್ಯೋಗ ಕಲ್ಪಿಸಿದೆ. ನಾಲ್ಕನೇ ಆರ್ಥಿಕ ಗಣತಿಯ ಪ್ರಕಾರ 38.2ಶೇ. ಗ್ರಾಮೀಣ ಉದ್ಯೋಗ ಮತ್ತು 46.4ಶೇ. ನಗರ ಉದ್ಯೋಗ ಈ ವಲಯದಲ್ಲಿದೆ. ಬಹುರಾಷ್ಟ್ರೀಯ ದೈತ್ಯ ಕಂಪನಿಗಳಿಗೆ ಚಿಲ್ಲರೆ ವ್ಯಾಪಾರದಲ್ಲಿ ಅನುಮತಿ ಕೊಡುವುದೆಂದರೆ, ಈ ಕೋಟ್ಯಂತರ ಜನಗಳನ್ನು ಬಡತನ ಮತ್ತು ದುರ್ದೆಸೆಗೆ ತಳ್ಳಿದಂತೆಯೇ. ಭಾರತ ಜಾಗತಿಕ ಹಣಕಾಸು ಕುಸಿತದಿಂದ ತನ್ನನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗಿದ್ದರೆ, ಅದು ಬಹುಮಟ್ಟಿಗೆ ತನ್ನ ಹಣಕಾಸು ವಲಯವನ್ನು ಅಂತರ್ರಾಷ್ಟ್ರೀಯ ಜೂಜುಕೋರತನಕ್ಕೆ ತೆರೆದಿಡದೇ ಇದ್ದುದರಿಂದಲೇ. ಸದ್ಯದ ಪ್ರಸ್ತಾವಿತ 'ಸುಧಾರಣೆ'ಗಳನ್ನು ಜಾರಿ ಮಾಡಿದರೆ, ಭಾರತ ತನ್ನನ್ನು ತೀವ್ರ ಅಂತರ್ರಾಷ್ಟ್ರೀಯ ಏರಿಳಿತಗಳಿಗೆ ಒಳಪಡಿಸಿಕೊಂಡು ದುರ್ದೆಸೆಗೆ ಪಕ್ಕಾಗುತ್ತದೆ. ಪೆನ್ಶನ್ ನಿಧಿಗಳಲ್ಲಿ ಮತ್ತು ವಿಮಾವಲಯದಲ್ಲಿ ಅಂತರ್ರಾಷ್ಟ್ರೀಯ ಜೂಜುಕೋರತನಕ್ಕೆ ಅವಕಾಶ ಕೊಡುವುದೆಂದರೆ, ಕೋಟ್ಯಂತರ ದುಡಿಯುವ ಜನಗಳ ಬದುಕನ್ನು ಹಾಳುಗೆಡವಿದಂತೆಯೇ.

ಇದೀಗ ನಮ್ಮ ಮುಂದಿರುವ ವಾಸ್ತವತೆ. ಹೀಗಿದ್ದರೂ, ದುರದೃಷ್ಟವಶಾತ್, ಇಂತಹ ಒತ್ತಡಗಳು ಕೆಲಸ ಮಾಡುತ್ತಿರುವಂತೆ ಕಾಣುತ್ತಿದೆ. ಪ್ರಣಬ್ ಮುಖರ್ಜಿಯವರು ರಾಷ್ಟ್ರಪತಿ ಅಭ್ಯರ್ಥಿಯಾಗಲು ಹಣಕಾಸು ಮಂತ್ರಿಯ ಸ್ಥಾನದಿಂದ ರಾಜೀನಾಮೆ ಕೊಟ್ಟ ಕೂಡಲೇ, ಪ್ರಧಾನ ಮಂತ್ರಿಗಳು ಈ ಸಚಿವಾಲಯವನ್ನು ವಹಿಸಿಕೊಂಡರು, ಅಧಿಕಾರಿಗಳ ಹಲವು ಸಭೆಗಳನ್ನು ನಡೆಸಿದರು, "ನಿರಾಶಾಭಾವದ ವಾತಾವರಣವನ್ನು ಬದಲಿಸಿ" , "ಪಶು ಚೈತನ್ಯವನ್ನು ಹರಿಯಬಿಡಿ" ಎಂದು ಅವರನ್ನು ಆಗ್ರಹಿಸಿದರು. ಅವರು ರೆವಿನ್ಯೂ ಇಲಾಖೆಯ 19 ಅಧಿಕಾರಿಗಳ ವರ್ಗ ಮಾಡಿದರು. ಕೆಲವೇ ಗಂಟೆಗಳೊಳಗೆ, ಭಾರತದಲ್ಲಿ ವಿದೇಶಿ ಹೂಡಿಕೆಗಳ ಮೇಲಿನ ತೆರಿಗೆ ತಪ್ಪಿಸುವುದರ ವಿರುದ್ಧದ ನಿಯಮ(ಜಿಎಎಆರ್)ಗಳನ್ನು ಕೈಬಿಡಲಾಯಿತು.

ಯಾರಿಗಾಗಿ 'ಸುಧಾರಣೆ'ಗಳು?

ಯುಪಿಎ-2 ಸರಕಾರ ಇಂತಹ 'ಸುಧಾರಣೆ'ಗಳ ಹಾದಿಯಲ್ಲಿ ಸಾಗಿದರೆ, ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಭಾರತದ ಕಾರ್ಪೊರೇಟ್ ವಲಯದಲ್ಲಿ 'ಉತ್ತಮ ಅನಿಸಿಕೆಯ ಅಂಶ'ವನ್ನೇನೋ ಉಂಟು ಮಾಡಬಹುದು. ಆದರೆ ಬಹುಪಾಲು ಭಾರತೀಯ ಜನತೆಗೆ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ. ಬಹುಪಾಲು ಭಾರತೀಯರ ಜೀವಮಾನದ ಉಳಿತಾಯಗಳನ್ನು ಹೊಂದಿರುವ ಹಣಕಾಸು ವಲಯವನ್ನು ತೆರೆದಿಟ್ಟರೆ, ಅದು ಕೋಟ್ಯಂತರ ಮಂದಿಯ ಭವಿಷ್ಯಕ್ಕೆ ಅನಿಶ್ಚಿತತೆಯನ್ನು, ಅಭದ್ರತೆಯನ್ನು ಉಂಟು ಮಾಡುತ್ತದೆ. ಅಲ್ಲದೆ, ಈ ಯಾವ 'ಸುಧಾರಣೆ'ಗಳೂ ಜನಗಳು ಎದುರಿಸುವ ಬೆಲೆಯೇರಿಕೆ, ನಿರುದ್ಯೋಗ, ಬಡತನ ಮತ್ತು ಸಂಕಟಗಳಂತಹ ಸಮಸ್ಯೆಗಳನ್ನು ಪರಿಹರಿಸುವುದಿರಲಿ, ಅವನ್ನು ಕೈಗೆತ್ತಿಕೊಳ್ಳುವುದೂ ಇಲ್ಲ. ಬಡತನದ ವಾಸ್ತವಿಕ ಅಂದಾಜುಗಳ ಪ್ರಕಾರ ಭಾರತದ ಜನಸಂಖ್ಯೆಯ ನಾಲ್ಕನೇ ಐದು ಭಾಗ, ಅಂದರೆ 80 ಕೋಟಿಗೂ ಹೆಚ್ಚು ಮಂದಿ ಬಡತನದ ರೇಖೆಯ ಕೆಳಗೆ ಇದ್ದಾರೆ. ಇದು ವಾಸ್ತವತೆಯಾಗಿರುವಾಗ, ಈ ಪ್ರಸ್ತಾವಿತ 'ಸುಧಾರಣೆ'ಗಳು, ಖಾಸಗಿ ಬಂಡವಾಳದ ಲಾಭಗಳನ್ನು ವಿಸ್ತರಿಸಬಹುದು. ಭಾರತದ ಕಾರ್ಪೊರೇಟ್ ಮಂದಿಗೆ ಇನ್ನೂ ಸುಂದರ ಬ್ಯಾಲೆನ್ಸ್ ಶೀಟುಗಳನ್ನು ಕೊಡಬಹುದು. ಆದರೆ, ಅದರೊಂದಿಗೇ, ಎರಡು ಭಾರತಗಳ ನಡುವಿನ ಕಂದರವನ್ನು ಇನ್ನಷ್ಟು ಅಗಲಿಸುತ್ತವೆ. ಈಗಾಗಲೇ ಸಂಕಟಪಡುತ್ತಿರುವ ಬಹುಪಾಲು ಜನತೆಯ ಮೇಲೆ ಇನ್ನಷ್ಟು ಸಂಕಟಗಳನ್ನು ಹೇರುತ್ತವೆ.

ಭಾರತದ ಆರ್ಥಿಕಕ್ಕೆ ಮತ್ತು ಜನತೆಗೆ ಬೇಕಾಗಿರುವುದು ಒಂದು ಆರೋಗ್ಯಕರ ಬೆಳವಣಿಗೆಯನ್ನು ಉಳಿಸಿಕೊಳ್ಳಬಲ್ಲ, ಸಾರ್ವಜನಿಕ ಹೂಡಿಕೆಗಳ ಮೂಲಕ ಉದ್ಯೋಗಾವಕಾಶಗಳನ್ನು ಹೆಚ್ಚಿಸಿ ಆಂತರಿಕ ಬೇಡಿಕೆಗಳ ಗಮನಾರ್ಹ ಬೆಳವಣಿಗೆ. ಕಾರ್ಪೊರೇಟ್ ಭಾರತಕ್ಕೆ ಉತ್ತೇಜನೆಯೆಂದು ನೀಡಿದ 5.28 ಲಕ್ಷ ಕೋಟಿ ರೂ.ಗಳಷ್ಟು ಬೃಹತ್ ಪ್ರಮಾಣದ ತೆರಿಗೆ ರಿಯಾಯ್ತಿಗಳ ಫಲಿತಾಂಶವೆಂದರೆ ಕೈಗಾರಿಕಾ ಬೆಳವಣಿಗೆಯ ದರವನ್ನು ಜೂನ್ 2011ರಲ್ಲಿದ್ದ 8.8ಶೇ.ದಿಂದ ಏಪ್ರಿಲ್ 2012ರಲ್ಲಿ –3.1ಶೇ.ದ ಋಣಾತ್ಮಕ ಅಂಕಿಗೆ ಇಳಿಯಿತು. ಈ ದಾರಿಯನ್ನು ಕೈಬಿಡಬೇಕು ಮತ್ತು ಹೀಗೆ ಸಂಗ್ರಹಿಸಿದ ನ್ಯಾಯಬದ್ಧ ತೆರಿಗೆಗಳನ್ನು ಸಾರ್ವಜನಿಕ ಹೂಡಿಕೆಗಳಿಗೆ ಬಳಸಬೇಕು.

ಹೀಗೆ ದೇಶದಲ್ಲಿ ಸಂಪನ್ಮೂಲಗಳ ಕೊರತೆಯೂ ಇಲ್ಲ, ಆರ್ಥಿಕ ಬೆಳವಣಿಗೆಯ ದಾರಿಗಳ ಕೊರತೆಯೂ ಇಲ್ಲ. ಬೇಕಾಗಿರುವುದು ನಮ್ಮ ಬಹು ಆವಶ್ಯಕವಾದ ಮೂಲರಚನೆಗಳನ್ನು ಕಟ್ಟುತ್ತಲೇ ಜನಗಳಿಗೆ ಪರಿಹಾರ ಒದಗಿಸಬಲ್ಲ ಸರಿಯಾದ ಧೋರಣೆಗಳ ಸರಣಿ. ಈ ಯುಪಿಎ ಸರಕಾರ ಭಾರತದ ಮತ್ತು ಅದರ ಜನತೆಯ ಹಿತದೃಷ್ಟಿಯಿಂದ ತನ್ನ ಧೋರಣೆಯ ದಿಕ್ಕನ್ನು ಬದಲಿಸುವಂತೆ ಒತ್ತಡ ತರಲು ಜನತೆಯ ಅಣಿನೆರಿಕೆಯನ್ನು ಬಲಪಡಿಸಬೇಕು.

ರಾಜಕೀಯ ಅಸ್ಥಿರತೆ....

ಪುಟ 5 ರಿಂದ


ತುಳುಕಾಡುತ್ತಿರುವ ಮಂತ್ರಿಮಂಡಲದಿಂದ ಏನನ್ನು ನಿರೀಕ್ಷಿಸಬಹುದು?. ಇನ್ನು ಈ ಸರ್ಕಾರದಲ್ಲಿ ಭಿನ್ನಮತದ ಯಾವ ಪ್ರಶ್ನೆಯೂ ಮುಗಿದಿಲ್ಲ. ಹೊಸ ಹೊಸ ಗುಂಪುಗಳು ಹೊಸ ಹೊಸ ಭಿನ್ನಮತಗಳು ಆಗಲೇ ಪ್ರಾರಂಭವಾಗಿದೆ. 21 ಜನರ ಶಾಸಕರ ಗುಂಪೊಂದು ಈಗಾಗಲೇ ಪ್ರತ್ಯೇಕ ಸಭೆಗಳನ್ನು ನಡೆಸಿ ನಮಗೆ ಆಗಿರುವ 'ಅನ್ಯಾಯ'ಗಳನ್ನು ಸರಿಪಡಿಸದೆ ಹೋದರೆ ಈ ತಿಂಗಳ 20ರ ನಂತರ ಪಕ್ಷದ ಹೈಕಮಾಂಡ್‌ಗೆ ದೂರು ನೀಡುತ್ತೇವೆ ಎಂದು ತೀವ್ರ ಕ್ರಮದ ಬಗ್ಗೆ ಎಚ್ಚರಿಕೆ ನೀಡಿದ್ದಾರೆ. ಇನ್ನು ಇಬ್ಬರು-ಮೂರು ಜನ ಶಾಸಕರು ಶಾಸಕ ಸ್ಥಾನಕ್ಕೆ ಮತ್ತು ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ರಾಜಿನಾಮೆಯ ಬೆದರಿಕೆಯನ್ನು ಹಾಕಿದ್ದಾರೆ. ಇಂತಹ ಸ್ಥಿತಿಯಲ್ಲಿ ಹೊಸ ಮುಖ್ಯಮಂತ್ರಿ ಯಾವ ರೀತಿಯಲ್ಲಿ ಸರ್ಕಾರವನ್ನು ಈ ರಾಜ್ಯಕ್ಕೆ ಕೊಡಬಹುದು ಎಂಬುದನ್ನು ಊಹಿಸಲು ಕೂಡ ಸಾಧ್ಯವಿಲ್ಲ.

ಒಂದು ವೇಳೆ ಹೊಸದಾಗಿ ಹುಟ್ಟಿಕೊಂಡಿರುವ ಭಿನ್ನಮತದ ಗುಂಪು ನಾವು ಸರ್ಕಾರಕ್ಕೆ ಬೆಂಬಲ ಕೊಡುವುದಿಲ್ಲವೆಂದು ತೀರ್ಮಾನಿಸಿದರೆ ಈ ಸರ್ಕಾರ ಉಳಿಸಲು ಸಾಧ್ಯವೇ? ಇಂತಹ ಅತಂತ್ರ ಮತ್ತು ಆತಂಕದ ಸ್ಥಿತಿಯಲ್ಲಿ ಸರ್ಕಾರವನ್ನು ಹೇಗೆ ಪರಿಣಾಮಕಾರಿಯಾಗಿ ನಡೆಸಲು ಸಾಧ್ಯ ? ಇನ್ನು ಈ ಸರ್ಕಾರದ ಅವಧಿ ಕೇವಲ 10 ತಿಂಗಳು ಮಾತ್ರ, ಹತ್ತು ವರ್ಷ ಪ್ರಾಮಾಣಿಕವಾಗಿ ಯಾವುದಾದರೂ ಸರ್ಕಾರ ನಡೆಸಿದರೂ ಈ ರಾಜ್ಯವನ್ನು ಸರಿ ಹಾದಿಗೆ ತರಲು ಸಾಧ್ಯವಿಲ್ಲ ಯಾಕೆಂದರೆ ಅಷ್ಟರ ಮಟ್ಟಿಗೆ ಈ ರಾಜ್ಯದ ಪರಿಸ್ಥಿತಿ ಹದಗೆಟ್ಟಿದೆ. ಆರ್ಥಿಕ ಹಿನ್ನಡೆ, ಸಾಮಾಜಿಕ ಅರಾಜಕತೆ ಮತ್ತು ಸಂಘರ್ಷಗಳು, ಕೋಮುಗಲಭೆಗಳು ನಕ್ಸಲ್‌ರ ಸಮಸ್ಯೆ-ಶಿಕ್ಷಣರಂಗದಲ್ಲಿನ ಅರಾಜಕತೆಗಳು ಮತ್ತು ಭ್ರಷ್ಟಾಚಾರ, ಆಡಳಿತ ಮತ್ತು ರಾಜಕೀಯ ರಂಗದಲ್ಲಿನ ಭ್ರಷ್ಟಾಚಾರಗಳು, ಎರಡು ವರ್ಷಗಳಿಂದ ಭೀಕರ ಅನಾವೃಷ್ಟಿ ಬಂದು ಒಂದು ಹೊತ್ತಿನ ಊಟಕ್ಕೆ ಪರದಾಡುವ ಕೋಟಿಗಟ್ಟಲೆ ಜನ, ರೈತರ ಸರಣಿ ಆತ್ಮಹತ್ಯೆಗಳು, ಮಹಿಳೆಯರ ಮೇಲಿನ ದೌರ್ಜನ್ಯ, ದಲಿತರ ಮೇಲಿನ ದಬ್ಬಾಳಿಕೆಗಳು, ಜಾತಿ ರಾಜಕಾರಣದ ವಿಜೃಂಭಣೆ ಇಂತಹ ಗಂಭೀರ ಪರಿಸ್ಥಿತಿಯಿಂದ ಈ ರಾಜ್ಯವನ್ನು ಈ ಭ್ರಷ್ಟ ರಾಜಕೀಯ ಪಕ್ಷ ಹೊರತರಲು ಖಂಡಿತ ಸಾಧ್ಯವಿಲ್ಲ. ಹೊಸ ಮಂತ್ರಿಮಂಡಲ ರಚನೆಯಾದ ಮೇಲೆ ಹೊಸದಾಗಿ ಹುಟ್ಟಿಕೊಂಡಿರುವ ಭಿನ್ನಮತ ಮತ್ತು ಶಾಸಕರ ರಾಜಿನಾಮೆಗಳ ಬೆದರಿಕೆಗಳು, ಅಧಿವೇಶನವನ್ನು ಬಹಿಷ್ಕರಿಸುವ ಬೆದರಿಕೆ ಹೀಗೆ ಈ ಭಿನ್ನಮತ ಪೆಡಂಭೂತವಾಗಿ ಕಾಡದೆ ಇರಲಾರದು.

ಹಾಗಾಗಿ ಈ ಸರ್ಕಾರ ಸ್ಥಿರತೆಯನ್ನು ಹೊಂದಿರುವುದು ಅಸಾಧ್ಯ. ಸರ್ಕಾರ ರಾಜ್ಯಕ್ಕೆ ಅಪಾಯ ಮತ್ತು ಹೊರೆ. ಆದುದರಿಂದ ಬಿಜೆಪಿ ಸರ್ಕಾರ ತಕ್ಷಣ ವಿಧಾನ ಸಭೆಯನ್ನು ವಿಸರ್ಜಿಸಿ ಹೊಸದಾಗಿ ಜನಾದೇಶ ಪಡೆಯುವುದೇ ಇಂದಿನ ತುರ್ತು ಅಗತ್ಯವಾಗಿದೆ.

ಅತ್ತ ಫರ್ಮಾನು, ಇತ್ತ ಗುಂಡೇಟು:

ಯುಪಿಎಗೆ 'ದುರದೃಷ್ಟಕರ'ವಷ್ಟೇ!



ವೇದರಾಜ ಎನ್.ಕೆ.

ಯುಪಿಎ-2 ಸರಕಾರ ತನ್ನ ಮಾದರಿ ಮಿತ್ರನ ಸವಾರಿಗೆ ಈ ವಾರ ಎರಡು ಬಾರಿ 'ದುರದೃಷ್ಟಕರ' ಎಂದು ಉದ್ಗರಿಸಬೇಕಾಗಿ ಬಂದಿದೆ. ಪರ್ಸಿಯನ್ ಕೊಲ್ಲಿಯಲ್ಲಿ ಇರಾನಿನ ಮೇಲೆ ಎರಗುವ ತವಕದಲ್ಲಿರುವ ಅಮೆರಿಕಾದ ನೌಕಾಸೇನೆಯ ಫಿರಂಗಿ ಮೊದಲ ಬಲಿ ತೆಗೆದುಕೊಂಡಿದೆ-ಒಬ್ಬ ಭಾರತೀಯ ಮೀನುಗಾರನನ್ನು, ಅಲ್ಲದೇ ಇತರ ಮೂವರನ್ನು ಗಾಯಗೊಳಿಸಿದೆ. ಇರಾನ್ ವಿರುದ್ಧ ನಿರ್ಬಂಧ ಹಾಕುವಂತೆ ಈ 'ಮಾದರಿ' ಗೆಳೆಯನ ಒತ್ತಡಗಳಿಗೆ ತಾನು ಜಗ್ಗುವುದಿಲ್ಲ ಎನ್ನುತ್ತಲೇ ಪರೋಕ್ಷವಾಗಿ ತಲೆಬಾಗುತ್ತಾ ಬಂದಿರುವ ಭಾರತದ ಯುಪಿಎ ಸರಕಾರಕ್ಕೆ ಈ ಹೀನ ಕೃತ್ಯದಿಂದ ಮುಜುಗರವಾಗಿದೆ, ಸಿಟ್ಟು ಬಂದಂತಿಲ್ಲ. ಇದು 'ದುರದೃಷ್ಟಕರ' ಎಂದಷ್ಟೇ ಹೇಳಿ ಕೈತೊಳೆದುಕೊಂಡಿದೆ !.

ಯುಪಿಎ-2 ಸರಕಾರದ ಮುಜುಗರ ಅರ್ಥವಾಗುವಂತದ್ದೇ. ದೇಶದಲ್ಲಿ ಎಡ-ಪ್ರಜಾಪ್ರಭುತ್ವವಾದಿ ಶಕ್ತಿಗಳ ವಿರೋಧವನ್ನೂ ಬದಿಗೊತ್ತಿ, ಕಳೆದ ಕೆಲವು ವರ್ಷಗಳಿಂದ ಅಮೆರಿಕಾದೊಡನೆ ಮಿಲಿಟರಿ ಸಹಕಾರದಲ್ಲಿ ತೊಡಗಿ ತನ್ನ ಕೈಗೆ ತಾನೇ ಬೇಡಿ ಹಾಕಿಕೊಂಡಿರುವ ಸರಕಾರ ಇನ್ನೇನು ತಾನೇ ಮಾಡಲು ಸಾಧ್ಯ? ಅಮಾಯಕ ಭಾರತೀಯನನ್ನು ಕೊಂದಿರುವ ಇದೇ ಅಮೆರಿಕನ್ ನೌಕಾಪಡೆಯೊಂದಿಗೆ ತಾನೇ ಭಾರತದ ನೌಕಾಪಡೆ ಕಳೆದ ಕೆಲವು ವರ್ಷಗಳಿಂದ ಪ್ರತಿವರ್ಷ ಜಂಟಿ ಸಮರಾಭ್ಯಾಸ ನಡೆಸುತ್ತಿರುವುದು?

ಕೆಲವು ತಿಂಗಳ ಹಿಂದೆ ಕೇರಳದ ಕರಾವಳಿಯಲ್ಲಿ ಇಬ್ಬರು ಭಾರತೀಯರನ್ನು ಗುಂಡಿಟ್ಟು ಕೊಂದ ಇಟಾಲಿಯನ್ ನೌಕಾ ಸಿಬ್ಬಂದಿಯನ್ನು ಕೊಲೆ ಆಪಾದನೆಯ ಮೇಲೆ ಬಂಧಿಸಿ ವಿಚಾರಣೆಗೊಳಪಡಿಸಿದಂತೆ, ಈ ಅಮೆರಿಕನ್ ನೌಕಾ ಸಿಬ್ಬಂದಿಯನ್ನೂ ಕೊಲೆ ಆಪಾದನೆಯ ಮೇಲೆ ಬಂಧಿಸಿ ವಿಚಾರಣೆಗೊಳಪಡಿಸಬೇಕು ಎಂದು ಭಾರತ ಸರಕಾರ ಆಗ್ರಹ ಪಡಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಈ ಘಟನೆಯ ಹಿಂದಿನ ದಿನವೇ ಜಗತ್ತಿನ ದೊಡ್ಡಣ್ಣನ ಫರ್ಮಾನಿನ ಸುದ್ದಿಯೂ ಬಂದಿದೆ. ಭಾರತದಲ್ಲಿ ಹೂಡಿಕೆಯ ವಾತಾವರಣ ಹದಗೆಡುತ್ತಿದೆ ಎಂದು ತಮ್ಮ ದೇಶದ ಉದ್ಯಮಿಗಳು ಆತಂಕಿತರಾಗಿರುವುದಾಗಿ ಅಮೆರಿಕನ್ ಅಧ್ಯಕ್ಷರು ಹೇಳಿದ್ದಾರಂತೆ. ಭಾರತದಲ್ಲಿ ಚಿಲ್ಲರೆ ವ್ಯಾಪಾರ ಮುಂತಾದ ಹಲವು ವಲಯಗಳಲ್ಲಿ ವಿದೇಶಿ ಹೂಡಿಕೆಗೆ ಮಿತಿಗಳು ಅಥವ ನಿರ್ಬಂಧಗಳಿವೆ ಎಂದು ಅವರ ದೂರಂತೆ. ಆದ್ದರಿಂದ 'ಆರ್ಥಿಕ ಸುಧಾರಣೆಗಳ ಎರಡನೇ ಅಲೆಯನ್ನು ಎಬ್ಬಿಸಬೇಕಾದ ಕಾಲ ಬಂದಿದೆ' ಎಂಬ ಒಮ್ಮತ ಭಾರತದಲ್ಲಿ ಮೂಡಿ ಬರುತ್ತಿದೆಯಂತೆ, ಎರಡೂ ದೇಶಗಳಲ್ಲಿ ಉದ್ಯೋಗಗಳ ಸೃಷ್ಟಿಗೆ ಇದು ಅಗತ್ಯವಂತೆ.



ಸಹಜವಾಗಿಯೇ ಅಮೆರಿಕನ್ ಅಧ್ಯಕ್ಷರ ಈ ಪುಕ್ಕಟೆ ಸಲಹೆಗೆ ದೇಶಾದ್ಯಂತ ಆಕ್ಷೇಪ ವ್ಯಕ್ತವಾಗಿದೆ, ಎಡಪಕ್ಷಗಳು ಮಾತ್ರವಲ್ಲ, ಇತರರೂ ಇದನ್ನು ವಿರೋಧಿಸಿದ್ದಾರೆ. ಈ ರೀತಿ ಅಮೆರಿಕದಲ್ಲಿ ಉದ್ಯೋಗ ಸೃಷ್ಟಿಸಲು ವಾಲ್‌ಮಾರ್ಟ್‌ಗೆ ಅವಕಾಶ ಕೊಡಿ ಎನ್ನುವ ಅಧ್ಯಕ್ಷರು ಕೆಲವೇ ದಿನಗಳ ಹಿಂದೆ ತಮ್ಮ ದೇಶದ ಬೃಹತ್ ಕಂಪನಿಗಳು ಉದ್ಯೋಗಗಳನ್ನು ಭಾರತದಲ್ಲಿ ಹೊರಗುತ್ತಿಗೆಗೆ ಕೊಡಬಾರದು ಎಂದೂ ತಾಕೀತು ಮಾಡಿದ್ದರು. ಅಮೆರಿಕಾ ಸರಕಾರ ತನ್ನಲ್ಲಿನ ಉದ್ಯೋಗಗಳನ್ನು ರಕ್ಷಿಸಲು ಭಾರತಕ್ಕೆ ಹೊರಗುತ್ತಿಗೆ ಮಾಡದಂತೆ ತನ್ನ ಉದ್ಯಮಿಗಳನ್ನು ತಡೆಯಬಹುದಾದರೆ, ಭಾರತ ಸರಕಾರ ತನ್ನ ಸಣ್ಣ ವ್ಯಾಪಾರಿಗಳನ್ನು ರಕ್ಷಿಸಲು ವಾಲ್‌ಮಾರ್ಟ್‌ಗೆ ಪ್ರವೇಶ ನಿರಾಕರಿಸಬೇಕು ಎಂದು ಆಗ್ರಹಿಸುವುದರಲ್ಲಿ ತಪ್ಪೇನಿದೆ ಎಂದು ನವ-ಉದಾರವಾದಕ್ಕೆ ಬದ್ಧರಾದವರೂ ಕೇಳುತ್ತಿದ್ದಾರೆ.

ಇರಾನಿನ ವಿಷಯದಲ್ಲಿ ಮಾಡಿರುವಂತೆ, ಈ ವಿಷಯದಲ್ಲೂ ಯುಪಿಎ-2 ಸರಕಾರದ ವಾಣಿಜ್ಯ ಮಂತ್ರಿಗಳು ಇದು ನಮ್ಮ ಆಂತರಿಕ ವಿಷಯ ಎಂದು ಹೇಳಬೇಕಾಗಿ ಬಂದಿದೆ. ಆದರೆ ಅದೇ ದಿನ ಯುಪಿಎ-2 ಸರಕಾರದ ಪರವಾಗಿ ಸುಪ್ರಿಂ ಕೋರ್ಟಿನಲ್ಲಿ ವಾದಿಸುತ್ತಿದ್ದ ಭಾರತ ಅಟಾರ್ನಿ ಜನರಲ್ ವಿದೇಶಿ ಹೂಡಿಕೆಯ ಬಗ್ಗೆ ಪ್ರಸ್ತಾಪಿಸುತ್ತಾ 'ಅಧ್ಯಕ್ಷ ಒಬಾಮ ಕೂಡ ದೇಶದಲ್ಲಿ ವಿದೇಶಿ ಹೂಡಿಕೆಯ ವಾತಾವರಣದ ಬಗ್ಗೆ ಮಾತಾಡಿದ್ದಾರೆ' ಎಂದು ಕಳವಳ ವ್ಯಕ್ತಪಡಿಸಿದರಂತೆ. ಅಂದರೆ ಅಮೆರಿಕನ್ ಆಳರಸರಿಗೆ ಕಳವಳವಾಗಿದೆಯಲ್ಲಾ ಎಂದು ಭಾರತದ ಆಳರಸರಿಗೆ ಕಳವಳ ಉಂಟಾಗಿದೆ! ದೇಶದ ಎಲ್ಲ ನೈಸರ್ಗಿಕ ಸಂಪನ್ಮೂಲಗಳ ಹಂಚಿಕೆಯಲ್ಲಿ ಬೊಕ್ಕಸಕ್ಕೆ ಗರಿಷ್ಟ ಆದಾಯ ತರುವಂತೆ ಹರಾಜಿನ ಪ್ರಕ್ರಿಯೆಯನ್ನೇ ಅನುಸರಿಸಬೇಕು ಎಂಬುದು 2ಜಿ ಹಂಚಿಕೆ ಕುರಿತ ಸುಪ್ರಿಂ ಕೋರ್ಟ್ ತೀರ್ಪಿನ ಅರ್ಥವೇ ಎಂದು ಕೇಳುವ 'ರಾಷ್ಟ್ರಪತಿಗಳ ಪರಾಮರ್ಶೆ'(ಅಂದರೆ ಸರಕಾರದ ಆಕ್ಷೇಪಣೆ ಎಂದು ಓದಿಕೊಳ್ಳಿ) ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳಬಹುದೇ ಎಂಬ ವಿಚಾರಣೆಯ ವೇಳೆಗೆ ಭಾರತದ ಈ ಅಟಾರ್ನಿ ಜನರಲ್ ಈ ರೀತಿ ಎಲ್ಲ ನೈಸರ್ಗಿಕ ಸಂಪನ್ಮೂಲಗಳನ್ನು, ಸಾರ್ವಜನಿಕ ಆಸ್ತಿಗಳನ್ನು ಗರಿಷ್ಟ ಆದಾಯ ಬರುವ ರೀತಿಯಲ್ಲಿ ಕೊಡಬೇಕು ಎಂದರೆ ವಿದೇಶಿ ಹೂಡಿಕೆದಾರರು ಇಲ್ಲಿಗೆ ಬರಲಾರರು. ಅಂತರ್ರಾಷ್ಟ್ರೀಯವಾಗಿ ಭಾರತ ನಗೆಪಾಟಲಾಗುತ್ತದೆ ಎಂದು ವಾದಿಸುತ್ತಾ ಅಮೆರಿಕನ್ ಅಧ್ಯಕ್ಷರ ಆ ಮಾತನ್ನು ಪ್ರಸ್ತಾಪಿಸಿದ್ದಾರೆ ಎಂಬುದನ್ನು ಗಮನಿಸಿ.

★

'ರೇಗಾ'ಕ್ಕೆ ಪ್ರತಿಗಾಮಿ ತಿದ್ದುಪಡಿಯ ಪ್ರಯತ್ನ

ಮಹಾತ್ಮ ಗಾಂಧಿಯ ಹೆಸರು ಹೊತ್ತ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಶಾಸನ ತನ್ನ ಸರಕಾರದ ಮಹಾಸಾಧನೆ, ತನ್ನ ಆಮ್-ಆದ್ಮಿ ಪರತೆಯ ಹೆಗ್ಗುರುತು ಎಂದು ಸದಾ ಯುಪಿಎ ಸರಕಾರ ಬೆನ್ನು ತಟ್ಟಿಕೊಳ್ಳುತ್ತಿರುತ್ತದೆ. ಕೆಲವೇ ದಿನಗಳ ಹಿಂದೆ ಸ್ವತಃ ಪ್ರಧಾನ ಮಂತ್ರಿಗಳು "ಅಂಕಿ-ಅಂಶಗಳು ಎಲ್ಲ ಸತ್ಯವನ್ನು ಹೇಳುವುದಿಲ್ಲ. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ

ಪುಟ 15 ಕ್ಕೆ

ಭೋಪಾಲ್ ದುರಂತ: 'ತುರ್ತು' ಅಂದರೆ ಎರಡು ವರ್ಷ!

ಎರಡೂವರೆ ವರ್ಷಗಳ ಹಿಂದೆ ಭೋಪಾಲ್ ಅನಿಲ ದುರಂತದ 25 ವರ್ಷಗಳ ನಂತರ ಈ ದುರಂತಕ್ಕೆ ಕಾರಣರಾದವರ ವಿರುದ್ಧ ಕ್ರಿಮಿನಲ್ ಕೇಸುಗಳು ಇನ್ನೂ ಇತ್ಯರ್ಥವಾಗಿರದಿರುವ ಬಗ್ಗೆ ದೇಶಾದ್ಯಂತ ಆಕ್ರೋಶ ವ್ಯಕ್ತಗೊಂಡಾಗ ಎಚ್ಚೆತ್ತ ಯುಪಿಎ-2 ಸರಕಾರ ಗೃಹಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಮಂತ್ರಿಗಳ ಗುಂಪನ್ನು ರಚಿಸಿತು. ಈ ಗುಂಪು ಜೂನ್ 2010ರಲ್ಲಿ ರಾಸಾಯನಿಕಗಳು ಮತ್ತು ರಸಗೊಬ್ಬರ ಮಂತ್ರಾಲಯ ಹಾಗೂ ಸಿಬಿಐ ಯೂನಿಯನ್ ಕಾರ್ಬೈಡ್‌ನ ಮೂಲ ಮಾಲಕ ಕಂಪನಿ ಮತ್ತು ಅದನ್ನು ವಹಿಸಿಕೊಂಡ ಹೊಸ ಕಂಪೆನಿಯ ವಿರುದ್ಧ ಮೊಕದ್ದಮೆಗಳನ್ನು ತಕ್ಷಣ ಕೈಗೆತ್ತಿಕೊಂಡು ಅವುಗಳ ಶೀಘ್ರ ವಿಚಾರಣೆ ನಡೆಸುವಂತೆ ಮಾಡಬೇಕೆಂದು ನಿರ್ಧರಿಸಿತು.

ಆ ವೇಳೆಗೆ ಮಧ್ಯಪ್ರದೇಶ ಹೈಕೋರ್ಟ್ ಡವ್ ಕೆಮಿಕಲ್ಸ್‌ಗೆ ಈ ಮೊಕದ್ದಮೆಯಲ್ಲಿ ಸಮನ್ಸ್ ಕಳಿಸುವುದರ ಮೇಲೆ 2005 ರಲ್ಲಿ ತಡೆಯಾಜ್ಞೆ ಕೊಟ್ಟ ಮೇಲೆ ಆ ಬಗ್ಗೆ ವಿಚಾರಣೆಯನ್ನೂ ಮಾಡಿರಲಿಲ್ಲ, ತಡೆಯಾಜ್ಞೆಯನ್ನು ತೆರವುಗೊಳಿಸಿಯೂ ಇರಲಿಲ್ಲ. ಮಂತ್ರಿಗಳ ಗುಂಪು ಶೀಘ್ರವಾಗಿ ವಿಚಾರಣೆಗಳನ್ನು ಕೈಗೆತ್ತಿಕೊಳ್ಳುವಂತೆ ಮಾಡಬೇಕು ಎಂದು ಹೇಳಿದ ಮೂರು ತಿಂಗಳ ನಂತರ ಆಗಿನ ಸಾಲಿಸಿಟರ್ ಜನರಲ್ ಸಿಬಿಐ ಈ ಬಗ್ಗೆ ಪ್ರತ್ಯೇಕ ಅರ್ಜಿಯನ್ನು ಹಾಕಬೇಕಿಲ್ಲ, ಇರುವ ಅರ್ಜಿಯ ವಿಚಾರಣೆಯನ್ನು ತುರ್ತಾಗಿ ನಡೆಸಬೇಕು ಎಂದು ಕೇಳಿದರೆ ಸಾಕು ಎಂದು ಹೇಳಿದರು.

ಹೀಗೆ ತುರ್ತು ವಿಚಾರಣೆ ಕೇಳಬೇಕೆಂದು ಹೇಳಿದ್ದು ಸಪ್ಟಂಬರ್ 2010ರಲ್ಲಿ, ಆದರೆ ಸಿಬಿಐ ಇಂತಹ 'ತುರ್ತು ವಿಚಾರಣೆ'ಗೆ ಅರ್ಜಿ ಹಾಕಿದ್ದು ಇನ್ನೂ 15 ತಿಂಗಳು ಕಳೆದ ಮೇಲೆ, ಜನವರಿ 2012ರಲ್ಲಿ! ಆ ವೇಳೆಗೆ ಯೂನಿಯನ್ ಕಾರ್ಬೈಡ್ ತಲೆತಪ್ಪಿಸಿಕೊಂಡಿದೆ ಎಂದು ಘೋಷಿಸಿ ಪೂರ್ಣ ಎರಡು ದಶಕಗಳಾಗಿದ್ದವು! ಆದರೆ ಆ ನಂತರವೂ 'ತುರ್ತು' ಎಂಬುದೇನೂ ಇದ್ದಂತಿಲ್ಲ. ಏಕೆಂದರೆ ಈ ನಡುವೆ ಡವ್ ಕೆಮಿಕಲ್ಸ್‌ಗೆ ಸಂಬಂಧ ಪಟ್ಟವರು ನಾಲ್ಕು ಬಾರಿ ವಿಚಾರಣೆಗಳನ್ನು ಮುಂದೂಡುವಂತೆ ಕೇಳಿದ್ದು, ಒಮ್ಮೆಯೂ ಸಿಬಿಐ ಈ ರೀತಿಯ ಮುಂದೂಡಿಕೆಯನ್ನು ವಿರೋಧಿಸಲಿಲ್ಲ ಎಂದು ತಿಳಿದು ಬಂದಿದೆ. ●

ವಿದ್ಯಾರ್ಥಿಗಳು ತಿರಸ್ಕರಿಸಿದ 'ಹಿಂಸಾಚಾರ'ದ ಆರೋಪ– ಕಳಚಿ ಬಿದ್ದ 'ವೈಭೋಗ'ದ ಆರೋಪ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಕೇರಳ ರಾಜ್ಯದ ಕ್ಯಾಲಿಕಟ್ ವಿಶ್ವವಿದ್ಯಾಲಯದ ಚುನಾವಣೆಯಲ್ಲಿ ಈ ಹಿಂದಿನ ಎಲ್ಲ ದಾಖಲೆಗಳನ್ನು ಮೀರಿ ಅದ್ಬುತ ಸಾಧನೆಯ ಗೆಲವು ಸಾಧಿಸಿದೆ. ಜುಲೈ7, 2012 ರಂದು ವಿದ್ಯಾರ್ಥಿ ಸಂಘಕ್ಕೆ ನಡೆದ ಚುನಾವಣೆಯಲ್ಲಿ ವಿಶ್ವವಿದ್ಯಾಲಯದ ಇರುವ ಐದೂ ಸ್ಥಾನಗಳಲ್ಲಿ ಎಸ್ಸೆಫೈ ಅಭ್ಯರ್ಥಿಗಳು ಅಮೋಘ ವಿಜಯ ಸಾಧಿಸಿದ್ದಾರೆ.

ಕೇರಳದ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಇದೊಂದು ಅತ್ಯಂತ ಮಹತ್ವದ ವಿಜಯವಾಗಿದೆ.

'ದೆವ್ವ'ದ ಆಡಳಿತ

'ದೇವರ ಸ್ವಂತ ನಾಡು' ಎಂದು ಹೇಳಲಾಗುವ ಕೇರಳ ರಾಜ್ಯದಲ್ಲಿ ಈಗ ಎಡ ಮತ್ತು ಪ್ರಗತಿಪರ ಶಕ್ತಿಗಳನ್ನು ದಮನ ಮಾಡುವ ಆಳವಾದ ಸಂಚಿನ ಭಾಗವಾಗಿ ಎಸ್ಸೆಫೈ, ಡಿವೈಎಫ್ಐ, ಸಿಪಿಐ(ಎಂ) ಮುಂತಾದ ಎಡ ಸಂಘಟನೆಗಳ ಮೇಲೆ ರಾಜ್ಯವ್ಯಾಪಿಯಾಗಿ ವಿಷ ಪ್ರಚಾರವನ್ನು ನಡೆಸಲಾಗುತ್ತಿದೆ. ಕೇರಳ ರಾಜ್ಯದ ಪ್ರಜಾಸತ್ತಾತ್ಮಕ ಚಳುವಳಿಯನ್ನೇ ತುಳಿದು ಹಾಕಬೇಕೆಂಬ ಪ್ರಗತಿ ವಿರೋಧಿ ಶಕ್ತಿಗಳ ಈ ಕಾರ್ಯಾಚರಣೆಗೆ ಕಾಂಗ್ರೆಸ್ ನೇತೃತ್ವದ ಎಲ್‌ಡಿಎಫ್ ಸರ್ಕಾರವೇ ನೇತೃತ್ವ ವಹಿಸಿಕೊಂಡು ಬಿಟ್ಟಿದೆ.

ಟಿ.ಪಿ. ಚಂದ್ರಶೇಖರನ್ ಎಂಬ ಎಂಸಿಪಿ ಎಂಬ ಪಕ್ಷದ ಮುಖಂಡರೊಬ್ಬರ ವಿಷಾದನೀಯ ಕೊಲೆ ಪ್ರಕರಣದ ಸಂದರ್ಭವನ್ನು ಬಳಸಿಕೊಂಡು ಪ್ರಸ್ತುತ ವಿಶ್ವ ವಿದ್ಯಾಲಯದ ಚುನಾವಣೆಯಲ್ಲಿ ಎಸ್ಸೆಫೈ ಹೆಸರಿಗೆ ಮಸಿ ಬಳಿಯಲು ವ್ಯವಸ್ಥಿತವಾಗಿ ಯತ್ನಿಸಲಾಯಿತು.

ಆದರೆ ಕೇರಳದ ಪ್ರಜ್ಞಾವಂತ ವಿದ್ಯಾರ್ಥಿ ಸಮೂಹದ ಮುಂದೆ ಇಂಥ ಸಂಚುಕೋರ ಆಟಗಳು ನಡೆಯಲಿಲ್ಲ.

ಕೇರಳ ವಿದ್ಯಾರ್ಥಿ ಸಂಘ(ಇಣ) ಮುಸ್ಲಿಂ ಸ್ಟೂಡೆಂಟ್ಸ್ ಫೆಡರೇಷನ್‌ಗಳ ಎಲ್ಲ ಆರೋಪಗಳನ್ನು ಸರಾಸಗಟಾಗಿ ತಿರಸ್ಕರಿಸುವಂತೆ ವಿದ್ಯಾರ್ಥಿಗಳು ಎಸ್ಸೆಫೈನ ಇಡೀ ತಂಡಕ್ಕೆ ಹಿಂದೆಂದೂ ಇಲ್ಲದ ಪ್ರಚಂಡ ಜಯವನ್ನು ತಂದುಕೊಟ್ಟಿದ್ದಾರೆ. ಈ ಜಯ ಸಂಚುಕೋರರ ದಾಳಿಗಳನ್ನು ಎದುರಿಸುವ ನಿಟ್ಟಿನಲ್ಲಿ ಕೇರಳದ ಪ್ರಜಾಸ್ತಾತ್ಮಕ ಚಳುವಳಿಗೆ ಹೊಸ ಚೈತನ್ಯವನ್ನು ನೀಡಿದೆ.

ಘೋರ ದಮನ ಕಾಂಡ

ಸಿಪಿಐ(ಎಂ) ಪಕ್ಷದ ಮೇಲೆ, ರಾಜ್ಯದ ಎಡ ಚಳುವಳಿಯ ಮೇಲೆ ಇಲ್ಲ ಸಲ್ಲದ ಆರೋಪ ಹೊರಿಸಿ ಜನ ಚಳುವಳಿಯ ಮುಖಂಡರನ್ನು ಬಂಧಿಸಿ ಯುಡಿಎಫ್ ಸರ್ಕಾರ ಬೇಟೆಗೆ, ಅಕ್ಷರಶಃ ಬೇಟೆಗೆ ನಿಂತು ಬಿಟ್ಟಿದೆ. ಅದು ಇತ್ತೀಚೆಗೆ ಕೋಜಿಕ್ಕೋಡ್ ಜಿಲ್ಲೆಯ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಪಿ. ಮೋಹನ್‌ರನ್ನು ಬಂಧಿಸಿದೆ. ಚಿತ್ರಹಿಂಸೆ, ಹಸಿ ಸುಳ್ಳುಗಳು, ಸುಳ್ಳು ಸುಳ್ಳೇ 'ತಪ್ಪೊಪ್ಪಿಗೆ ಹೇಳಿಕೆ' ಎಂದು ತಮಗೆ ಬೇಕಾದದ್ದನ್ನು ಮಾಧ್ಯಮಗಳಿಗೆ 'ಲೀಕ್' ಮಾಡುವುದು...ಹೀಗೆ ನಡೆಯಬಾರದ್ದೆಲ್ಲವೂ ನಡೆಯುತ್ತಿದೆ.

ಕೇರಳ

ಕೇರಳ ರಾಜ್ಯದ ಎಡ ಚಳುವಳಿಯನ್ನು ದಮನ ಮಾಡುವ ಆಳವಾದ ಸಂಚು ನಡೆಸಿರುವ ಪ್ರಗತಿ ವಿರೋಧಿ ಶಕ್ತಿಗಳ ಪಿತೂರಿಗಳು ಒಂದೊಂದು ಬಯಲಾಗುತ್ತಿವೆ. ಎಡ ಚಳುವಳಿಯ ಮೇಲೆ ಒಂದೆಡೆ ದಾಳಿ ದಮನ ನಡೆಯುತ್ತಿದ್ದರೆ ಮತ್ತೊಂದೆಡೆ ಜನ ಸಮೂಹಗಳು ಎಡ ಶಕ್ತಿಗಳಿಗೆ ಬೆಂಬಲ ತೋರುತ್ತಿರುವುದು ಗಮನಾರ್ಹವಾಗಿದೆ.

ಸ್ಫೋಟಕ ಕೊಲೆ ಸಂಚು ಬಯಲು

ಕಾಂಗ್ರೆಸ್ ಪಕ್ಷದ ನಾಯಕತ್ವದಲ್ಲಿ ಪ್ರಗತಿ ವಿರೋಧಿ ಶಕ್ತಿಗಳೆಲ್ಲ ಎಡ ಚಳುವಳಿ ಮೇಲೆ ಎರಗಿ ಬಿದ್ದಿರುವ ಈ ಸನ್ನಿವೇಶದಲ್ಲಿ ಜನ ಚಳುವಳಿಯ ಸಂಸ್ಕೃತಿ ಯಾರದ್ದು ? ಕೊಲೆಗಡುಕ ಸಂಸ್ಕೃತಿ ಯಾರದ್ದು ? ಎಂದು ಜನರೇ ಅರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವ ಒಂದು ಸ್ಫೋಟಕ ಸಂಚೊಂದು ಬಟಾ ಬಯಲಾಗಿದೆ.

ಕತ್ತು ಸವರಿಕೊಂಡು ಹಾರಿ ಹೋಗಿತ್ತು ಗುಂಡು

ಅದು, ಏಪ್ರಿಲ್ 12, 1995 ಆಂಧ್ರ ಪ್ರದೇಶದ ಚಿರಾಲ ಎಂಬ ಜಾಗ. ಸಿಪಿಐ(ಎಂ)ನ ಕೇಂದ್ರ ಸಮಿತಿ ಸದಸ್ಯರಾದ ಇ.ಪಿ. ಜಯರಾಜನ್ ಪಕ್ಷದ 15 ನೇ ಮಹಾಧಿವೇಶನವನ್ನು ಮುಗಿಸಿಕೊಂಡು ದೆಹಲಿಯಿಂದ ಅಲ್ಲಿ ಬಂದು ಇಳಿದಿದ್ದರು. ಬಂದೂಕಿನ ನಳಿಕೆಯೊಳಗಿನಿಂದ ತೂರಿ ಸಿಡಿದು ಬಂದ ಗುಂಡೊಂದು ಜಯರಾಜನ್ ಅವರ ಕುತ್ತಿಗೆಯನ್ನು ಸವರಿಕೊಂಡು ಹೋಯಿತು. ಅದೃಷ್ಟವಶಾತ್ ಜಯರಾಜನ್ ಉಳಿದು ಕೊಂಡರು.

ರಹಸ್ಯ ಇದೀಗ ಬಯಲು

ಈ ಕೊಲೆ ಯತ್ನದ ರಹಸ್ಯವೊಂದು ಇದೀಗ ಬಯಲಾಗಿದೆ. ಈಗಿನ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ಹಾಲಿ ಸಂಸದ, ಇಡಕ್ಕಾಡ್ ಕ್ಷೇತ್ರದ ಅಂದಿನ ಶಾಸಕ ಕೆ. ಸುಧಾಕರನ್‌ರಿಂದ ಸುಪಾರಿ ಪಡೆದುಕೊಂಡಿದ್ದ . ದಿನೇಶ್, ಶಶಿ, ಇಬ್ಬರೂ ಸೇರಿ ಜಯರಾಜನ್ ಮೇಲೆ ಗುಂಡು ಹಾರಿಸಿದ್ದರು.

ಮೂವರು ಮುಖಂಡರಲ್ಲಿ ಯಾರಾದರೂ ಒಬ್ಬರು



ಜಯರಾಜನ್ ಹತ್ಯೆ ಯತ್ನ ವಿಫಲವಾಗಿತ್ತು. ಆದರೆ ಕೊಲ್ಲಬಹುದಾದವರ ಪಟ್ಟಿಯಲ್ಲಿ ಅವರು ಮಾತ್ರವೇ ಇರಲಿಲ್ಲ. ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಪಿಣರಾಯಿ ವಿಜಯನ್, ಕೋಡಿಯೇರಿ ಬಾಲಕೃಷ್ಣನ್, ಇ.ಪಿ. ಜಯರಾಜನ್ ಈ ಮೂವರಲ್ಲಿ ಯಾರಾನ್ನಾದರೂ ಒಬ್ಬರನ್ನು ಕೊಲ್ಲಲು ಸುಪಾರಿ ನೀಡಲಾಗಿತ್ತು. ಇದೇ ಸುಧಾಕರನ್ ಈ ಉದ್ದೇಶಕ್ಕಾಗಿ ತ್ರಿಶ್ಯೂರ್ ಜಿಲ್ಲೆಯ ಕ್ರಿಮಿನಲ್ ಗ್ಯಾಂಗೊಂದಕ್ಕೆ ಮೊದಲು ಸುಫಾರಿ ನೀಡಿ ಅದು ವಿಫಲವಾಗಿತ್ತಂತೆ. ಜಯರಾಜನ್ ಅವರ ಕುತ್ತಿಗೆ ಸವರಿಕೊಂಡು ಗುಂಡು ಹಾರಿ ಹೋದ ಪ್ರಕರಣ ನಂತರದ ಪ್ರಯತ್ನ.

ಯಾರು ಇದನ್ನೆಲ್ಲ ಹೇಳಿದ್ದು ?

ಇದನ್ನೆಲ್ಲ ಸಿಪಿಐ(ಎಂ) ಮುಖಂಡರೋ ಕಾರ್ಯಕರ್ತರೋ ಹೇಳಿದರೆ ರಾಜಕೀಯ ಉದ್ದೇಶದ ಹೇಳಿಕೆ ಅಂತ ವಿರೋಧಿಗಳು ತಳ್ಳಿ ಹಾಕುತ್ತಾರೆ. ಆದರೆ ಈ ಎಲ್ಲ ಪ್ರಕರಣಗಳ ವಿವರಗಳನ್ನು ಈಗ ಬಯಲು ಮಾಡಿರುವುದು ಬೇರೆ ಯಾರೋ ಅಲ್ಲ. ಸ್ವತಃ ಕೆ. ಸುಧಾಕರ್ ಜೊತೆಗಾರನಾಗಿದ್ದ ಪ್ರಶಾಂತ್ ಬಾಬು. ಪ್ರಶಾಂತ್ ಬಾಬು ಕಾಂಗ್ರೆಸ್ ಪಕ್ಷದ ಸಾಮಾನ್ಯ ಕಾರ್ಯಕರ್ತರೇನು ಆಗಿರಲಿಲ್ಲ. ಕಾಂಗ್ರೆಸ್ ಪಕ್ಷದ ಬ್ಲಾಕ್ ಸೆಕ್ರೆಟರಿಯಾಗಿದ್ದ ಮನುಷ್ಯ. ಕಣ್ಣೂರು ಮುನಿಸಿಪಾಲಿಟಿಯ ಕೌನ್ಸಿಲರ್ ಆಗಿದ್ದ ಮುಖಂಡ. ಅಷ್ಟೆ ಅಲ್ಲ, ಆಗ ನಾಲ್ಕು ವರ್ಷಗಳ ಕಾಲ ಕೆ. ಸುಧಾಕರ್‌ಗೆ ನಿರಂತರವಾಗಿ ಜೊತೆಗಾರನಾಗಿದ್ದ ವ್ಯಕ್ತಿ. ಕೊಲೆ ಪಿತೂರಿ ಸಿದ್ಧವಾಗಿದ್ದರ ವಿವರಗಳ ಕುರಿತು, ಕಾಸರಗೋಡಿನಿಂದ ಆಯುಧ ತರಿಸಿದ್ದು ಮುಂತಾದ ಹಲವು ವಿಚಾರಗಳ ಕುರಿತು ಸ್ವತಃ ಪ್ರಶಾಂತ್ ಬಾಬು ವಿವರ ನೀಡಿದ್ದಾರೆ.

ಅಂಗೋಲೆ ಕೋರ್ಟ್‌ನಲ್ಲಿ ಮರು ವಿಚಾರಣೆಗೆ ಮನವಿ

1995 ರಲ್ಲಿ ತಮ್ಮ ಮೇಲೆ ನಡೆದ ಕೊಲೆ ಯತ್ನದ ಮೊಕದ್ದಮೆ ಸಂಬಂಧ ಇದೀಗ ಖಚಿತ ಮಾಹಿತಿಗಳು, ಸಾಕ್ಷಿಗಳು, ವಿವರಗಳು ಬಯಲಾಗಿರುವುದರಿಂದ ಈ ಪ್ರಕರಣದ ಮರು ವಿಚಾರಣೆ ನಡೆಸಬೇಕೆಂದು ಇ.ಪಿ. ಜಯರಾಜನ್ ಅವರು ಆಂಧ್ರ ಪ್ರದೇಶದ ಅಂಗೋಲೆ ಕೋರ್ಟ್‌ನಲ್ಲಿ ಮನವಿ ಮಾಡಿದ್ದಾರೆ.

ಹದಗೆಟ್ಟ ಕಾನೂನು ಸುವ್ಯವಸ್ಥೆ

ಕೇರಳ ಸರಕಾರ ಎಡಶಕ್ತಿಗಳ ನಿರ್ದಯ ಬೇಟೆಗೆ ಇಳಿದಿರುವಾಗ ರಾಜ್ಯದಲ್ಲಿ ಕ್ರಿಮಿನಲ್‌ಗಳು ಅಮಾಯಕರ ಬೇಟೆಗೆ ಇಳಿದಿದ್ದಾರೆ. ವ್ಯಾಪಾರಿ ಮಳಿಗೆಯಲ್ಲಿ ದುಡಿಯುತ್ತಿದ್ದ ಯುವತಿಯೊಬ್ಬಳಿಗೆ ನಡು ಹಾದಿಯಲ್ಲಿ ಕೀಟಲೆ, ಆಮೇಲೆ ವಾಹನ ಗುದ್ದಿಸಿ ಕಗ್ಗೊಲೆ, ತಿರುವನಂತಪುರದಲ್ಲಿ ಕಾಂಗ್ರೆಸ್ ನಾಯಕರೊಬ್ಬರಿಂದ ಬಡವನೊಬ್ಬನ ಮನೆ ಉರುಳಿಸಿ, ಅಲ್ಲಿ ಕಟ್ಟಬೇಕೆಂದಿರುವ ಅಪಾರ್ಟ್‌ಮೆಂಟ್ಸ್‌ಗೆ ಜಾಗ ಕಬಳಿಸುವ ಯತ್ನ, ಮಹಿಳೆಯ ಕೊಲೆ ಇಂತಹವು ದಿನ ದಿನದ ಸುದ್ದಿಗಳಾಗಿವೆ. ಇದು ಸಾಲದೆಂದು ಪೋಲಿಸ್ ಅಧಿಕಾರಿಯೊಬ್ಬರ ಮೇಲೆ ಹಲ್ಲೆ, ಕಾನ್ಸ್‌ಟೇಬಲ್ ಒಬ್ಬರ ಕೊಲೆ ಮುಂತಾದವು ನಡೆದು ಹೋಗಿವೆ.

ಎಡ ಚಳುವಳಿ ಈ ಸನ್ನಿವೇಶದಲ್ಲಿ ಪ್ರಗತಿ ವಿರೋಧಿ ಶಕ್ತಿಗಳ ಪಿತೂರಿಗಳನ್ನು ವಿಫಲಗೊಳಿಸಬೇಕೆಂದು ಜನರಲ್ಲಿ ಮನವಿ ಮಾಡಿ ಜನರತ್ತ ನಡೆದಿದೆ. ಅಧಿಕಾರವನ್ನೇ ನಂಬಿಕೊಂಡು ಕುಳಿತವರು ಜಗತ್ತಿನ ಚರಿತ್ರೆಯಿಂದ, ಕೇರಳದ ಚರಿತ್ರೆಯಿಂದ ಯಾವ ಪಾಠವನ್ನೂ ಕಲಿಯದೇ ಲಾಠಿ ತಿರುಗಿಸುತ್ತಲೇ ಇದ್ದಾರೆ.

ಗ್ನಾನಪೀಠ ಪ್ರಶಸ್ತಿ ಪುರಸ್ಕೃತ ಮಹಾಶ್ವೇತಾದೇವಿ ಕ್ಷಮಾ ಯಾಚನೆ

ಗ್ನಾನಪೀಠ ಪ್ರಶಸ್ತಿ ಪುರಸ್ಕೃತ ಪಶ್ಚಿಮ ಬಂಗಾಳದ ಲೇಖಕಿ ಶ್ರೀಮತಿ

➔

ಕೇರಳ: ವಿದ್ಯಾರ್ಥಿಗಳು ತಿರಸ್ಕರಿಸಿದ....

ಮಹಾಶ್ವೇತಾದೇವಿಯವರು ಕೇರಳದ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಪಿಣರಾಯಿ ವಿಜಯನ್ ಅವರ ಬಗೆಗೆ ಇಲ್ಲಸಲ್ಲದ್ದು ಹೇಳಿ ಆಮೇಲೆ ಕ್ಷಮೆ ಯಾಚಿಸಿದ ಪ್ರಸಂಗವೊಂದು ನಡೆದಿದೆ. ಈ ಘಟನೆಯು ದೇಶದಲ್ಲಿ, ಅದರಲ್ಲೂ ಕೇರಳ ರಾಜ್ಯದಲ್ಲಿ ಸಿಪಿಐ(ಎಂ) ಮತ್ತು ಎಡಶಕ್ತಿಗಳ ವಿರುದ್ಧ ಯಾವ ರೀತಿಯ ಸುಳ್ಳು ಪ್ರಚಾರಗಳು ನಡೆಯುತ್ತಿವೆ ಎಂಬುದಕ್ಕೆ ಒಂದು ಉತ್ತಮ ಉದಾಹರಣೆಯೂ ಆಗಿದೆ.

"ಬಂಗಲೆಯಿಂದ ಹೊರ ಬರಲಿ"

"ಪಿಣರಾಯಿ ವಿಜಯನ್ ಅವರು ತಮ್ಮ ಬೃಹತ್ ಬಂಗಲೆಯಿಂದ ಹೊರಬರಬೇಕು ಮತ್ತು ಜನಸಾಮಾನ್ಯರ, ಕಾರ್ಯಕರ್ತರ ಮಾತುಗಳನ್ನು ಆಲಿಸಿ ಕೇರಳದ ಮತ್ತು ಅಲ್ಲಿನ ಪಕ್ಷದ ಸಮಸ್ಯೆಗಳ ನೈಜ ಸ್ಪರ್ಶ ಪಡೆಯಬೇಕು" ಕೇರಳ ರಾಜ್ಯದ ಸಿಪಿಐ(ಎಂ) ಕಾರ್ಯದರ್ಶಿಯವರ ಬಗೆಗೆ ಮಹಾಶ್ವೇತಾದೇವಿ ಹೇಳಿ ಬಿಟ್ಟರು. ಆ ಮೇಲೆ ತಾವು ಹೇಳಿದ್ದು ತಪ್ಪೆಂದು ಒಪ್ಪಿಕೊಂಡು ಕ್ಷಮೆ ಯಾಚಿಸಿದ್ದಾರೆ.

ಕೊಲೆಗೀಡಾದ ಆರ್.ಎಂ.ಪಿ. ಪಕ್ಷದ ನಾಯಕ ಟಿ.ಪಿ. ಚಂದ್ರಶೇಖರನ್ ಅವರ ಕೋಯಿಕೋಡ್‌ನ ಮನೆಗೆ ಭೇಟಿ ನೀಡಿದ ನಂತರ ಅವರು ಈ ಹೇಳಿಕೆ ನೀಡಿ

"ನಾನು ವಿಜಯನ್ ತಮ್ಮ ಬಂಗಲೆಯಿಂದ ಹೊರಬಂದು ಜನರ ಜೊತೆ ಬೆರೆಯಬೇಕೆಂದು ಹೇಳಿದ್ದೆ. ನಂತರ ನನ್ನ ಮಾಹಿತಿ ತಪ್ಪೆಂದು ನನಗೆ ತಿಳಿಯಿತು. ವಿಜಯನ್ ಸಾಮಾನ್ಯ ಮನೆಯಲ್ಲಿ ವಾಸಿಸುತ್ತಾರೆಂದು ಗೊತ್ತಾಯಿತು. ನನ್ನ ಹೇಳಿಕೆಯಿಂದ ಅವರು ನೊಂದಿದ್ದಾರೆಂದು ಅರಿವಾಯಿತು. ಆದ್ದರಿಂದ ಅವರ ಕ್ಷಮೆ ಯಾಚಿಸಿ ನಾನು ಅವರಿಗೆ ಪತ್ರ ಬರೆದಿರುವೆ." ಎಂದು ಅವರು ಇಂಡಿಯನ್ ಎಕ್ಸ್‌ಪ್ರೆಸ್‌ಗೆ ಅವರು ತಿಳಿಸಿದರು.

ಬಹಿರಂಗ ಆಹ್ವಾನ

ತಾವು ಬಂಗಲೆಯಲ್ಲಿ ವಾಸಿಸುವುದಾಗಿ ಮಹಾಶ್ವೇತಾದೇವಿಯವರು ಆರೋಪಿಸಿದಾಗ ಕಾಮ್ರೇಡ್ ವಿಜಯನ್ ಮಾಡಿದ್ದಾದರೂ ಏನು ?

" ನನ್ನ ಮನೆ ಬಂಗಲೆಯಲ್ಲ. ಮತ್ತು ಅದರ ಬಾಗಿಲುಗಳು ಎಲ್ಲರಿಗೂ ತೆರೆದಿವೆ. ಪಕ್ಷದ ಅನುಮತಿ ಪಡೆದು ಮನೆಯನ್ನು ನವೀಕರಿಸಿದ್ದೇನೆ. ಅದು ನನ್ನ ಹಳ್ಳಿಯಲ್ಲಿದೆ ಹೊರತು ಯಾವುದೇ ದ್ವೀಪದಲ್ಲಿಲ್ಲ. ನೀವೇ ಬಂದು ನನ್ನ ಮನೆಯನ್ನು ನೋಡಿ. " ಎಂದು ಮಹಾಶ್ವೇತ ದೇವಿಯವರಿಗೆ ಬಹಿರಂಗ ಆಹ್ವಾನ ನೀಡಿದ್ದರು.

ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 65 ಕ್ಕೂ ಹೆಚ್ಚು ಜನ ಸಿಪಿಐ(ಎಂ) ಕಾರ್ಯಕರ್ತರು ಕಗ್ಗೊಲೆಗೀಡಾಗಿರುವಾಗ ಆ ಬಗೆಗೆ ಮಾತನಾಡದ ಮಹಾಶ್ವೇತಾ ದೇವಿ, ಪಶ್ಚಿಮ ಬಂಗಾಳದ ಗ್ರಂಥಾಲಯಗಳಿಗೆ ತೃಣಮೂಲದ ಭಜನೆ ಮಾಡುವ ಪತ್ರಿಕೆಗಳನ್ನು ಮಾತ್ರ ತರಿಸಿ ಎಂದು ಸರ್ಕಾರ ಆದೇಶ ನೀಡಿರುವ ಬಗೆಗೆ ಮಾತನಾಡದ ಮಹಾಶ್ವೇತದೇವಿ ಪಿಣರಾಯಿ ವಿಜಯನ್ ಅವರ ಮನೆ ಬಗೆಗೆ ಇಲ್ಲದ್ದು ಹೇಳುವಂತಹದ್ದು ಏನಿತ್ತು ಎಂದು ಪ್ರಜಾಪ್ರಭುತ್ವ ಪ್ರೇಮಿಗಳೆಲ್ಲರೂ ಯೋಚಿಸಬೇಕಿದೆ.

ಯುಪಿಎ ದರ್ಬಾರ್..........

ಪುಟ 13 ರಿಂದ

ಅಂಕಿಗಳದ್ದು ಹೇಳಲು ಯೋಗ್ಯವಾದ ಒಂದು ಕತೆ.. ಎಲ್ಲರನ್ನೂ ಒಳಗೊಳ್ಳುವ ವಿಷಯದಲ್ಲಿ ಇದು ಗಳಿಸುವ ಅಂಕಿ ಬಹಳ ಉನ್ನತ...ಇತ್ತೀಚೆಗೆ ನೆನಪಿನಲ್ಲಿರುವ ಬೇರಾವ ಯೋಜನೆಯೂ ಇಷ್ಟರ ಮಟ್ಟಿಗೆ ಜನಗಳ ಮನಸ್ಸನ್ನು ಆಕರ್ಷಿಸಿಲ್ಲ" ಎಂದು ಉದ್ಗರಿಸಿರುವುದಾಗಿ ವರದಿಯಾಗಿದೆ. ಈ ಯೋಜನೆಯ ಅಡಿಯಲ್ಲಿ ಕೂಲಿ ಪಾವತಿಯಲ್ಲಿ ವಿಳಂಬದ ಸಮಸ್ಯೆಯನ್ನು ಆದಷ್ಟು ಬೇಗನೇ ಬಗೆಹರಿಸಬೇಕು ಎನ್ನುತ್ತಾ ಯೋಜನಾ ಆಯೋಗ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಈ ಯೋಜನೆಯ ಲೆಕ್ಕಪರಿಶೋಧನೆ ನಡೆಸದಿರುವ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದರಂತೆ.

ಆದರೆ ಈಗ ಬೇರೆಯೇ ಸುದ್ದಿ ಬಂದಿದೆ. ಇದೇ ಪ್ರಧಾನ ಮಂತ್ರಿಗಳ ಅದೇ ಯುಪಿಎ–2 ಸರಕಾರ ಈ ಯೋಜನೆಯ ಅಡಿಯಲ್ಲಿ ಕನಿಷ್ಟ ಕೂಲಿಯ 'ಹೊರೆ'ಯಿಂದ ತಪ್ಪಿಸಿಕೊಳ್ಳುವ ಹುನ್ನಾರ ನಡೆಸಿದೆ. ಕನಿಷ್ಟ ಕೂಲಿಗೆ ಆರಂಭದಲ್ಲಿ ಒಂದೇ ಬಾರಿ ಬದ್ಧವಾಗುವ, ಅದಕ್ಕೆ ಮಾತ್ರ ಹಣ ಒದಗಿಸಲು ತಾನು ಬದ್ಧ ಎನ್ನುವ ತಿದ್ದುಪಡಿಯನ್ನು ತರುವ ಪ್ರಯತ್ನದಲ್ಲಿದೆ ಎಂದು ವರದಿಯಾಗಿದೆ. ಅಂದರೆ ಯುಪಿಎ–2 ಸರಕಾರ ಕನಿಷ್ಟ ಕೂಲಿ ಪಾವತಿಗೆ ಪೂರ್ಣ ಹಣ ಒದಗಿಸುವ ಹೊಣೆ ತಪ್ಪಿಸಿಕೊಂಡು, ತನ್ನ 'ಮಹಾಸಾಧನೆ'ಯ ವೆಚ್ಚವನ್ನು ರಾಜ್ಯ ಸರಕಾರಗಳು ಹೊರುವಂತೆ ಮಾಡಲು ಮುಂದಾಗಿದೆ.

ರೇಗಾದಲ್ಲಿ ನಿಯಮಿತವಾಗಿ ಬೆಲೆ ಸೂಚ್ಯಂಕಕ್ಕೆ ಲಗತ್ತಿಸಿದ ಕನಿಷ್ಟ ಕೂಲಿಯನ್ನು ಸಮಯಕ್ಕೆ ಸರಿಯಾಗಿ ಕೊಡುತ್ತಿಲ್ಲವಾದ್ದರಿಂದ, ಅದನ್ನು ಸರಿಯಾಗಿ ಕೊಡಬೇಕು ಎಂದು ಸಿಪಿಐ(ಎಂ) ಆರಂಭದಿಂದಲೂ ಆಗ್ರಹಿಸಿಕೊಂಡು ಬಂದಿದೆ. ಅಖಿಲ ಭಾರತ ಕಿಸಾನ್ ಸಭಾ ನ್ಯಾಯಾಲಯದ ಮೆಟ್ಟಿಲೇರಿ ಕರ್ನಾಟಕ ಹೈಕೋರ್ಟಿನಿಂದ ರೇಗಾದ ಅಡಿಯಲ್ಲಿ ಕನಿಷ್ಟ ಕೂಲಿಯನ್ನು ಕೊಡಬೇಕು, ಬಾಕಿ ಕೂಲಿಗಳನ್ನೂ ಕೊಡಬೇಕು ಎಂಬ ತೀರ್ಪನ್ನು ಪಡೆಯಿತು. ಆದರೆ ಇದು ಜನಗಳನ್ನು ಬಹಳವಾಗಿ ಆಕರ್ಷಿಸಿರುವ ಯೋಜನೆಯೆಂದು ಬೀಗುವ ಸರಕಾರ ಈ ಯೋಜನೆಯಲ್ಲಿ ಕನಿಷ್ಟ ಕೂಲಿ ಕೊಡಬೇಕೆಂಬ ಈ ನ್ಯಾಯಾಲಯದ ತೀರ್ಪನ್ನು ಅತ್ಯುಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲೂ ಹೇಸಲಿಲ್ಲ. ಈಗ ಇಂತಹ ಹೊಣೆ ತಪ್ಪಿಸಿಕೊಳ್ಳುವ ತಿದ್ದುಪಡಿಗೆ ಮುಂದಾಗಿದೆ. ಇದನ್ನು ಸಂಪೂರ್ಣವಾಗಿ ಕೈಬಿಡಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಮತ್ತೆ ಮಾಹಿತಿ ಹಕ್ಕನ್ನು ಮೊಟಕುಮಾಡುವ ಅಜೆಂಡಾ

ಮಾಹಿತಿ ಹಕ್ಕು ಕಾನೂನು ತನ್ನ ಮತ್ತೊಂದು ದೊಡ್ಡ ಸಾಧನೆ ಎನ್ನುವ ಯುಪಿಎ–2 ಸರಕಾರ ಅದನ್ನೂ ಮೊಟಕುಗೊಳಿಸುವ ಪ್ರಯತ್ನವನ್ನು ಮುಂದುವರೆಸುತ್ತಿದೆ. ನವಂಬರ್ 2010ರಲ್ಲಿ ಇಂತಹ ಒಂದು ಪ್ರಯತ್ನವನ್ನು ಅದು ಮಾಡಿತು ಆದರೆ ಮಾಹಿತಿ ಹಕ್ಕು ಕಾರ್ಯಕರ್ತರ ಪ್ರತಿಭಟನೆಗೆ ಯುಪಿಎ ಅಧ್ಯಕ್ಷರ ನೇತೃತ್ವದ 'ರಾಷ್ಟ್ರೀಯ ಸಲಹಾ ಮಂಡಳಿ'(ಎನ್‌ಎಸಿ)ಯ ಸದಸ್ಯರೂ ದನಿಗೂಡಿಸಿದ್ದರಿಂದ ಅದನ್ನು ಕೈಬಿಡಲಾಯಿತು.

ಆದರೆ ಈಗ ಅದು ಮತ್ತೆ ಯುಪಿಎ ಸರಕಾರದ ಅಜೆಂಡಾದಲ್ಲಿ ಬಂದಿದೆ ಎಂದು ತಿಳಿದು ಬಂದಿದೆ. 'ಸಿಬ್ಬಂದಿ ಮತ್ತು ತರಬೇತಿ ಇಲಾಖೆ' ಇದಕ್ಕೆ ಸಂಬಂಧಪಟ್ಟ ಕಡತವನ್ನು ಪ್ರಧಾನ ಮಂತ್ರಿಗಳ ಕಚೇರಿಗೆ ಕಳಿಸಿದೆಯೆಂದು ಲೋಕೇಶ್ ಬತ್ರಾ ಎಂಬವರು ಈ ಕಾನೂನಿನ ಅಡಿಯಲ್ಲಿ ಕೇಳಿರುವ ಪ್ರಶ್ನೆಗೆ ಸಿಕ್ಕ ಉತ್ತರದಿಂದ ತಿಳಿದು ಬಂದಿದೆ. ಈ ವಿಷಯ ರಾಷ್ಟ್ರೀಯ ಸಲಹಾ ಮಂಡಳಿಗೂ ತಿಳಿದಂತಿಲ್ಲ. ಈ ಕಾನೂನಿನ ಅಡಿಯಲ್ಲಿ ಹಾಕುವ ಅರ್ಜಿ ಒಂದೇ ವಿಷಯಕ್ಕೆ ಸಂಬಂಧಪಟ್ಟಿರಬೇಕು, ಅದು 250 ಪದಗಳನ್ನು ಮೀರಿರಬಾರದು ಎಂಬುದು ಈ ತಿದ್ದುಪಡಿಗಳಲ್ಲಿ ಒಂದು ಎಂದು ಹೇಳಲಾಗಿದೆ.

ಬಹುದಿನಗಳ ಮುಷ್ಕರದೆಡೆಗೆ

ಪುಟ 11 ರಿಂದ

ಯಾತನ್ನು ಸ್ವತಃ ಪ್ರಧಾನಿಗಳೇ ನೈವೇಲಿ ಲಿಗ್ನೈಟ್ ಕಾರ್ಪೋರೇಷನ್‌ನ ಗುತ್ತಿಗೆ ಕಾರ್ಮಿಕರ ಮುಷ್ಕರ ಪ್ರತಿನಿಧಿಸಿದ ಸಂಘದ ಆಯೋಗಕ್ಕೆ ತಿಳಿಸಿದ್ದಾರೆ ಎಂಬ ಅಂಶಗಳು ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ತೋರುತ್ತದೆ. ಇಂತಹ ಪರಿಸ್ಥಿತಿಯಲ್ಲಿ 1 ದಿನಗಳ 14 ಸಾರ್ವತ್ರಿಕ ಮುಷ್ಕರಗಳನ್ನು ಯಶಸ್ವಿಯಾಗಿ ನಡೆಸಿರುವ ರಾಷ್ಟ್ರದ ದುಡಿಯುವ ಜನತೆ ಕೇಂದ್ರ-ರಾಜ್ಯ ಸರ್ಕಾರಗಳ ನವ ಉದಾರವಾದಿ ಆರ್ಥಿಕ ನೀತಿಗಳಿಗೆ ತನ್ನ ಪ್ರತಿರೋಧವನ್ನು ತೀವ್ರಗೊಳಿಸಲು ಬಹುದಿನಗಳ ಮುಷ್ಕರಕ್ಕೆ ಮುನ್ನಡೆಯಬೇಕಿದೆ. ಹಿಂದಿನ ಮುಷ್ಕರಗಳಲ್ಲಿ ಕಾರ್ಮಿಕ ವರ್ಗ ತೋರಿದ ಆಸಕ್ತಿ ಭಾಗವಹಿಸುವಿಕೆ & ಐಕ್ಯತೆ ಆಳುವ ವರ್ಗಗಳ ಬಂಡವಾಳ ಪರ ನೀತಿಗಳಿಗೆ ಅಡ್ಡಗೋಡೆಯಾಗಿ ಮಾರ್ಪಟ್ಟಿದೆ.

ರಾಷ್ಟ್ರದ ಆರ್ಥಿಕತೆಯ ಬೆನ್ನೆಲುಬಾದ ಬ್ಯಾಂಕ್, ವಿಮಾ ಕಂಪನಿಗಳ ರಕ್ಷಣೆ

ರಾಷ್ಟ್ರದ ಆರ್ಥಿಕತೆಯ ಬೆನ್ನೆಲುಬಾದ ಬ್ಯಾಂಕ್, ವಿಮಾ ಕಂಪನಿಗಳ ಖಾಸಗೀಕರಣವನ್ನು ಅಂದುಕೊಂಡಂತೆ ಮಾಡಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ವಿಶ್ವದ ಇತರೆಡೆಗಳಲ್ಲಿ ಖಾಸಗಿ ದೈತ್ಯ ಬ್ಯಾಂಕ್ ವಿಮಾ ಕಂಪನಿಗಳು ದಿವಾಳಿಯಾಗಿ ಹಣಕಾಸು ಬಿಕ್ಕಟ್ಟು, ಆರ್ಥಿಕ ಬಿಕ್ಕಟ್ಟಿಗೆ ಇಡೀ ವಿಶ್ವವನ್ನು 2008ರಲ್ಲಿ ದೂಡಿದಾಗ ಅದರ ಪರಿಣಾಮ ನಮ್ಮ ದೇಶದ ಆರ್ಥಿಕತೆಯ ಮೇಲೆ ಇತರ ದೇಶಗಳಷ್ಟು ತೀವ್ರವಾಗಿರಲಿಲ್ಲ. ಅದಕ್ಕೆ ನಮ್ಮ ದೇಶದ ಬಲಿಷ್ಠ ಸಾರ್ವಜನಿಕ ಬ್ಯಾಂಕ್, ವಿಮಾ ಉದ್ದಿಮೆಗಳೇ ಕಾರಣ. ಅವುಗಳನ್ನು ರಕ್ಷಿಸುವಲ್ಲಿನ ಕಳೆದ 14 ಮುಷ್ಕರಗಳ ಪಾತ್ರ ಅವಿಸ್ಮರಣೀಯ ಮತ್ತೊಂದು ಬಿಕ್ಕಟ್ಟಿನ ಮಾತು ಸುತ್ತಲೂ ಕೇಳಿರುವಾಗ ಬಂಡವಾಳಶಾಹಿ ತನ್ನ ಲಾಭಕ್ಕಾಗಿ ಸೃಷ್ಟಿಸುವ ಬಿಕ್ಕಟ್ಟಿನ ವಿರುದ್ಧ ಮೇಲಿನ ಬೇಡಿಕೆಗಳಿಗಾಗಿ ಮುಂಬರುವ 15 ನೇ ಸಾರ್ವತ್ರಿಕ ಮುಷ್ಕರವು 1 ಕ್ಕಿಂತ ಹೆಚ್ಚು ಬಹುದಿನಗಳ ಮುಷ್ಕರವಾಗಿ ಹೊರಹೊಮ್ಮಲಿ ಎಂಬುದು ಸಿಐಟಿಯು ರಾಷ್ಟ್ರವ್ಯಾಪಿ ಪ್ರಚಾರಾಂದೋಲನದ ಒತ್ತಾಸೆಯಾಗಿದೆ.

ಮಲಿನ ಮನಸ್ಸಿನ ಸಾಕ್ಷಿ

"ಕುಸ್ಮಾ ಸಂಘಟನೆ ಅಧ್ಯಕ್ಷ ಶರ್ಮಾ ಅವರು ಸರ್ಕಾರಿ ಶಾಲೆ ಮತ್ತು ಅದರಲ್ಲಿ ಓದುವ ಮಕ್ಕಳನ್ನು ಕೊಳಚೆ ಎಂದು ಕರೆದಿರುವುದು ಅವರ ಮಲಿನ ಮನಸ್ಸನ್ನು, ಕೌರ್ಯವನ್ನು ತೋರಿಸುತ್ತದೆ"

– ಡಾ. ಬರಗೂರು ರಾಮಚಂದ್ರಪ್ಪ,
ಹಿರಿಯ ಸಾಹಿತಿ

ಜೈಲಿಗೆ ಹೋದರೆ.....

"ಹತ್ತು ಹಲವು ಆರೋಪಗಳನ್ನು ಹೊತ್ತಿರುವ ಸಚಿವರ ಪೈಕಿ ಯಾರಾದರೂ ಜೈಲಿಗೆ ಹೋದರೆ, ಅವರಿಂದ ತೆರವಾಗುವ ಸಚಿವ ಸ್ಥಾನವನ್ನಾದರೂ ನನಗೆ ನೀಡಿ"

–ಎಂ.ಪಿ. ಕುಮಾರಸ್ವಾಮಿ, ಮೂಡಿಗೆರೆ ಬಿಜೆಪಿ ಶಾಸಕ

JANASHAKTHI KANNADA VARA PATRIKE JUL 29, 2012 Price : Rs. 5/- RNI No. KARKAN /2006/17926 Posted on every Saturday
Postal Reg. No. RNP/KA/BGS/2078/2010-12 Posted at MBC Bangalore GPO

ಆಗಲೂ ಅದೇ 'ಈಗ'ಲೂ ಅದೇ ನಾ ?





ಒಂದೂರಿನಲ್ಲಿ ಒಂದು ಅಪಾರ್ಟ್‌ಮೆಂಟ್. ಅಲ್ಲಿ ಒಬ್ಬಳು ಹುಡುಗಿ, ಒಬ್ಬ ಹುಡುಗ ಇರುತ್ತಾರೆ. ಅವರು ಪರಸ್ಪರ ಪ್ರೀತಿಸುತ್ತಿರುತ್ತಾರೆ. ಅವರು ಸಿನಿಮಾ ನಾಯಕಿ ಮತ್ತು ನಾಯಕ. ಎಂದಿನಂತೆ ಇಲ್ಲೊಬ್ಬ ಖಳ ನಾಯಕ. ಅವನೊಬ್ಬ ಹೆಣ್ಣು ಬಾಕ. ಅವನ ಕಣ್ಣು ಹುಡುಗಿಯ ಮೇಲೆ. ಖಳ ಹುಡುಗಿಯ ಪ್ರಿಯತಮನನ್ನು ಬಡಿದು ಕುತ್ತಿಗೆ ತುಳಿದು ಕೊಲ್ಲುತ್ತಾನೆ.

ಮುಂದೆ ಹುಡುಗಿಗೆ ಖಳನ ಕಾಟ ಹೆಚ್ಚುತ್ತದೆ. ಅವನು ಹುಡುಗಿಯ ಮೈ ಮೇಲೆ ಕೈ ಹಾಕುತ್ತಾನೆ.... ಅವನು ಬಯಸಿದ ಯಾರನ್ನೂ ಹಾಗೇ ಬಿಡುವವನಲ್ಲ. ಅದರಲ್ಲೂ ತನ್ನನ್ನು ತಿರಸ್ಕರಿಸಿದ ಹುಡುಗಿಯನ್ನು ಅವನು ಬಿಡುವವನೇ ಅಲ್ಲ. ಆದರೆ ಅದೇನೋ ಇಂಥಾ ಪ್ರಸಂಗದ ನಿರ್ಣಾಯಕ ಕ್ಷಣದಲ್ಲಿ ಆತನ ಕಿವಿಯೊಳಗೋ ಅಥವಾ ಮೂಗಿನ ಹೊಳ್ಳೆಯೊಳಗೋ ಸೇರಿಕೊಂಡಿರುವ ನೊಣವೊಂದು ಖಳನ ಯೋಜನೆಯನ್ನೆಲ್ಲಾ ಹಾಳು ಮಾಡಿ ಬಿಡುತ್ತಿದೆ. ಅರರೆ... ಏನಿದು ? ಖಳನಿಗೆ ಆಶ್ಚರ್ಯ !!

....ಎಸ್. ನಿಮ್ಮ ಊಹೆ ಸರಿ. ಪ್ರೇಮಿ ಸತ್ತು ನೊಣವಾಗಿ ಹುಟ್ಟಿದ್ದಾನೆ. ಆಮೇಲೂ ಸಹ ಪ್ರಿಯತಮೆಯ ರಕ್ಷಣೆಯ 'ಕರ್ತವ್ಯ' ಮರೆತಿಲ್ಲ. ಇದು ಕತೆಯ ಅರ್ಧ ಭಾಗ.

ದೊಡ್ಡ ಬಿಸಿನೆಸ್ ಮನ್ ಆಗಿರುವ ಖಳ ನೊಣದ ಕಾಟದಿಂದ ತಪ್ಪಿಸಿಕೊಳ್ಳಲು ಏನೇನು ತಂತ್ರ ಮಾಡುತ್ತಾನೆ, ಪಾಡು ಪಡುತ್ತಾನೆ. ಅದರಲ್ಲಿ ಹೇಗೆ ವಿಫಲನಾಗುತ್ತಾನೆ. ನೊಣ ಹೇಗೆ ಅವನನ್ನು, ಅವನ ವೈಭವೋಪೇತ ಕಛೇರಿಯನ್ನು ಸುಟ್ಟು ಭಸ್ಮ ಮಾಡುತ್ತದೆ ಎಂಬುದು ಚಿತ್ರದ ಇನ್ನರ್ಧ ಭಾಗ.

ಮಾಡಿದರೆ, ಪುಟಾಣಿ ಶಾಲಾ ಮಕ್ಕಳಿಗೆ ಅರ್ಧ ಗಂಟೆಯ ಕಾರ್ಟೂನ್ ಸಿನಿಮಾ ಮಾಡಬಹುದಾದ ಕತೆಯೊಂದನ್ನು ಹೀಗೆ ಸುದೀಪ್(ವಿಲನ್), ನಾನಿ(ನಾಯಕ), ಸಮಂತ(ನಾಯಕಿ)ರಂತಹ ಜೀವಂತ ನಟರನ್ನು ಹಾಕಿಕೊಂಡು ಎರಡೂವರೆ ಗಂಟೆ ಎಳೆದು, ಅಪಾರ ಆಸ್ತಿ ಪಾಸ್ತಿ ಸುಟ್ಟು ಭಸ್ಮ ಮಾಡಿ, ಇಂಥದ್ದೊಂದು ಸಿನಿಮಾ ಮಾಡಬೇಕಾ ? ಅಂತ ಪ್ರಶ್ನೆ ಕೇಳಬಾರದು. ಏಕೆಂದರೆ ಸಿನಿಮಾ ಥಿಯೇಟರ್ ಮುಂದೆ ಕಾಲೇಜ್‌ಗೆ ಬಂಕ್ ಹಾಕಿ ಬಂದ ಕಾಲೇಜು ಹುಡುಗ, ಹುಡುಗಿಯರ ಹಿಂಡು ಹಿಂಡು.... ಟಿಕೆಟ್ ತೆಗೆದುಕೊಳ್ಳಲು ಆಗುತ್ತಿರುವ ನೂಕು ನುಗ್ಗಲು, ಥಿಯೇಟರ್ ಒಳಗೆ ಶಿಳ್ಳೆ ಕೇಕೇಗಳು ನೀವು ಈ ಪ್ರಶ್ನೆ ಎತ್ತಲು ಬಿಡುವುದಿಲ್ಲ.

ಗ್ರಾಫಿಕ್ ಮೂಲಕ ಸೃಷ್ಟಿಸಲಾಗಿರುವ ನೊಣ ಇಲ್ಲಿ ಒಂದು ಮುಖ್ಯ ಪಾತ್ರ. ಹುಡುಗಿ ಒಮ್ಮೆ ಬೂತ ಗನ್ನಡಿಯ ಮೂಲಕ ನೊಣವನ್ನು ನೋಡಿದಾಗ ನೊಣ ...ನಾನು ನಿನ್ನ ಪ್ರಿಯತಮ ....ಹಳೇ ಜನ್ಮದಲ್ಲಿ ನಾನು ಅಪಘಾತದಲ್ಲಿ ಸಾಯಲಿಲ್ಲ.... ನನ್ನನ್ನು ಕೊಲ್ಲಲಾಯಿತು...ಎಂದು ತನ್ನ ಕೈ ಸನ್ನೆಯ ಮೂಲಕ ಹುಡುಗಿಗೆ ಮನವರಿಕೆ ಮಾಡಿಕೊಡುವುದು...'ಯುವ ಪ್ರೇಮಿ'ಗಳು ಒಂದಾಗಿ ಹೊರಗೆಲ್ಲಾ ಸುತ್ತುವುದು, ಆ ಮೇಲೆ ಈ ಪ್ರೇಮಿಗಳು ಹೋಟೆಲ್‌ಗೆ ಹೋಗಿ ಎರಡು ಕಪ್ ಕಾಫಿ ಆರ್ಡರ್ ಮಾಡಿ, ಹುಡುಗಿ ತಾನು ಒಂದು ಕಪ್ ಕುಡಿಯುವುದು, ಇನ್ನೊಂದು ಕಪ್ ಕಾಫಿಯನ್ನು ಸಾಸರ್‌ಗೆ ಹಾಕಿ 'ಪ್ರಿಯತಮ'ನಿಗೆ ಕುಡಿಸುವುದು ಮುಂತಾದ 'ಮನೋಗ್ನ' ದೃಶ್ಯಗಳನ್ನು ನೋಡಬಹುದು.

ನೊಣ ಮೊಟ್ಟೆಯೊಡೆದು ಹೊರ ಬರುವುದು, ಕಾರು, ಜೀಪು, ಬಸ್ ಕೆಳಗೆ ತೂರಿ, ಹಾರಿ ಹೊರಬರುವುದು, ಕಿಟಕಿ, ಪೈಪು ಕಿಂಡಿಯೊಳಗೆ....ಮುಂತಾಗಿ ಇರುಕಿನ ಜಾಗದೊಳಗೆ ಹೋಗಿ ಹೊರಬರುವುದು...ನೊಣ ಹೋದಲ್ಲೆಲ್ಲಾ ನಮ್ಮ ಕಣ್ಣ ಕ್ಯಾಮರಾವೇ ಹಿಂಬಾಲಿಸಿದಂತೆ ಕಾಣಿಸಲು ಶ್ರಮಿಸಿರುವ ತಾಂತ್ರಿಕತೆ ಹಲವರಿಗೆ ವಿಶೇಷ ಆಕರ್ಷಣೆ. ಇಂಥಾ ಕಡೆ ಒಂದಷ್ಟು ಕ್ಯಾಮರಾ ಚಮತ್ಕಾರ, ಗ್ರಾಫಿಕ್ ಕೈಚಳಕಗಳನ್ನು ನೋಡಿ ಖುಷಿಪಡುವವರು ಪಡಬಹುದು.

ಚಿತ್ರದಲ್ಲಿ ಕಾಣುವ ಮನೆ, ಕಚೇರಿಗಳು, ವಾಹನಗಳು ಎಲ್ಲವೂ 'ಅತ್ಯಾಧುನಿಕ'. ಥಳಥಳಿಸುತ್ತವೆ. ಆದರೆ ಕತೆಯು ಹೂರಣ ? ಸ್ಕ್ಯಾಚ್ ವಿಸ್ಕಿ ಬಾಟಲಿಯೊಳಗೆ ಹಳೇ ಹೆಂಡ ತುಂಬಿಕೊಟ್ಟಂತೆ. ಅದೇ 'ಪುನರ್ ಜನ್ಮ'ದ ಹಳಸಲು ಸರಕು. ಹುಡುಗಿ ತನ್ನನ್ನು ಕಾಪಾಡಿಕೊಳ್ಳಲು ಸ್ನೇಹಿತರೋ, ತಂದೆ ತಾಯಿಗಳದ್ದೋ, ಬಂಧುಗಳದ್ದೋ, ಪೋಲೀಸರದ್ದೋ ಸಹಾಯ ಪಡೆದುಕೊಂಡರೆ ಅಂತಹ ಕತೆಯಲ್ಲಿ ಏನು ಸ್ವಾರಸ್ಯ ಇರಲು ಸಾಧ್ಯ ಅಲ್ಲವೇ ?

ಅಂದ ಹಾಗೆ 'ಈಗ' ಅಂದರೆ ತೆಲುಗಿನಲ್ಲಿ 'ನೊಣ' ಅಂತ. ಇದು ತೆಲುಗು ಸಿನಿಮಾ. ಕನ್ನಡದ ಜನಪ್ರಿಯ ನಟ ಸುದೀಪ್ ನಾಯಕ. ಅವರ ಅಭಿನಯ ಕೊಂಚ ಸುಧಾರಿಸಿರುವುದಕ್ಕೆ ಇಲ್ಲಿ ಸಾಕ್ಷಿ ಇದೆ. ನಾಯಕಿ. ಕಿವಿಯ ತಮಟೆ ಹರಿದು ಹೋಗುವಂತಹ 'ಸೌಂಡ್ ಎಫೆಕ್ಟ್' ಬಗೆಗೆ ಸಿನಿಮಾ ಥಿಯೇಟರ್ ಮಾಲಿಕರನ್ನು ಹೊಣೆ ಮಾಡಬೇಕೋ ಅಥವಾ ಸಿನಿಮಾ ನಿರ್ಮಾಪಕ ರಾಜಮೌಳಿ ಅವರನ್ನೋ ಗೊತ್ತಾಗಲಿಲ್ಲ.

ಕವನ

ಭೂಮಿ ತಾಯಿಯ ಚೊಚ್ಚಲಮಗ

ದ.ರಾ.ಬೇಂದ್ರೆ

ಭೂಮಿ ತಾಯಿಯಾ
ಚೊಚ್ಚಿಲ ಮಗನನು
ಕಣ್ತೆರೆದೊಮ್ಮೆ
ನೋಡಿಹರೇನು?
ಮುಗಿಲೆಂಬುವದು
ಕಿಸಿದಿತು ಹಲ್ಲು!
ಬಂದಾ ಬೆಳೆಯು
ಮಿಡಿಚಿಯ ಮೇವು:
ಬಿತ್ತಿದ್ದಾಯಿತು
ಉತ್ತಿಹ ಮಣ್ಣು!
ದಿನವೂ ಸಂಜೆಗೆ
ಬೆವರಿನ ಜಳಕ,
ಉಸಿರಿನ ಕೂಳಿಗೆ
ಕಂಬನಿ ನೀರು!
ಹೊಟ್ಟೆಯು ಹತ್ತಿತು
ಬೆನ್ನಿನ ಬೆನ್ನು!
ಎದೆಯ ಗೂಡಿನೊಳು
ಚಿಂತೆಯ ಗೂಗಿ!
ಮಿದುಳಿನ ಮೂಲೆಗೆ
ಲೊಟ ಲೊಟ ಹಲ್ಲಿ
ಮೋರೆಯು ಸಾವನು
ಅಣಕಿಸುತಿಹುದು
ಕೊರಳಿಗೆ ಹತ್ತಿದೆ
ಸಾಲದ ಶೂಲ!

ಆದರು ಬರದೋ
ಯಮನಿಗೆ ಕರುಣ
ಉಸಿರಿಗೆ ಒಮ್ಮೆ
ಜನನಾ ಮರಣ
ನರಗಳ ನೂಲಿನ
ಪರೆಪರೆ ಚೀಲಾ
ತೆರೆ ತೆರೆಯಾಗಿದೆ
ಜಿರಿಜಿರಿಯಾಗಿದೆ;
ಆದರೊಳಗೊಂದು
ಎಲುವಿನ ಬಲೆಯು
ಟುಕು ಟುಕು ಡುಗು ಡುಗು
ಉಲಿಯುವ ನರಳುವ
ಜೀವದ ಜಂತು
ಹೊರಳುತ ಹೊರಳುತ;
ಜನುಮವೆಂಬುವಾ
ಕತ್ತಲೆಯಲ್ಲಿ
ಬಿದ್ದಿದೆ ಒಳಗೆ
ಹೇಗೋ ಬಂದು!
ಸಾವಿನ ಬೆಳಕದು
ಕಾಣುವುದೆಂದು?



JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH